ವಿಶ್ವ ಕೊಂಕಣಿ ಸಾಹಿತ್ಯ - 5

ಸಾವಿರ

ಖ್ಯಾತ ಕೊಂಕಣಿ ಕವಿ ಶ್ರೀ ಬಾಕಿಬಾಬ್ ಬೋರಕರ್
ಅವರ ಕವಿತೆಗಳ ಕನ್ನಡ ಭಾವಾನುವಾದ



ಶಕುಂತಲಾ ಆರ್. ಕಿಣಿ



विश्व कोंकणी केंद्र

कोंकणी भास आनी संस्कृती प्रतिष्टान
कोंकणी गांव, शक्ती नगर, मंगळूर - 575 016

ज्ञानपीठ पुरस्कार सम्मानित, विश्व कोंकणी साहित्य रत्न,

पद्मभूषण डा. रवींद्र केळेकर

स्मरण पुस्तक वितरण येवजण

हें पुस्तकाचे दानीः **श्री टी. वी. मोहनदास पै**




This Book is donated by **Shri T.V. Mohandas Pai**, under Jnanpeeth Award Winner, Vishwa Konkani Sahitya Ratn,

Padmabhushan Dr. Ravindra Kelekar
Smaran Pustak Vitaran Project

WORLD KONKANI CENTRE

KONKANI LANGUAGE AND CULTURAL FOUNDATION
KONKANI GAON, SHAKTI NAGAR, MANGALORE - 575016



ಕೊಂಕಣಿ ಭಾಷೆಯ ಮೊದಲ ಶಿಲಾಶಾಸನ - ಕ್ರಿ.ಶ. 981ನೇ ಇಸವಿಯಲ್ಲಿ ಸ್ಥಾಪಿಸಲಾದ ಶ್ರವಣ ಬೆಳಗೊಳದ ಗೋಮಟೇಶ್ವರ ವಿಗ್ರಹದ ಪಾದಗಳ ಬಳಿ ಕೊರೆಯಲಾಗಿರುವ "ಶ್ರೀ ಚಾವುಂಡರಾಜೇ ಕರವಿಯಲೆ ಮತ್ತು ಶ್ರೀ ಗಂಗರಾಜೆ ಸುತ್ತಾಲೆ ಕರವಿಯಲೆ" (ಶ್ರೀ ಚಾವುಂಡರಾಜನು ಮಾಡಿಸಿದ್ದು. ಶ್ರೀ ಗಂಗರಾಜನು ಸುತ್ತಲಿನದನ್ನು ಮಾಡಿಸಿದ್ದು.)

ನೂಪುರ

ಕೊಂಕಣಿಯ ಮಹಾನ್ ಕವಿ ಶ್ರೀ ಬಾಕಿಬಾಬ ಬೋರಕರ
ಅವರ ಆಯ್ದ ಕವಿತೆಗಳ ಕನ್ನಡ ಭಾವಾನುವಾದ

ಶ್ರೀಮತಿ ಶಕುಂತಲಾ ಆರ್. ಕಿಣಿ

ಕೊಂಕಣಿ ಭಾಸ್ ಆನಿ ಸಂಸ್ಕೃತಿ ಪ್ರತಿಷ್ಠಾನ
ವಿಶ್ವ ಕೊಂಕಣಿ ಕೇಂದ್ರ,
ಕೊಂಕಣಿ ಗಾಂವ್, ಶಕ್ತಿನಗರ, ಮಂಗಳೂರು

"**Noopura**" a collection of Konkani Poems of Poet Bakibab Borkar translated into Kannada by Smt. Shakuntala Kini. Published by Konkani Language and Cultural Foundation (R) World Konkani Centre, Mangalore - 575 016

Pages: 86+(28)

First Edition : 2010

Copies : 1000

ಪ್ರಕಾಶಕರು:

ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ (ರಿ)

ವಿಶ್ವ ಕೊಂಕಣಿ ಕೇಂದ್ರ, ಕೊಂಕಣಿ ಗಾಂವ್, ಶಕ್ತಿನಗರ, ಮಂಗಳೂರು-575 016

ಬೆಲೆ:

ರೂ.100

ಕಲೆ:

ಶ್ರೀ ದಿನೇಶ ಹೊಳ್ಳ


ಮುದ್ರಣ:

ಕೋಡ್‌ವರ್ಡ್ ಪ್ರೊಸೆಸ್ ಅಂಡ್ ಪ್ರಿಂಟರ್ಸ್

ಮಂಗಳೂರು

ಅನುದಾನ:

ಶ್ರೀ ರಾಮದಾಸ ಕಾಮತ ಯು. ಬೆಂಗಳೂರು



ದಿ। ಬಾಳಕೃಷ್ಣ ಭಗವಂತ ವರ್ದೆ ಬೋರಕರ
30.11.1910 - 08.07.1984

ಮುನ್ನುಡಿ

ಕವಿವರ್ಯ ಬಾಕಿಬಾಬ ಬೋರಕರ ಉರ್ಫ್ ಬಾಲಕೃಷ್ಣ ಭಗವಂತ ಬೋರಕರ ಕೊಂಕಣಿ ಭಾಷೆಯ ಅತ್ಯಂತ ಮಹತ್ವದ ಕವಿ, ಸಾಹಿತಿ, ನಿಬಂಧಕಾರ, ಕತೆಗಾರ, ಕಾದಂಬರಿಕಾರ ಮತ್ತು ಪತ್ರಿಕೋದ್ಯಮಿಯಾಗಿ ಪ್ರಸಿದ್ಧರು. ಅದಕ್ಕಿಂತಲೂ ಕೊಂಕಣಿ ಕುಳಾರ ಗೋವೆಯ ಸ್ವಾತಂತ್ರ ಚಳುವಳದಲ್ಲಿ ಅದರ ಬಳಿಕ ಗೋವಾ ಭಾರತದ ಪ್ರತ್ಯೇಕ ಘಟಕ ರಾಜ್ಯವಾಗಿ ಅಂದರೆ ಮಹಾರಾಷ್ಟ್ರ ರಾಜ್ಯದಲ್ಲಿ ಗೋವಾ ಲೀನವಾಗದೇ ಉಳಿಯಬೇಕು, ಕೊಂಕಣಿ ಗೋವಾರಾಜ್ಯದ ರಾಜ್ಯಭಾಷೆಯಾಗಿ ಉಳಿಯಬೇಕು ಮುಂತಾದ ಪ್ರಾಮುಖ್ಯ ವಿಷಯಗಳು ಮುಂದೆ ಬಂದಾಗ ಆ ಉದ್ದೇಶಗಳ ಸಾಧನೆಗಳಿಗಾಗಿ ಲೇಖಕ, ಕವಿ ಮಂಚೂಣಿಯ ಭಾಷಣಕಾರರಾಗಿ ಅಹೋರಾತ್ರಿ ದುಡಿದವರು. ಅದರಿಂದಾಗಿ ಕೊಂಕಣಿಯ ಮಟ್ಟಿಗೆ ವಂದ್ಯಮಾನ್ಯರು.

ಮಾತೃಭಾಷೆ ಕೊಂಕಣಿಗಿಂತಲೂ ಶಾಲೆಗಳಲ್ಲಿ ಕಲಿತ ಮರಾಠಿಯಲ್ಲಿಯೂ ಇನ್ನತಮಟ್ಟದ ಕವಿ ಸಾಹಿತಿಯಾಗಿ ಮೆರೆದವರು. ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗಾದಿಗೆ ಹತ್ತಿರ ಬಂದವರಾದರೂ ಕೊಂಕಣಿ ಭಾಷೆಯ ಮೇಲಿನ ಅಭಿಮಾನದಿಂದ ಗೋವಾ ಸ್ವತಂತ್ರ ರಾಜ್ಯ ಘಟಕವಾಗಿ ಉಳಿಯಬೇಕೆಂಬ ನಿಲುವಿನಿಂದಾಗಿ ಮರಾಠಿಗಳ ಕೆಂಗಣ್ಣಿನ ಉರಿಗೆ ಬಲಿಯಾದರೂ ಚಿಂತಿಲ್ಲವೆಂದು ಸಮ್ಮೇಳನದ ಅಧ್ಯಕ್ಷ ಪದವನ್ನು ತಿರಸ್ಕರಿಸಿ ಬಲಿದಾನ ಮಾಡಿದ ಮಹಾನ ವ್ಯಕ್ತಿ ಬಾಕಿಬಾಬ ಬೋರಕರ.

2010ರಲ್ಲಿ ಅವರ ಜನ್ಮಶತಾಬ್ದಿ ವರ್ಷವಾಗಿ ಭಾರತ ದೇಶದ ಹಲವೆಡೆ ಸಮಾರಂಭಗಳನ್ನು ಆಚರಿಸಲಾಗುತ್ತದೆ. 'ಬಾಕಿಬಾಬ ಶತಾಬ್ದಿ ಸ್ಮರಣ ಸಮಾರಂಭ'ವನ್ನು ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ವಿಶೇಷವಾಗಿ ಆಚರಿಸಲು ನಿರ್ಧರಿಸಲಾಗಿದೆ. ಬಾಕಿಬಾಬರ ಜನ್ಮಶತಾಬ್ದಿಯ ಅಂಗವಾಗಿ ಬಾಕಿಬಾಬರ ಕೊಂಕಣಿ ಕವಿತೆಗಳ ಕನ್ನಡ ಅನುವಾದವನ್ನು ಸುಂದರವಾಗಿ ಶ್ರೀಮತಿ ಶಕುಂತಲಾ ಕಿಣಿಯವರು ಮಾಡಿಕೊಟ್ಟಿದ್ದಾರೆ. ಅವರಿಗೆ ಕೊಂಕಣಿ ಪ್ರತಿಷ್ಠಾನ ಋಣಿಯಾಗಿದೆ.

ಅಲ್ಲದೆ ಚಿತ್ರಕಲಾವಿದ ಬಂಟವಾಳ ಅಮ್ಟಾಡಿಯ ದಿನೇಶ ಹೊಳ್ಳರವರು ಅಂದವಾಗಿ ಮುಖ ಪುಟವನ್ನೂ ಮತ್ತು ಒಳಪುಟಗಳ ರೇಖಾಚಿತ್ರಗಳನ್ನೂ ರಚಿಸಿಕೊಟ್ಟಿದ್ದಾರೆ. ಕೋಡ್‌ವರ್ಡ್ ಪ್ರೋಸೆಸ್ ಮತ್ತು ಪ್ರಿಂಟರ್ಸ್ ಇವರು ಸುಂದರವಾಗಿ 'ನೂಪುರ'ವನ್ನು ಛಾಪಿಸಿರುತ್ತಾರೆ. ಅಲ್ಲದೇ ಕೊಂಕಣಿ ಸಾಹಿತ್ಯದ ಮೇಲೆ ತುಂಬಾ ಆದರವನ್ನು ಹೊಂದಿರುವ ಬೆಂಗಳೂರಿನ ಶ್ರೀ ಯು. ರಾಮದಾಸ ಕಾಮತರವರ ಅನುದಾನದಿಂದ ಈ ಪುಸ್ತಕವು ಪ್ರಕಾಶನಗೊಂಡಿದೆ. ಅವರಿಗೆ ವಿಶ್ವ ಕೊಂಕಣಿ ಕೇಂದ್ರದ ಪರವಾಗಿ ದೇವು ಬರೆಂ ಕೊರೊ.

ವಿಶ್ವ ಕೊಂಕಣಿ ಕೇಂದ್ರ
13.06.2010

ಬಸ್ತಿ ವಾಮನ ಶೆಣೈ
ಅಧ್ಯಕ್ಷ
ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ

ನೂಪುರ ನಿನಾದವು ಕಿಂಕಿಣಿಸುವ ಮುನ್ನ

ಬಾಕಿ ಬಾಬ್ ಬೋರ್ಕರ್ ಎಂಬ ಹೆಸರನ್ನು ನಾನು ಮೊದಲು ಕೇಳಿದ್ದು 1981ರಲ್ಲಿ ನಾನು ಮಂಗಳೂರು ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿ ಸೇವೆಗೆ ನಿಯುಕ್ತಿಗೊಂಡ ಮೇಲೆ. ಆಗ ಆಕಾಶವಾಣಿಯ ಪಣಜಿ (ಗೋವೆ) ಮತ್ತು ಮುಂಬೈ ಕೇಂದ್ರಗಳಿಂದ ನಮ್ಮ ನಿಲಯವು ತರಿಸಿಕೊಳ್ಳುತ್ತಿದ್ದ ಕೊಂಕಣಿ ಹಾಡಿನ ಧ್ವನಿಸುರುಳಿಗಳಲ್ಲಿ (tape) ಬಾಕಿಬಾಬ್ ಅವರ ಗೀತೆಗಳು ಹೆಚ್ಚಾಗಿ ಇರುತ್ತಿದ್ದವು. ಅವನ್ನು ಉದ್ಘೋಷಿಸಿ ನಾನು ಪ್ರಸಾರ ಮಾಡುವಾಗಲೆಲ್ಲ ಈ ಕವಿ ಯಾರಿರಬಹುದು ಎಂಬ ಅರಿವೇ ಇಲ್ಲದೆ ಯಾಂತ್ರಿಕವಾಗಿ ಆ ಕೆಲಸ ಮಾಡುತ್ತಿದ್ದೆನಾದರೂ ಈ ಹಾಡುಗಳ ಗುಂಗು ನನ್ನನ್ನು ಯಾವಾಗಲೂ ಕಾಡುತ್ತಿತ್ತು. 'ತ್ಯಾ ದೀಸಾ ವಜಾ ಕರ್ದೇನ್', 'ಉಗಡತುಜೀ ನಯನದಳಾ', 'ವಾಜ್‌ತಾ ತುರ್ಘು ಜೀನ್', 'ವ್ಹರ್ದೇ ಅಲ್ತಡಿ ಲ್ಹಾಯ್', 'ಏಕುಟುಕ್ಯಾನ್ ಎವ್ಹೆಲೆ', 'ತುಜ್ಯಾ ಪಾಯಾರ್ ಹಾವೆ ಘಾಲೀ ಉರ್ದೀ', 'ಹೋ ನಂದಾಲೋ ಪೋರ್' 'ಶಾಂತ್ ದಾಂತ್ ವಜ್ರಕಾಂತ್', 'ಜಾಗರೇ ರಘುರಾಯ ಕುಂವರಾ', 'ಶ್ರಾಪ್ ದೀಪ್‌ನಕಾ ಜಗಾಕ್' - ಹೀಗೆ ಹಲವಾರು ಹಾಡುಗಳು ಪ್ರಸಿದ್ಧ ಗಾಯಕರಾದ ಜಿತೇಂದ್ರ ಅಭಿಷೇಕಿ, ಇಂದುಮತಿ ಕಿಲ್ವಾಡಿ, ರಾಮದಾಸ್ ಕಾಮತ್, ಪ್ರಭಾಕರ್ ಕಾರೇಕರ್, ಶಿಶಾ ನಿಗಳ್ಯಾ ಮುಂತಾದವರ ಸಿರಿಕಂಠದಿಂದ ಮೊಳಗುವಾಗ ಅಪ್ಯಾಯಮಾನವೆನಿಸುತ್ತಿದ್ದವು, ಯಾವುದೋ ಅವ್ಯಕ್ತ ನೋವನ್ನು, ಆನಂದವನ್ನು ಅವು ಮೀಟುತ್ತಿದ್ದವು. ಕಾಲಕ್ರಮೇಣ ನಮ್ಮದೇ ನಿಲಯದ ಹಾಡುಗಾರರ ಸಂಖ್ಯೆ ಹೆಚ್ಚಾದಾಗ ನಾವು ಅನ್ಯ ಕೇಂದ್ರಗಳಿಂದ ಹಾಡುಗಳನ್ನು ತರಿಸಿ ಪ್ರಸಾರ ಮಾಡುವ ಪದ್ಧತಿ ಕಡಿಮೆಯಾಯಿತು. ಕ್ರಮೇಣ ಸಿ.ಡಿ, ಕಂಪ್ಯೂಟರೀಕೃತ ವ್ಯವಸ್ಥೆಗಳು ಬಂದ ಮೇಲೆ ಹಳೆಯ ಧ್ವನಿಸುರುಳಿಗಳೂ ಮೂಲೆಗುಂಪಾದವು, ಜತೆಗೆ ಬಾಕಿಬಾಬ್ ಅವರ ಹಾಡುಗಳ ಗುಂಗು ಕೂಡಾ.

ಆದರೆ ಅದಕ್ಕೆ ಮತ್ತೆ ಜೀವ ಬಂದುದು 2009ರ ನವೆಂಬರ ತಿಂಗಳಲ್ಲಿ ಶಕ್ತಿನಗರದ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದಿಂದ ನನಗೊಂದು ಪತ್ರಬಂದಾಗ, ಕವಿ ಬಾಕಿಬಾಬ್ ಬೋರ್ಕರ್ ಅವರ ಜನ್ಮಶತಾಬ್ಧಿಯ ಪ್ರಯುಕ್ತ 2010ರಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು, ಚಿಂತಿಸಿ ಅಭಿಪ್ರಾಯ ತಿಳಿಸಲು ಒಂದು ಸಭೆಯನ್ನು ವಿಶ್ವಕೊಂಕಣಿ ಕೇಂದ್ರದಲ್ಲಿ ಕರೆದಿದ್ದರು. ಆ ಸಭೆಯಲ್ಲಿ ಬಾಕಿಬಾಬ್ ಅವರ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸುವ ಮಾತು ಬಂದಾಗ ನಾನದನ್ನು ಮಾಡುವೆನೆಂದು ಅಚಾನಕ್

ಮಾತು ಕೊಟ್ಟು ಬಿಟ್ಟೆ. ನನ್ನ ಬಳಿ ಬಾಕಿಬಾಬ್ ಅವರ ಕವನ ಸಂಗ್ರಹಗಳಿರಲಿಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ ಕೇಳಿದ್ದ ಅವರ ಕೇವಲ ಕೆಲವು ಹಾಡುಗಳ ನೆನಪು ಬಿಟ್ಟರೆ ಉಳಿದ ಯಾವ ಪರಿಕರಗಳೂ ನನ್ನ ಬಳಿ ಇರಲಿಲ್ಲ. ಬಾಕಿಬಾಬ್ ಅವರ ಕವನ ಸಂಗ್ರಹಗಳನ್ನು ದೊರಕಿಸಿಕೊಡುವುದಾಗಿ ಶ್ರೀ ಬಸ್ತಿ ವಾಮನಶೆಣ್ಯೈ ಅವರು ಹೇಳಿದರೂ ಬಹುಶಃ ಈಗ ಆ ಪುಸ್ತಕಗಳ ಪ್ರತಿಗಳು ಮುಗಿದು ಹೋಗಿರಬಹುದಾದುದರಿಂದ ಅವರಿಗೂ ಅವು ಸಿಕ್ಕಿರಲಿಲ್ಲ. ಹೀಗೇ ಬಾಕಿಬಾಬ್ ಅವರ ಕವನ ಸಂಗ್ರಹಗಳ ಹುಡುಕಾಟದಲ್ಲೇ ತಿಂಗಳುಗಳು ಕಳೆದುವು. ಕೊನೆಗೆ 2010ರ ಜನವರಿ ತಿಂಗಳಲ್ಲಿ ಕವಿ ಶ್ರೀ ಮೆಲ್ವಿನ್ ರೊಡ್ರಿಗಸ್ ಅವರು ತಮ್ಮ ಮನೆಗೆ ನನ್ನನ್ನು ಕರೆದು ತಾವು ಜತನದಿಂದ ಉಳಿಸಿಕೊಂಡಿದ್ದ ಬಹಳ ಜೀರ್ಣವಾದ 'ಪಾಂಯ್ ಜಣಾ'ದ ಪ್ರತಿ ಹಾಗೂ 'ಸಾಸಾಯ್' ಕವನ ಸಂಗ್ರಹದ ಫೋಟೋ ಪ್ರತಿಯನ್ನು ನನಗೆ ಒದಗಿಸಿ ಉಪಕಾರ ಮಾಡಿದರು. ಇನ್ನೇನು ಇಂದಿನಿಂದಲೇ ಕೆಲಸ ಆರಂಭ ಎಂದು ಧಾರ್ಷ್ಟ್ಯದಿಂದ ಪುಸ್ತಕ ಬಿಡಿಸಿ ನೋಡಿದರೆ ಒಂದಕ್ಷರವೂ ಅರ್ಥವಾಗುತ್ತಿಲ್ಲ. ಪುನಃ ಶ್ರೀ ಬಸ್ತಿ ವಾಮನಶೆಣ್ಯೈ ಅವರಿಗೇ ಶರಣು ಹೋದೆ. ಅವರು ನನ್ನಷ್ಟೇ ಗಾತ್ರದ ಕೊಂಕ್ಣಿ ಶಬ್ದಕೋಶವೊಂದನ್ನು ಕೇಂದ್ರದಿಂದ ಕಳುಹಿಸಿಕೊಟ್ಟರು. ಈ ನಡುವೆ ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯಿಂದ ಒಂದೆರಡು ಶಬ್ದಕೋಶಗಳನ್ನು ಪಡೆದುಕೊಂಡು ಪುಸ್ತಕದ ಒಳಗೆ ಪ್ರವೇಶಿಸಲು ಪ್ರಯತ್ನಿಸಿದೆ. ಆಶ್ಚರ್ಯವೆಂದರೆ ಬಾಕಿಬಾಬ್ ಅವರು ಬಳಸಿದ ಅನೇಕ ಪದಗಳು ಶಬ್ದಕೋಶಗಳಲ್ಲೂ ಇರಲಿಲ್ಲ. ಇದರಿಂದ ನಾನು ಮತ್ತಷ್ಟು ಅಧೀರಳಾದೆ. ಕೊನೆಗೆ ಈ ಎಲ್ಲ ತೊಡಕುಗಳನ್ನು ನಿವಾರಿಸಲು, ಬಾಕಿಬಾಬ್ ಅವರ ಒಳಗೆ ಪ್ರವೇಶಿಸಲು ನಾನು ಗೋವೆಗೇ ಹೋಗಬೇಕಾಯಿತು. ಕುಟುಂಬ ಯಾತ್ರೆಗೆಂದು ಗೋವೆಗೆ ಹೋದ ನಾನು ಅಲ್ಲಿಯ ಸರಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ, ಈಗ ಸಂಶೋಧನಾ ಕಾರ್ಯದಲ್ಲಿ ನಿರತರಾಗಿರುವ ಶ್ರೀ ರಾಜಯ್ ಪವಾರ್ ಅವರನ್ನು ಸಂಪರ್ಕಿಸಿ ನನ್ನ ತೊಡಕನ್ನು ತೋಡಿಕೊಂಡೆ. ಶ್ರೀ ಪವಾರ್ ಅವರು ಅಂದು ತನ್ನ ಮಗುವಿನ ಹುಟ್ಟುಹಬ್ಬದ ದಿನವಾದರೂ ಎರಡು ಗಂಟೆಗಳ ಸಮಯವನ್ನು ಬಿಡುವು ಮಾಡಿಕೊಂಡು ಬಾಕಿಬಾಬ್ ಅವರ ಬರವಣಿಗೆಯ ಶೈಲಿ, ಪದಗಳನ್ನು ಅವರು ಟಂಕಿಸುವ ವಿಶಿಷ್ಟ ವಿಧಾನ, ಅವರ ಚಿಂತನೆಯ ಓಘ ಇವೆಲ್ಲವನ್ನು ಸುಲಲಿತವಾಗಿ ವಿವರಿಸುತ್ತಿದ್ದಂತೆ ಬಾಕಿಬಾಬ್ ಅವರ ಕಾವ್ಯಪ್ರಪಂಚದ ಬೀಗದ ಕೈ ನನಗೆ ದೊರೆತಂತಾಯಿತು. ಆ ಬಳಿಕವೂ ನಾನು ಶ್ರೀ ಪವಾರ್ ಅವರನ್ನು ದೂರವಾಣಿಯಲ್ಲಿ ಸಂಪರ್ಕಿಸುತ್ತಾ ನನ್ನ ತೊಡಕನ್ನು ನಿವಾರಿಸಿಕೊಂಡಿದ್ದೇನೆ. ಇದೇ ರೀತಿ ನನಗೆ ನೆರವಾದ ಇನ್ನೋರ್ವರು ಖ್ಯಾತ ಕೊಂಕಣಿ ನಾಟಕಕಾರ, ಸಾಹಿತಿ, ಗೋವಾ ಕೊಂಕಣಿ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಪುಂಡಲೀಕ ನಾರಾಯಣ ನ್ಯಾಕ್ ಅವರು. ದೂರದ ಗೋವೆಯಲ್ಲಿದ್ದರೂ ಕೊಂಕಣಿಯೆಂಬ ಒಂದೇ

ಕರುಳಬಳ್ಳಿಯಿಂದ ಬಂಧಿತರಾದ ಈ ಬಂಧುಗಳ ನೆರವನ್ನು ಸದಾ ಸ್ಮರಿಸುತ್ತೇನೆ.

ನನ್ನ ಕಛೇರಿಯ ಕೆಲಸ, ಗೃಹಕೃತ್ಯ, ನೆಂಟರಿಷ್ಟರು, ಹಬ್ಬಹರಿದಿನ, ಮದುವೆ ಮುಂಜಿ, ಪ್ರವಾಸ, ಪ್ರವಾಸ, ಪ್ರಯಾಣ ಈ ತೀರದ ಜಂಜಡಗಳ ನಡುವೆ ಸದಾ ಬಾಕಿಬಾಬ್ ನನ್ನ ಜೊತೆಗೇ ನನ್ನ ಒಳಗೇ ಇದ್ದರು. ನಿದ್ದೆಯಲ್ಲೂ ಕನಸಾಗಿ ಕಾಡುತ್ತಾ, ಮನಸಲ್ಲಿ ಹಾಡಾಗಿ ಗುನುಗುತ್ತಾ ಬಾಕಿಬಾಬ್ ನನ್ನನ್ನು ಆವರಿಸಿಬಿಟ್ಟರು.

ಅಂತೂ ಇಂತೂ ಕೆಲಸ ಮುಗಿಸಿದೆ. ಬಾಕಿಬಾಬ್ ಅವರನ್ನು ಭಾಷಾಂತರಿಸುವ ಕೆಲಸ ಬಹುಕಷ್ಟದ ಕೆಲಸ ಎಂದು ಎಲ್ಲರೂ ಒಪ್ಪಿಕೊಂಡರೂ ಒಮ್ಮೆ ಒಳಗೆ ಪ್ರವೇಶ ಬಳಿಕ ನನಗದು ಕಷ್ಟವೆನಿಸಲಿಲ್ಲ. ಆದರೆ ನಾನು ಬೆರಗಾದದ್ದು ಕೊಂಕಣಿಯ ಶಬ್ದಸಂಪತ್ತಿನ ಅಗಾಧತೆಗೆ. ನಾವು ಕನ್ನಡ ಕರಾವಳಿಯ ಕೊಂಕಣಿಗರು ಗೋವೆಯಿಂದಲೇ ಬಂದವರಾದರೂ, ಇಷ್ಟೆಲ್ಲ ಪದಸಂಪತ್ತನ್ನು ನಾವು ನಮ್ಮ ಜೊತೆಗೆ ತರಲಿಲ್ಲವೆನಿಸುತ್ತದೆ. ಕೊಂಕಣಿಯ ಒಂದೊಂದು ಪುಟ್ಟ ಪದದಲ್ಲಿ ಹುದುಗಿದ ಅಪಾರ ಅರ್ಥವನ್ನು ಕನ್ನಡದ ಒಂದೇ ಪದದಲ್ಲಿ ಹೇಳಲು ಶಕ್ಯವಾಗದಷ್ಟು ಕೊಂಕಣಿಯ ಪದಸಂಪತ್ತು ಸಮೃದ್ಧವಾಗಿದೆ. ಮತ್ತೆ ಕೆಲವೊಮ್ಮೆ ಪೋರ್ಚ್‌ಗೀಸ್, ಮರಾಠಿ ಮುಂತಾದ ಭಾಷೆಗಳ ಪ್ರಭಾವದಿಂದ ಹುಟ್ಟಿಕೊಂಡ ಪದಗಳನ್ನು ಅಲ್ಲಿಯ ಪ್ರಾದೇಶಿಕ ಸಂದರ್ಭದಲ್ಲಿ ಮಾತ್ರ ಅರ್ಥೈಸಬಹುದು. ಅಲ್ಲಿಯ ಹಣ್ಣು, ಹೂ, ಮರ, ಕಾಡು ಮೋಡಿನಿಂದ ಸ್ಫೂರ್ತವಾದ ಬಾಕಿಬಾಬ್ ಅವರ ಕೆಲವು ಕವನಗಳು ಕನ್ನಡದ ಸಂದರ್ಭದಲ್ಲಿ ಈ ಮಣ್ಣಿಗೆ ಹೊಸತೆನಿಸಬಹುದಾದರೂ, ಒಂದೇ ಕೊಂಕ್ಣಿ ತಾಯಿ ಬೇರಿನಿಂದ ಬಂದ ನಮಗವು ಅಪರಿಚಿತವೆನಿಸುವುದಿಲ್ಲ.

ಬಾಕಿಬಾಬ್ ಅವರ ಕವನಗಳಲ್ಲಿರುವ ಪ್ರಾಸಗಳಿಂದಾಗಿಯೋ ಆ ಕವಿತೆಗಳಿಗೊಂದು ಅಲೌಕಿಕ ಕಾಂತಿ ಬಂದಂತಿದೆ. ಅವು ಕೇವಲ ಪ್ರಾಸಕ್ಕಾಗಿ ಪ್ರಾಸ ಎಂಬರ್ಥದಲ್ಲಿ ಬಂದವುಗಳಲ್ಲ. ಅಥವಾ ಹೇಗೋ ಏನೋ ಜೋಡಿಸಿದುದೂ ಅಲ್ಲ. ಅದು ತಾನೇ ತಾನಾಗಿ ಗಿಡದಲ್ಲರಳಿದ ಹೂವಂತೆ ಸಹಜ ಸುಂದರವಾಗಿ ಮೂಡಿದ್ದು, ಆದರೆ ಕನ್ನಡ ಭಾಷಾನುವಾದದ ಸಂದರ್ಭದಲ್ಲಿ ಈ ತೆರನಾದ ಪ್ರಾಸವನ್ನು ತರುವುದು ಕಷ್ಟದ ಕೆಲಸವಾದರೂ ಸಾಧ್ಯವಾದ ಕಡೆಗಳಲ್ಲಿ ಪ್ರಯತ್ನಿಸಿದ್ದೇನೆ.

ಅವರ ಆಧ್ಯಾತ್ಮಿಕ, ಪ್ರೇಮ, ದಾಂಪತ್ಯ, ನಾಡು, ನುಡಿಯ ಭಕ್ತಿ, ಶಿಶುಸಂಬಂಧೀ ಗೀತೆಗಳು - ಹೀಗೆ ಒಂದೊಂದು ವರ್ಗಕ್ಕೆ ಸೇರಿದ ಕವಿತೆಗಳೂ

ತಮ್ಮಷ್ಟಕ್ಕೇ ತಾವು ವಿಶಿಷ್ಟಗುಣವುಳ್ಳವು. ಯಥಾವತ್ ಅಲ್ಲದಿದ್ದರೂ, ಅವುಗಳ ಭಾವವನ್ನು ಕನ್ನಡಿಸುವ ಪ್ರಯತ್ನ ಮಾಡಿದ್ದೇನೆ.

ಈ ನನ್ನ ಪ್ರಯತ್ನದಲ್ಲಿ ನನಗೆ ನೆರವು ನೀಡಿದ ಶ್ರೀ ಬಸ್ತಿ ವಾಮನಶೆಣ್ಯೆ, ಶ್ರೀ ಮೆಲ್ವಿನ್ ರೊಡ್ರಿಗಸ್, ಶ್ರೀ ರಾಜಯ್‌ಪವಾರ್, ಶ್ರೀ ಪುಂಡಲೀಕ ನಾರಾಯಣ ನ್ಯಾಕ್, ಡಾ। ತಾನಾಜಿ ಹಲರ್ನ್‌ಕರ್, ಗುರುಬಾಳಿಗಾ ಇವರ ನೆರವು, ಒತ್ತಾಸೆಗಳನ್ನು ಕೃತಜ್ಞತಾ ಪೂರ್ವಕ ನೆನೆಯುತ್ತೇನೆ. ಶ್ರೀ ಬಸ್ತಿ ವಾಮನಶೆಣ್ಯೆ ಅವರಂತೂ ಬಾಕಿಬಾಬಾ ಅವರ ಬಗ್ಗೆ ಏನು ಮಾಹಿತಿ ದೊರೆತರೂ ನೆನಪಿನಿಂದ ನನಗಾಗಿ ತಂದು ಒಪ್ಪಿಸುತ್ತಿದ್ದರು.

ದಿನವೆಲ್ಲಾ ಶಬ್ದಕೋಶಗಳನ್ನು ತಿರುವುತ್ತಾ ಮನೆಯಿಡೀ ನಾನು ಹರಡಿ ಬಿಟ್ಟ ಪುಸ್ತಕಗಳನ್ನು ಸದ್ದಿಲ್ಲದೇ ಎತ್ತಿಡುತ್ತಾ, ಬಾಕಿಬಾಬ್ ಜನ್ಮಶತಾಬ್ದಿ ಸಂಬಂಧಿ ಸಭೆಗಳಿಗೆ ನನ್ನ ಜೊತೆಗೂಡಿ ಬರುತ್ತಾ, ಈ ಕೆಲಸವನ್ನು ಹೂವಿನಷ್ಟು ಹಗುರವಾಗುವಂತೆ ಸಹಕರಿಸಿದ ಹೂಮನಸ್ಸಿನ ನನ್ನ ಪತಿ ಶ್ರೀ ಉಳ್ಳಾಲ ರಾಘವೇಂದ್ರ ಕಿಣಿಯವರ ಬಗ್ಗೆ ಬರೆಯಲು ನನ್ನಲ್ಲಿ ಮಾತುಗಳೇ ಇಲ್ಲ. ಗೋವಾಕ್ಕೆ ಕುಟುಂಬ ಯಾತ್ರೆಗೆಂದು ಹೋದಲ್ಲೂ ಬಾಕಿಬಾಬ್ ಅವರ ಕವಿತೆಗಳ ಚಿಂತನೆಯಲ್ಲೇ ಮುಳುಗಿದ್ದ ನನ್ನನ್ನು ಅದರಲ್ಲಿ ಮುಕ್ತವಾಗಿ ತೊಡಗಲು ಬಿಟ್ಟು ಪ್ರೀತಿಯಿಂದ ಸಹಕರಿಸಿದ ನನ್ನ ಮಗ ರಾಹುಲ ಮತ್ತು ಸೊಸೆ ಶ್ಯಾಮಲಾ ಇವರನ್ನು ವಾತ್ಸಲ್ಯದಿಂದ ನೆನೆಯುತ್ತೇನೆ.

ಕೊಂಕಣಿಯ ನೂಪುರ ಇದೀಗ ಕನ್ನಡಿಗರ ಕೈಲಿದೆ. ಇದನ್ನು ಸಮಸ್ತ ಕನ್ನಡಿಗರೂ ತೊಟ್ಟು ನಲಿಯಬೇಕು. ಕೊಂಕಣಿ ನೂಪುರದ ಕಿಂಕಿಣಿನಾದ ಕನ್ನಡದ ನೆಲದಲ್ಲಿ ಮಾರ್ದನಿಸಬೇಕು. ಕೊಂಕಣಿಯ ಮಹಾನ್ ಚೇತನ ಶ್ರೀ ಬಾಕಿಬಾಬ್ ಬೋರ್ಕರ್ ಅವರ ಚಿಂತನೆಗಳು ಕನ್ನಡಿಗರ ಎದೆಯಾಳವನ್ನು ತಲುಪಬೇಕು ಎಂಬುದು ನನ್ನ ಕಾಂಕ್ಷೆ. ಜೈ ಕೊಂಕಣಿ, ಜೈ ಕರ್ನಾಟಕ.

ಮಂಗಳೂರು
ಅಕ್ಷಯ ತೃತೀಯಾ, 2010

ಶಕುಂತಲಾ ಆರ್ ಕಿಣಿ

ಕವಿವರ್ಯ

ಬಾಕಿಬಾಬ ಬೋರಕರ

ಜೀವನ ಮತ್ತು ಕಾರ್ಯ - ಒಂದು ಕಿರು ಪರಿಚಯ

ಕೊಂಕಣಿ ಭಾಷೆಯ ಮಹಾಕವಿ ಬಾಕಿಬಾಬ ಬೋರಕರ, ಬಹುಮುಖಿ ಪ್ರತಿಭೆಯ, ಬಹುಮುಖಿ ವ್ಯಕ್ತಿತ್ವದ, ಉದ್ದಾಮ ಕವಿ. ಮೊದಲು ಮರಾಠಿ ಭಾಷೆಯಲ್ಲಿ ಕಾವ್ಯ ಸೃಷ್ಟಿಯ ಸುರಿಮಳೆಗರೆದು ಮೊದಲ ಪಂಕ್ತಿಯ ಕವಿಯೆಂದು ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಮರಾಠಿಗರಿಂದ ಹೊಗಳಿಕೆ ಪ್ರಶಂಸೆಗಳನ್ನು ಪಡೆಯುತ್ತಾ ಮರಾಠಿ ಸಾಹಿತ್ಯದ ಪರಿಷದ ಅಧ್ಯಕ್ಷ ಸ್ಥಾನಕ್ಕೆ ಹೆಸರು ಪಡೆಯುವ ಘಟ್ಟಕ್ಕೆ ತಲುಪಿದ ಬಾಕಿಬಾಬ ಬೋರಕರ, ಒಂದು ಮುಂಜಾನೆ ತನ್ನ ಮಾತೃಭಾಷೆ ಕೊಂಕಣಿಯ ಸಾಹಿತ್ಯ ಕಾಮುಕಲ್ಪದತ್ತ ಹೊರಳಿ ಕೊಂಕಣಿ ಭಾಷೆಯಲ್ಲಿಯೂ ಅತ್ಯುತ್ತಮ ಮತ್ತು ಜನ ಮೆಚ್ಚುವಂತೆ ಕವಿತೆ ಕಾವ್ಯಗಳನ್ನು ರಚಿಸಿ, ರಂಜಿಸಿದ ಮಹಾನ ಸಾಹಿತಿ, ಕವಿ, ನಾಟಕಕಾರ, ಬಾಕಿಬಾಬು ಬೋರಕರ ಅವರ ಜನ್ಮ ಶತಾಬ್ದಿ ಈಗ ದೇಶದೆಲ್ಲೆಡೆ ಕೊಂಕಣಿಗರಿಂದ ಆಚರಿಸಲ್ಪಡುತ್ತದೆ.

ಮಹಾಕವಿ ಬಾಕಿಬಾಬ ಬೋರಕರ ಅವರ ನಿಜನಾಮ, ಬಾಳಕೃಷ್ಣ ಭಗವಂತ ವರ್ಗೇ ಬೋರಕರ ಗೋವಾದ ಸಾಂವರ್ಡೆ ಕುಡ್ಡಡೆಯ ಅವರ ಅಜ್ಜನ ಮನೆಯಲ್ಲಿ 1910 ನವಂಬರ 20ರಂದು ಜನಿಸಿದರು. ಅಜ್ಜನ ಮನೆಯಲ್ಲಿ ಪ್ರತಿ ಸಂಜೆಯೂ ದತ್ತ ಮಹಾರಾಜರ ಪಟದ ಮುಂದೆ ಜರಗತ್ತಲಿದ್ದ ಭಜನೆ, ದೇವರ ನಾಮಗಳ, ಅಭಂಗಗಳು ಅಲ್ಲದೇ ಮರಾಠಿಯ ಉದ್ದಾಮ ಕವಿ ಹೋನಾಜಿ ಬಾಳರ ಘನಶ್ಯಾಮ ಸುಂದರಾ ಭೂಪಾಳೀ ರಾಗ, ಸಂಧ್ಯಾ ರಾಗಗಳ ಗಾಯನ ಬಾಲಕ ಬಾಳಕೃಷ್ಣನ ಮನಸ್ಸಿನಾಳದಲ್ಲಿ ಸಂಗೀತದೊಡನೆ ಕಾವ್ಯ ರಚನೆಯ ಒಸರನ್ನು ಮೂಡಿಸಲು ಕಾರಣವಾದವೆಂದರೆ ತಪ್ಪಾಗದು. ಅವರ ಮಾವ ಪಾಂಡುರಂಗ ಕುಣ್ಕಾಡಕರ ಅವರು ಜ್ಞಾನೇಶ್ವರಿಯ ಪಾತ್ರವಲ್ಲದೇ ಸ್ವಾಮಿ ವಿವೇಕಾನಂದರ ವಾಙ್ಮಯದ ಅಭ್ಯಾಸ ಆಸಕ್ತರು ಕೂಡಾ ಆಗಿದ್ದು, ಆ ಕಾರಣದಿಂದಲೂ ಬಾಳಕೃಷ್ಣನ ಸ್ವಭಾವ ಮತ್ತು ಮನೋವೃತ್ತಿಗಳಲ್ಲಿ ಅವರ ಪಡಿಯಚ್ಚನ್ನು ಮೂಡಿಸಿದವು. ಅಲ್ಲದೇ ಅವರ ಬಾಲ್ಯ ಸುಂದರ ಪರಿಸರ ಹೊಂದಿದ್ದ ಪೋಂಡಾ ಮಹಲಿನ ಸಣ್ಣ ದೊಡ್ಡ ಗುಡ್ಡ ಪರ್ವತಗಳ, ನದಿ ತೊರೆಗಳ ತಪ್ಪಲಲ್ಲಿ ಆಡುತ್ತಾ ನಲಿದಾಡುತ್ತಾ ಸೌಂದರ್ಯವನ್ನೇ ಉಸಿರಾಗಿ ಗ್ರಾಸವಾಗಿ ಬಾಕಿಬಾಬ ಬೆಳೆದರು. ಹೀಗೆ ಸಂಗೀತ, ಕಾವ್ಯ ಭಕ್ತಿ ಅನುಭಾವಗಳಿಂದ ಮತ್ತು ಕರ್ತವ್ಯ ತತ್ಪರತೆಗಳ ಗುಣಗಳ ಚಿಕ್ಕಂದಿನಿಂದಲೇ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದವು. ರಾಷ್ಟ್ರಕವಿ ರವೀಂದ್ರನಾಥ ಠಾಗೋರರ ಮನೋಗುಣಗಳ ಮಟ್ಟಕ್ಕೆ ಬಾಕಿಬಾಬರನ್ನು ಕರೆದೊಯ್ದವು. ಅಲ್ಲದೆ 'ಕವಿವರ್ಯ' ಎಂಬ ಬಿರುದನ್ನೂ ತಂದುಕೊಟ್ಟವು.

ಆದರೆ ಎಳೆಯ ಬಾಳಕೃಷ್ಣನ ಮನಸ್ಸಿನಲ್ಲಿ ಕಾವ್ಯ ಕಲೆಯ ಸ್ಫೂರ್ತಿಯ ಕಿಡಿಯನ್ನು ಹಚ್ಚಿದವರು. ಸಾಮಾನ್ಯರಲ್ಲಿ ಸಾಮಾನ್ಯನೆನ್ನಿಸುವ, ಬಡ ಕೌಪೀನಧಾರಿ ಪಾತ್ರಿಸ ರಾಂದೇರ. ರಾಂದೇರ ಅಂದರೆ ತಾಳೆಮರ ಹತ್ತಿ ಹೆಂಡ ತೆಗೆಯುವ ಕೃಷಿಕ ಕಾಮಗಾರ. ಆ ಪಾತ್ರಿಸ ಎಳೆಯ ಹುಡುಗನಲ್ಲಿ ಜನ್ಮಜಾತವಾಗಿ ಬಂದಿದ್ದ ಪ್ರತಿಭೆಯನ್ನು ಹೊರಹೊಮ್ಮಿಸಲು ಕಾರಣನಾದ, ಮಾತ್ರವಲ್ಲ ಗುರುವೂ ಆದ. ಬಾಲಕ ಬಾಳಕೃಷ್ಣ ಮುಂದೆ ಒಬ್ಬ ಹೆಸರಾಂತ ಕವಿ ಬಾಕಿಬಾಬ ಬೋರಕರ ಆಗಿ ಕೊಂಕಣಿಯಲ್ಲಿ ತನ್ನ ಮೊದಲ ಕಾವ್ಯ ಸಂಕಲನ 'ಪಾಂಯಜಣಾ' ಪ್ರಕಟಿಸಿದಾಗ ಅದನ್ನು ತನ್ನ ಕಾವ್ಯ ಗುರು 'ಪಾತ್ರಿಸ'ರಿಗೆ ಅರ್ಪಿಸಿದ್ದಾರೆ. ಹಾಗೂ ತನ್ನ ಗುರು ಋಣವನ್ನು ತೀರಿಸಿದ್ದಾರೆ.

ಆಶುಕವಿ ಪಾತ್ರಿಸನಿಗೆ ತನ್ನ ಸೃಜನಶೀಲ ಕಾವ್ಯವನ್ನು ಎಲ್ಲೆಂದರಲ್ಲಿ ಹೇಳುವ ಗೀಳು. ಒಂದು ಬಾರಿ ಹುಡುಗ ಬಾಳಕೃಷ್ಣ ಮದುವೆ ಮಂಟಪವೊಂದರಲ್ಲಿ ಇದ್ದಾಗ, ಯಾರೋ ಒಬ್ಬ ಕಾವ್ಯಪ್ರಿಯರು ರಾಂದೇರ ಪಾತ್ರಿಸನಿಗೆ ಒಂದು ಪದ್ಯ ಹೇಳಲು ಕೇಳಿಕೊಂಡಿದ್ದರೆಂದು ಕಾಣುತ್ತದೆ. ಅಂತಹ ಸಂದರ್ಭಗಳಲ್ಲಿ ಯಾರನ್ನೂ ನಿರಾಶೆಗೊಳಿಸಲು ಇಚ್ಛೆ ಪಡದ ಆಶುಕವಿ ಪಾತ್ರಿಸ 'ಕಾಲ್‌ತಾವಳ ಕೆಲೆಂ ಲಗ್ನ ಸರಾಯಾಕ' ಎಂಬ ಆಶು ಕವಿತೆಯನ್ನು ಹೇಳಲು ಸುರು ಮಾಡಿದ. ಅಲ್ಲಿಯೇ ಇದ್ದ ಬಾಳಕೃಷ್ಣನನ್ನು ಆ ಕವಿತೆ ಆಕರ್ಷಿಸಿತು. ಅಂದಿನಿಂದ ಬಾಳಕೃಷ್ಣ ಲಂಗೋಟಿಧಾರಿ ಪಾತ್ರಿಸನ ಬಾಲಂಗೋಚಿಯಾದದ್ದು ಮರಾಠಿ - ಕೊಂಕಣಿ ಕಾವ್ಯ ಲೋಕಕ್ಕೆ ಬಹು ದೊಡ್ಡ ಕಾಣಿಕೆಯಾಯಿತು. ಜನಸಾಮಾನ್ಯನಾಗಿದ್ದ ಪಾತ್ರಿಸನಿಂದಾಗಿ ಕವಿಯಾಗಿ ಮಾರ್ಪಟ್ಟ ಬಾಳಕೃಷ್ಣ ಮುಂದೆ ಬಾಕಿಬಾಬ ಬೋರಕರ ಎಂದು ಜಗತ್ಪ್ರಸಿದ್ಧನಾಗಿ, ಭಾರತದ ಪ್ರಥಮ ಪ್ರಧಾನಮಂತ್ರಿ, ಸಾಹಿತಿ, ಪಂಡಿತ ಜವಾಹರಲಾಲ ನೆಹ್ರೂಜೀಯವರ ಸನಿಹಕ್ಕೆ ಬಂದರೂ, ಪಾತ್ರಿಸರನ್ನು ಮರೆಯಲಿಲ್ಲ ಎಂಬುದು ಬಾಕಿಬಾಬರ ಮನೋಧರ್ಮವನ್ನು ತಿಳಿಸುತ್ತದೆ.

ಅದಾಗಲೇ ಅವರು ಕೊಂಕಣಿ ಮಹಾಪುರುಷ, ಕೊಂಕಣಿ ಭಾಷಾ ಚಳವಳಿಯ ಪಿತನೆಂದು ಖ್ಯಾತನಾಮರಾದ ಶ್ರೀ ಶೆಣ್ಯೈ ಗೊಂಯಬಾಬ (ಶೆಣ್ಯೈ ವಾಮನ ರಘುನಾಥ ವರ್ಧೆ ವಾಲಾವಲಿಕಾರ) ಅವರ 'ಮ್ಹಜಿ ಬಾ ಖಂಯ ಗೆಲೆ?' (ನನ್ನ ತಾಯಿ ಎಲ್ಲಿ ಹೋದಳು?) ಎಂಬ ಲೇಖನವನ್ನು 'ಸ್ವಯಂ ಸೇವಕ' ಎಂಬ ಪತ್ರಿಕೆಯಲ್ಲಿ ಓದಿದರಂತೆ. ಆ ಲೇಖನದಲ್ಲಿ ಶೆಣ್ಯೈ ಗೊಂಯಬಾಬರು ದೇವರೊಡನೆ ಜಗಳವಾಡುತ್ತಾ ತನ್ನ ತಾಯಿ ಕೊಂಕಣಿ ಬಗ್ಗೆ 'ನಂತರ ನೋಡು ! ನಿನಗೆ ಸ್ಥಾನವಿಲ್ಲ, ಮಾನವಿಲ್ಲ, ಹೂವಿನ ಪಕಳೆಗಳಿಲ್ಲ, ದಿಪವಿಲ್ಲ, ಬತ್ತಿ ಇಲ್ಲ' ಎಂಬ ಹೃದಯ ಭೇದಿಸುವಂತಹ ಪರಿಸ್ಥಿತಿಯ ಕುರಿತು ಮೊರೆಯಿಡುತ್ತಾರೆ, ಈ ಲೇಖನ ಅರ್ಧರ ಮನವನ್ನು ಎಳೆಯದಲ್ಲಿಯೇ ಕರಗಿಸುತ್ತಾ ಕಣ್ಣೀರ ಕೋಡಿ ಹರಿಯಿಸಿತಂತೆ.

ಬಾಕಿಬಾಬ ಮರಾಠಿ, ಇಂಗ್ಲೀಷ ಮತ್ತು ಪೋರ್ಚುಗೀಸ ಭಾಷೆಗಳ ಶಾಲೆ - ಕಾಲೇಜುಗಳಲ್ಲಿ ಕಲಿತರು. ಕಲಿಯುತ್ತಿರುವಾಗಲೇ ತನ್ನ ಹದಿನೈದನೇ

ವಯಸ್ಸಿನಲ್ಲಿಯೇ ಲೇಖನ ಕವಿತೆಗಳನ್ನು ಬರೆಯಲನುವಾದರು.

1928 ಇಸವಿಯಲ್ಲಿ ಬಾಕಿಬಾಬ ಧಾರವಾಡದ ಸರಕಾರೀ ಹೈಸ್ಕೂಲಿನಲ್ಲಿ ಕಲಿತು ಮೆಟ್ರಿಕ್ (ಎಸ್.ಎಸ್.ಸಿ) ಪರೀಕ್ಷೆ ಪಾಸು ಮಾಡಿ ಗೋವಾಕ್ಕೆ ಮರಳಿದರು. ಬಳಿಕ 1929ರಲ್ಲಿ ಗೋವಾದ ವಾಸ್ಕೊ ಶಹರಿನ ಇಂಗ್ಲೀಷ ಶಾಲೆಯೊಂದರಲ್ಲಿ ಶಿಕ್ಷಕರಾಗಿ ದುಡಿದದ್ದೂ ಇದೆ. 1941ನೇ ವರ್ಷ ಬಾಕಿಬಾಬ ಮರಾಠಿ-ಪೋರ್ತುಗೇಜ ಭಾಷೆಯ ಪ್ರಾಥಮಿಕ ಶಿಕ್ಷಕರಾಗಿ ಸರಕಾರೀ ವಿದ್ಯಾ ಇಲಾಖೆಯಲ್ಲಿ ನೇಮಕವಾದರು.

ಅವರಲ್ಲಿ ಬುದ್ಧಿಮಂತಿಕೆ, ಚಿಂತನ ಮಂಥನ, ಅನುಮಾನಗಳು ಹಾಗೂ ಪ್ರತಿಭೆಗಳು ಅಸಾಮಾನ್ಯವಾಗಿದ್ದವು. ತನ್ನ ಕೈಗೆ ಸಿಕ್ಕಿದ ಪುಸ್ತಕಗಳನ್ನು ಓದುವುದು ಅವರ ಅಭ್ಯಾಸವಾಗಿತ್ತು. ತನ್ನ ಅದ್ಭುತ ಕಲ್ಪನಾ ಶಕ್ತಿಯಿಂದ, ಸೃಜನಶೀಲತೆಯಿಂದ ಅವರ ಕಾವ್ಯ ಲಹರಿ ಹರಿಯುತ್ತಿತ್ತು. ಇದು ಅವರ ಪೂರ್ವಜನ್ಮದ ಸಂಸ್ಕಾರವಿದ್ದಿರಲೂ ಬಹುದು ಎಂದು ಆಗಿನ ಹಿರಿಯರು ಮಾತನಾಡಿಕೊಳ್ಳುತ್ತಿದ್ದರು.

1930 ಮೇ 9 ರಂದು ಅವರ ಮದುವೆ ಕುಲೀನ ಮನೆತನದ ರುಕ್ಮಿಣಿ ಬಾಯಿ ಎಂಬ ಕನ್ಯೆಯೊಡನೆ ನೆರವೇರಿತು. ಅದೇ ವರ್ಷ ಮಡಗಾಂವದಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಬಾಕಿಬಾಬರ ಪ್ರಥಮ ಮರಾಠಿ ಕಾವ್ಯ ಸಂಗ್ರಹ 'ಪಥಮ' ಪ್ರಕಟವಾಗಿ ಅವರಿಗೆ ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರನ್ನು ತಂದಿತು.

ಆವಾಗಲೇ ಅವರು ಶಿಕ್ಷಕ ವೃತ್ತಿಯನ್ನು ತನ್ನ ಜೀವನದ ಕಸುಬಾಗಿ ತೆಗೆದುಕೊಂಡರೆಂದು ಕಾಣುತ್ತದೆ. 1931 ರಿಂದ ಅವರು ಮರಾಠಿ ಶಾಲೆಗಳಲ್ಲಿ ಮಾಸ್ತರಿಕೆ ಕೆಲಸವನ್ನು ಮಾಡಹತ್ತಿದರು. ಅದರಿಂದಾಗಿ ಅವರಿಗೆ ಅವ್ಯಾಹತವಾಗಿ ಮರಾಠಿ ಕಾವ್ಯ ಸೃಷ್ಟಿ ಮಾಡಲು ಅನುಕೂಲವಾಯಿತೆನ್ನಬೇಕು. 1932 ರಲ್ಲಿ ಕೊಲ್ಹಾಪುರದಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರಿಂದ ಮರಾಠಿ ಭಾಷೆಯ ಮಹಾನ ಸಾಹಿತಿಗಳ, ಕವಿಗಳ ಪರಿಚಯ ಮತ್ತು ಸಾನಿಧ್ಯ ಸಿಗುವಂತಾಯಿತು. ಅದು ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ಉದಯೋನ್ಮುಖ ಸಾಹಿತಿ, ಕವಿಗಳಾಗಿ ಮೂಡಿ ಬರಲೂ ಅವಕಾಶ ಕೊಟ್ಟಿತು. 1934ರಲ್ಲಿ ಅಂದರೆ ಅವರ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿಯೇ ಬಡೋದೆಯಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಅವರು ಆಮಂತ್ರಿತರಾಗಿ ಭಾಗವಹಿಸಿ, ತನ್ನ ಕಾವ್ಯ ಗಾಯನಕ್ಕಾಗಿ ಮತ್ತು ಉತ್ಕೃಷ್ಟ ಕವಿತೆಗಾಗಿ ಬಂಗಾರದ ಪದಕ ಗಳಿಸಿದರು. ಅವರ 'ಪ್ರತಿಭಾ' (ಮರಾಠಿ ಕವಿತಾ ಸಂಗ್ರಹ - 1930) ಜೀವನದ ಸಂಗೀತ (ಮರಾಠಿ ಕವಿತಾ ಸಂಗ್ರಹ 1937) ಮರಾಠಿ ಲಘು ಪ್ರಬಂಧ ಸಂಗ್ರಹ (1938), ಮಾವಳತಾ ಚಂದ್ರ, (1938), ಅಂಧಾರಾಂತಿಲ ವಾಟ (ಮರಾಠಿ ಕಾದಂಬರಿ - 1943) ಜಳತೇ ರಹಸ್ಯ (ಮರಾಠಿ ಕಾದಂಬರಿ 1945) ಪುಸ್ತಕಗಳು ಪ್ರಕಾಶನಗೊಂಡವು.

ಇದಾಗಲೇ ಬಾಕಿಬಾಬರ ಜೀವನದ ಎರಡು ಮಹತ್ವದ ಘಟನೆಗಳು

ಜರುಗಿ, ಅವರ ಜೀವನಕ್ರಮವೇ ಬದಲಾಯಿತೆನ್ನಬೇಕು. ಅದಕ್ಕಿಂತಲೂ ಹೆಚ್ಚಾಗಿ ಅವರ ಮನಸ್ಸಿನಲ್ಲಿ ಹುದುಗಿದ್ದ ಕ್ರಾಂತೀಕಾರ ಭಾವ ಎಚ್ಚರವಾಯಿತೆನ್ನಬೇಕು. 1945ರಲ್ಲಿ ಅವರು ಮಹಾತ್ಮಾಗಾಂಧೀಜಿಯವರ ಸಾಯಂಕಾಲಜ ಪ್ರಾರ್ಥನಾ ಸಭೆಗೆ ಪ್ರಥಮ ಬಾರಿಗೆ ಹಾಜರಾದದ್ದು, ಬಳಿಕ 1946 ರಲ್ಲಿ ಜೂನ್ 18ರಂದು ಮಹಾನ್ ಸಮಾಜವಾದಿಗಳೂ, ಕ್ರಾಂತಿಕಾರ ನೇತಾರರೂ ಆಗಿದ್ದ ಡಾ. ರಾಮಮನೋಹರ ಲೋಹಿಯಾ ಅವರು ಗೋವೆಗೆ ಬಂದು ಮಡಗಾಂವನಲ್ಲಿ ಗೋವಾದ ಸ್ವಾತಂತ್ರ್ಯಕ್ಕಾಗಿ ಊದಿದ ಕಹಳೆ ಬಾಕಿಬಾಬರ ಹೃನ್ಮನಗಳಲ್ಲಿ ಅನುರಣಿಸಿತೆನ್ನಬೇಕು. ಬಾಕಿಬಾಬ ತನ್ನ ಅಧ್ಯಾಪಕ ವೃತ್ತಿಗೆ ತಿಲಾಂಜಲಿ ಕೊಟ್ಟು ಪೋರ್ಚುಗೀಸರ ಜೈಲುವಾಸದ ಶಿಕ್ಷೆಯಿಂದ ಪಾರಾಗಲು 10.7.0946 ರಂದು ರಾತೋರಾತ್ರಿ ಮಹಾರಾಷ್ಟ್ರ ಅಂದರೆ ಬ್ರಿಟಷ ರಾಜ್ಯಕ್ಕೆ ಪಲಾಯನಗೈದರು. ರಾಜಕಾರಣ, ಸಮಾಜಕಾರಣ, ಭಾಷಾಕಾರಣಗಳಲ್ಲಿ ಬಾಕಿಬಾಬ ಮುಂದಿನ ದಿನಗಳಲ್ಲಿ ವ್ಯಸ್ತರಾದರು.

ಗೋವಾದ ಹೊರಗೆ ಮುಂಬಯಿಯಲ್ಲಿದ್ದುಕೊಂಡೇ ಗೋವಾ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮನೋವೃತಿಯನ್ನು ಗೊಂಯಕಾರರಲ್ಲಿ ಬಡಿದೆಬ್ಬಿಸಲು 'ಪ್ರಜೆಚೊ ಆವಾಜ್' ಎಂಬ ಪತ್ರಿಕೆಯನ್ನು ಹೊರಡಿಸಿ, ಪ್ರಕಾಶಿಸತೊಡಗಿದರು. ಅಲ್ಲದೇ ಮುಂಬಯಿ ಹಾಗೂ ಇತರ ಪಟ್ಟಣಗಳಲ್ಲಿ ಕೊಂಕಣಿ ಪರಿಷದ ಇದರ ಕೆಲಸ, ಕಾಲೇಜ ವಿದ್ಯಾರ್ಥಿಗಳಿಗಾಗಿ ಕೊಂಕಣಿ ಭಾಷಾ ಸಮ್ಮೇಳನಗಳನ್ನು ಜರುಗಿಸಿದರಲ್ಲದೇ ಕೊಂಕಣಿ ವಾಙ್ಮಯ ಮಂಡಳಗಳನ್ನು ಸಂಘಟಿಸಿ, ಅಲ್ಲಲ್ಲಿ ಭಾಷಣ ಕಾರ್ಯಕ್ರಮಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಮುಂಬಯಿ ಆಕಾಶವಾಣಿ ಕೇಂದ್ರದಿಂದಲೂ ಕೊಂಕಣಿ ಕಾರ್ಯಕ್ರಮಗಳನ್ನು ನೀಡತೊಡಗಿದರು.

1946 ಅಗಸ್ಟ್ 15 ರಂದು ಮುಂಬಯಿಯಲ್ಲಿ ಬಾಕಿಬಾಬ ಮಹಾತ್ಮಾ ಗಾಂಧಿಯವರನ್ನು ಮೊದಲ ಬಾರಿಗೆ ಭೇಟಿಯಾಗಿ ತನ್ನ ಕಾರ್ಯಗಳ ವರದಿಯನ್ನು ಒಪ್ಪಿಸಿ ಅವರ ಆಶೀರ್ವಾದ ಪಡೆದರು. ಆ ವರ್ಷ ಬಾಕಿಬಾಬರ 'ದೂಧ ಸಾಗರ', ನಂತರ 1950ರಲ್ಲಿ 'ಆನಂದ ಭೈರವಿ' ಮರಾಠಿ ಕವಿತಾ ಸಂಗ್ರಹಗಳು, 'ಭಾಮಿಣ್' (ಮರಾಠಿ ಕಾದಂಬರಿ) 'ಬಾಪೂಜಿಚಿಂ - ಒಝುರಿತಿ ದರ್ಶನ' ಮತ್ತು 'ಆಮ್ಹಿ ಪಾಹಿಲೇಲೆ ಗಾಂಧೀಜಿ' (ಮರಾಠಿ ಭಾಷಾಂತರ) ಪುಸ್ತಕಗಳು ಪ್ರಕಟವಾಗಿ ಮರಾಠಿ ಸಾಹಿತ್ಯ ಲೋಕ ಬಾಕಿಬಾಬರನ್ನು ಮೊದಲ ಸಾಲಿನ ಲೇಖಕರನ್ನಾಗಿ, ಮಾನ್ಯ ಮಾಡಿತ್ತು. ಮರಾಠಿ ಸಾಹಿತ್ಯ ಪರಿಷದ ಇದರ ಅಧ್ಯಕ್ಷ ಸ್ಥಾನ ಕೂಡಾ ಅವರನ್ನು ಅರಸಿ ಬಂದಿತು.

ಆದರೆ ವಿಧಿ ಅವರನ್ನು ಮಾತೃಭಾಷೆ ಕೊಂಕಣಿಯ ಮಡಿಲಲ್ಲಿ ತಂದು ನಿಲ್ಲಿಸಿತ್ತು. 1950ನೇ ಇಸವಿಯಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ

ಸಮ್ಮೇಳನದ ಅಧ್ಯಕ್ಷರಾಗಿ ಬಾಕಿಬಾಬ ಆರಿಸಿ ಬಂದಿದ್ದರು. ಅಲ್ಲಿ ಅವರ ಮನ: ಪರಿವರ್ತನೆಯಾಯಿತು ಎಂದು ಹೇಳಬಹುದು. ಯಾಕೆಂದರೆ ಮರಾಠಿ ಭಾಷಾ ಸಾಹಿತ್ಯ ಕ್ಷೇತ್ರದಲ್ಲಿ ಅಗ್ರಸ್ಥಾನದಲ್ಲಿದ್ದ ಬಾಕಿಬಾಬರನ್ನು ಮಾತೃಭಾಷೆ ಕೊಂಕಣಿ ತನ್ನ ತೆಕ್ಕೆಗೆ ಬಾ ಎಂದು ಕರೆಯುತ್ತಿದ್ದಂತೆ ಅವರಿಗೆ ಭಾಸವಾಗಿರಬೇಕು.

1951ರಲ್ಲಿ 'ಕಾಂಚೇಚಿ ಕಿಮ್‌ಯೊ'(ಅನುವಾದ) ಕಥಾಸಂಗ್ರಹ ಕೂಡಾ ಪ್ರಕಟವಾಯಿತು. 1955ರಲ್ಲಿ ಬಾಕಿಬಾಬರಿಗೆ ಪುಣೆ ಆಕಾಶವಾಣಿಯಲ್ಲಿ ಕೆಲಸ ಸಿಕ್ಕಿತ್ತು ಅಲ್ಲಿ ಆವರು 7 ವರ್ಷ ಕೆಲಸ ಮಾಡಿದರು. 1962ರಲ್ಲಿ ಗೋವಾ ಸ್ವತಂತ್ರವಾದ ಮೇಲೆಯೇ ಅವರು ಗೋವೆಗೆ ಪಣಜಿ ಆಕಾಶವಾಣಿ ಕೇಂದ್ರಕ್ಕೆ ವರ್ಗವಾಗಿ ಬಂದರು. ಅಲ್ಲಿ ಕೆಲಸದಿಂದ ನಿವೃತ್ತಿ ಆಗುವ ವರೆಗೆ ಆಕಾಶವಾಣಿಯಲ್ಲಿ ಕೆಲಸ ಮಾಡಿದ್ದರು. ಹೀಗೆ ಜೀವನಕ್ಕೊಂದು ವ್ಯವಸಾಯ ಬೇಕು ಎಂಬ ನೆಲೆಯಲ್ಲಿ ಅವರು ಆಯುಷ್ಯದಲ್ಲಿ ಮಾಸ್ತರಿಕೆ.

ಶಿಕ್ಷಣ, ಕಾವ್ಯ ಗಾಯನ ಮತ್ತು ಆಕಾಶವಾಣಿಯಲ್ಲಿ ವೃತ್ತಿ ಮಾಡಿದ್ದರು. ಪ್ರವೃತ್ತಿಯಲ್ಲಿ ಸಮಾಜಕಾರಣ, ರಾಜಕಾರಣ, ಭಾಷಾಕಾರಣ ಗೋವಾ ಮುಕ್ತಿ ಆಂದೋಲನ ಮೊದಲಾದ ಸೇವಾ ಕ್ಷೇತ್ರಗಳಲ್ಲಿ ತನ್ನ ಜೀವನದ ಆದರ್ಶವಾಗಿ ಕೈಂಕರ್ಯಗಳನ್ನು ಕೈಗೊಂಡರು. ಅವರ ಸಾಹಿತ್ಯ ಸೇವೆಯಂತೂ ನಿರಾಳವಾಗಿ ಸಾಗುತ್ತಲೇ ಇತ್ತು.

ಮರಾಠಿ ಸಾಹಿತ್ಯ ಲೋಕ ಬಾಕಿಬಾಬರನ್ನು 'ಸೌಂದರ್ಯವಾದಿ', 'ಆನಂದ ಯಾತ್ರಿ', ಕವಿವರ್ಯ ಬಾಳಕೃಷ್ಣ ಭಗವಂತ ಬೋರಕರ ಎಂದು ಗುರುತಿ, ಅವರನ್ನು ತಲೆಯ ಮೇಲೆ ಹೊತ್ತು ಮೆರವಣಿಗೆ ಮಾಡಿತ್ತು. ಯಾಕೆಂದರೆ ಅವರ ಕವಿತೆಗಳಲ್ಲಿದ್ದ ಶುದ್ಧ ಸಾತ್ವಿಕ ಭಾವ, ನಾದ ಮಧುರ ಶಬ್ದಪುಂಜಗಳು, ಪ್ರೀತಿ ಪ್ರೇಮ ಕಾವ್ಯಗಳಲ್ಲಿ, ನಿಸರ್ಗದ ವರ್ಣನೆಗಳಲ್ಲಿ, ಬಾಕಿಬಾಬ ಕಾವ್ಯ ರಸಿಕರನ್ನು ಕಾವ್ಯ ಸೌಂದಯವದ ನಿರ್ಮಳ ಝರಿಯಿಂದ ತಣಿಸಿದರು. ಮರಾಠಿ ಕಾವ್ಯದ ಒಂದು ಕಾಲಖಂಡವನ್ನು ಮರಾಠಿ ಸಾಹಿತ್ಯ ಲೋಕ 'ಜ್ಞಾನಪೀಠ' ಪ್ರಶಸ್ತಿ ವಿಜೇತ 'ಕುಸುಮಾಗ್ರಜ'ಮತ್ತು 'ಬಾಕಿಬಾಬ'ರ ಹೆಸರಿನಲ್ಲಿ ಗುರುತಿಸುತ್ತಿದೆ. ಬಾಕಿಬಾಬರ ಕವಿತೆಗಳು ಮಹಾರಾಷ್ಟ್ರಕ್ಕೆ ಗೋವಾದ ಅಮೂಲ್ಯ ಕೊಡುಗೆ ಎಂದು ಮಹಾರಾಷ್ಟ್ರದವರೂ, ಗೊಂಯಕಾರರೂ ಭಾವಿಸುತ್ತಾರೆ.

ಬಾಕಿಬಾಬರ ಮನೆ, ಸಂಸಾರ ಭಜನೆ, ಬಕ್ತಿ ಸಂಗೀತಗಳ ಪರಂಪರೆ ಯುಳ್ಳದ್ದಾಗಿತ್ತು. ಗೋವೆಯ ಸಂತ ಸೊಹಿರೊ ಬಾಬಾರ 'ಸಂತ ಕಾವ್ಯ' ಗಳಲ್ಲಿ ಮೂಡಿ ಬರುತ್ತಿದ್ದ ಪ್ರೇಮಭಾವದ ಪ್ರಭಾವ ಬಾಕಿಬಾಬರ ಮನಸ್ಸಿನಲ್ಲಿ ಜೀವನದ ಕೊನೆವರೆಗೂ ಇತ್ತು. ಅವರ ಮರಾಠಿ ಕವಿತೆಗಳ ವಿಷಯಕ್ಕೆ ಬರುವಾಗ ಭಾ.ರಾ. ತಾಂಬೆ ಅವರ ಗುರುವೆಂದೂ ಮತ್ತು ತಾಂಬೆಯವರ ಗಾಯಕೀ ಪರಂಪರೆಯನ್ನೇ ಬಾಕಿಬಾಬ ಮುಂದುವರೆಸಿಕೊಂಡು ಬಂದರೆಂದೂ ಹೇಳುವವರಿದ್ದಾರೆ. ಆದರೆ

ಕೊಂಕಣಿ ಕವಿತಾ ರಚನೆಗಳಿಗೆ ಹೇಗೂ ಪಾತ್ರಸ ರಾಂದೇರ ತನ್ನ ಗುರುವೆಂದು 'ಯಾರು ನನ್ನ ಬಾಲ್ಯದಲ್ಲಿ, ತನ್ನ ಶೀಘ್ರ ಆಶುಕವಿತ್ವದಿಂದ ಕೊಂಕಣಿ ಕಾವ್ಯ ಶಕ್ತಿಯ ಉತ್ಕೃಷ್ಟ ಸಾಕ್ಷಾತ್ಕಾರವನ್ನು ಪ್ರಥಮವಾಗಿ ಮಾಡಿದರೋ, ನನ್ನ ಊರಿನ ಆ ಮುದುಕ ಪಾತ್ರಿಸ ರಾಂದೆರರಿಗೆ ಅರ್ಪಣ' ಎಂದು ಭಕ್ತಿಯಿಂದ ನಮೂದಿಸಿದ್ದಾರೆ.

ಯಾವುದೋ ಒಂದು ಸಣ್ಣ ಹಳ್ಳಿಯಲ್ಲಿ ಪೋರ್ತುಗೀಸ ಪ್ರೊಫೆಸರನಾಗಿದ್ದ ಬಾಕಿಬಾಬ 1946ರಲ್ಲಿ ದಿಲ್ಲಿಗೆ ತಲುಪಿ ಸ್ವತ: ಜಗದ್ವಿಖ್ಯಾತ ಸಾಹಿತಿಯಾಗಿದ್ದ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರ ಲಾಲ ನೆಹರೂರವರ ಬಳಿ 'ಗ್ರೇಟ ಪೊಯೆಟ್ ಬೋರಕರ' ಎಂದು ಹತ್ತಿರಕ್ಕೆ ಬಂದದ್ದು ವಿಶೇಷವಲ್ಲ. ಯಾಕೆಂದರೆ ಬಾಕಿಬಾಬ ಬೋರಕರ ಒಬ್ಬ ಶ್ರೇಷ್ಠ ಕವಿಯಾಗಿ ಮಾತ್ರವಲ್ಲ, ಮಹಾತ್ಮಾ ಗಾಂಧೀಜಿಯವರ ಮತ್ತು ಸಮಾಜವಾದಿ ನಾಯಕ ಡಾ. ರಾಮ ಮನೋಹರ ಲೋಹಿಯಾರವರ ಅನುಯಾಯಿಯೆಂದೂ ಆದಾಗಲೇ ಗುರುತಿಸಿಕೊಂಡಿದ್ದರು ಮುಂಬಯಿಯಲ್ಲಿ ಇದ್ದಾಗಲೂ ಗೋವಾ ರಾಜ್ಯವನ್ನು ಪೋರ್ತುಗೀಜರಿಂದ ಸ್ವತಂತ್ರಗೊಳಿಸಲಿಕ್ಕಾಗಿ ನಡೆದ ಚಳವಳಿಯಲ್ಲಿ ತನ್ನ ಬರಹಗಳಿಂದ, ಭಾಷಣಗಳಿಂದ ಬಾಕಿಬಾಬ ಮುಂಚೂಣಿಯಲ್ಲಿದ್ದರು. ಜನಜಾಗೃತಿಗಾಗಿಯೂ ಹಪಹಪಿಸುವ ಮನೋಭೂಮಿಕೆಯನ್ನು ಹೊಂದಿದ್ದರು.

1955ನೇ ಇಸವಿಯಲ್ಲಿ ಆಗಿನ್ನೂ ಭಾಷಾ ಪ್ರಾಂತ್ಯಗಳ ರಚನೆಯಾಗಿರಲಿಲ್ಲ. ಆದಾಗಲೇ ಮುಂಬಯಿಯಲ್ಲಿ ಬ್ಲಾವಟಸ್ಕೀ ಹಾಲಿನಲ್ಲಿ ಮಹಾರಾಷ್ಟ್ರೀಯರ ಒಂದು ಮಹತ್ವದ ಸಭೆ ಜರುಗಿತು. ಆ ಕಾಲದ ಪ್ರಖ್ಯಾತ ನೇತಾರರಾಗಿದ್ದ ಶಂಕತ ರಾವ ದೇವ, ಎಸ್.ಕೆ. ಪಾಟೀವ, ಕಾಮ್ರೇಡ್ ಎಸ್.ಎ. ಡಾಂಗೆ ಹಾಗೂ ಇತರ ವಿರೋಧ ಪಕ್ಷಗಳ ನೇತಾರರು ವ್ಯಾಸ ಪೀಠದಲ್ಲಿ ಮಂಡಿತರಾಗಿದ್ದರು. ಅವರೆಲ್ಲರ ವಿಚಾರವೂ ಒಂದೇ ಆಗಿತ್ತು. ಅದೆಂದರೆ "ಮುಂಬಯಿ, ಬೆಳಗಾಂ, ಕಾರವಾರ, ಗೋವಾ, ನಾಗಪುರ, ಮರಾಠಾವಾಡಾ, ವಿಜರ್ಭಗಳಿಂದ ಕೂಡಿದ ಸಂಯುಕ್ತ ಮಹಾರಾಷ್ಟ್ರ ಆಗಲೇ ಬೇಕು (ಝಾಲಾಚ ಪಾಹಿಜೆ)". ಅಲ್ಲಿ ನಡೆದ ಒಂದು ಘಟನೆಯಿಂದಾಗಿ ಬಾಕಿಬಾಬ ಗೋವಾ ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಲು ವಿರುದ್ಧವಿದ್ದಾರೆ ಎಂದು ಸಂಯುಕ್ತ ಮಹಾರಾಷ್ಟ್ರವಾದಿಗಳಿಗೆ ನಿಚ್ಚಳವಾಗಿ ತೋರಿ ಬಂತು.

1966 ಗೋವಾ ಪ್ರಾಂತ್ಯ ಮಹಾರಾಷ್ಟ್ರದಲ್ಲಿ ವಿಲೀನವಾಗಬೇಕೆ ? ಭಾರತದಲ್ಲಿ ಪ್ರತ್ಯೇಕ ಘಟಕ ರಾಜ್ಯವಾಗಿ ಉಳಿಯಬೇಕೆ? ಎಂಬುದರ ಬಗ್ಗೆ ಜನಮತ ಗಣನೆ (Opinion Poll) ಆಗುವಂತಹ ಕಾಲದಲ್ಲಿ ನಡೆದ ಚಳವಳದಲ್ಲಿ ಪೂರ್ಣವಾಗಿ ಭಾಗಿಯಾಗಿದ್ದ ಬಾಕಿಬಾಬ ಗೋವೆಯ ಜನಪ್ರಿಯ ದೈನಿಕ 'ರಾಷ್ಟ್ರಮತ'ದಲ್ಲಿ ಪ್ರತೀ ದಿನವೂ ಜನರಲ್ಲಿ ತಮ್ಮದ್ದಾದ ಗೋವಾ ರಾಜ್ಯ ಪ್ರತ್ಯೇಕ ಇರಲಿಕ್ಕೆ ಒಗ್ಗೂಡುವಂತೆ ಎಚ್ಚರಿಸುವ ಸ್ಫೂರ್ತಿಯುತ ಲೇಖನ ಮತ್ತು ಕವಿತೆಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ಜನಮತ ಗಣನೆಯಲ್ಲಿ ಗೋವಾ ರಾಜ್ಯ ಸ್ವತಂತ್ರ ಘಟಕ ರಾಜ್ಯವಾಗು ಉಳಿಯುವ ತಮ್ಮ ಚಳವಳಿಗೆ ಬಲ ಬಂತು ಎಂದು

ಚಳುವಳಿಯ ನೇತಾರರೂ, ವಾಗ್ಮಿಗಳೂ ಆಗಿರುವ ಎಡ್ವೊಕೇಟ್ ಉದಯ ಎಲ್.ಭೆಂಬ್ರೆ, ಶ್ರೀಯುತ ನಾಗೇಶ ಕರಮಲಿ ತಿಳಿಸುತ್ತಾರೆ. 'ನಾನು ಗೋವಾ ಚಳವಳದಲ್ಲಿ ಭಾಗಿಯಾಗಿ ಕ್ರಾಂತಿಕಾರಕ ಕವಿತೆಗಳನ್ನು ಬರೆಯಲನುವಾದೆ. ಆಗ ನನ್ನ ಮನಸ್ಸಿನೊಳಗಿಂದ ಕೊಂಕಣಿ ಮಾತೆಯೇ ಮಾತಾಡಲು ತೊಡಗಿದಳು' ಎಂದು ಬಾಕಿಬಾಬ ಬರೆಯುತ್ತಾರೆ.

ಕೊಂಕಣಿ ಚಳುವಳಿಯ ಪಿತಾಮಹನೆಂದು ಖ್ಯಾತನಾವರಾದ ಶೆಣೈ ಗೋಂಯ್‌ಬಾಬ (ವಾಮನ ಶೆಣೈ ವರ್ಧೆ ವಾಲಾವಲಿಕಾರ) ಇವರ ಕೊಂಕಣಿ ಜನರನ್ನು ಎಚ್ಚರಿಸುವ ಕೊಂಕಣಿ ಲೇಖನ ಪ್ರಬಂಧ, ನಾಟಕಗಳನ್ನು ಗೋವಾದ ಜೈಲಿನಲ್ಲಿರುವ ಗೋವಾ ವಿಮೋಚನಾ ಚಳವಳಿಯ ಕೈದಿಗಳಿಗೆ ಮುಂಬಯಿ ಆಕಾಶವಾಣಿಯ ಕಾರ್ಯಕ್ರಮಗಳ ಮೂಲಕ ಬಾಕಿಬಾಬ ಅವರಿಂದ ತಲುಪಿಸುವಂತಾಯಿತು.

ಪ್ರಾರಂಭದಲ್ಲೇ ಮರಾಠಿ ಭಾಷೆಯಲ್ಲಿ ಪದ್ಯ, ಕವನಗಳನ್ನು ರಚಿಸುತ್ತಿದ್ದ ಬಾಕಿಬಾಬ ಬೋರಕರ, ನಂತರ ತನ್ನ ಮಾತೃಭಾಷೆ ಕೊಂಕಣಿಯ ಕವಿಯಾಗಿ ಹೊರಹೊಮ್ಮಿದ್ದರು. ಅವರದ್ದು ಬರೇ ಶಬ್ದಕೋಶಗಳಿಂದ ಆಯ್ದ ಶಬ್ದಗಳಿಂದ ತುಂಬಿರುವ ಕಾವ್ಯಗಳಲ್ಲ. ಸುತ್ತಮುತ್ತಲಿನ ಜನಸಾಮಾನ್ಯರಿಗೂ ಅರ್ಥವಾಗುತ್ತ, ಅವರ ಕಾವ್ಯದೆಡೆಗೆ ಆಕರ್ಷಿತವಾಗುವ, ತನ್ನದೇ ಶಬ್ದಮಾಧುರ್ಯ-ಗಳಿಂದೊಡಗೂಡಿದ ಕವಿತೆಗಳಾಗಿದ್ದವು. ಅದರಿಂದಾಗಿಯೇ ಅಂದಿನ ಕವಿಸಾಮ್ರಾಟರು ಮಾತ್ರವಲ್ಲ ಸಾಮಾನ್ಯ ಓದುಗರಿಗೂ ಬಾಕಿಬಾಬ ಆತ್ಮೀಯರಾಗುತ್ತ ನಡೆದರು. ಮರಾಠಿ ಕೊಂಕಣಿಯ ಸಂತ ಸಾಹಿತ್ಯದ ಕಾವ್ಯ ಸೃಷ್ಟಿ ಮಾಡುವುದರೊಂದಿಗೆ;

ಉದಾಹರಣೆಗಾಗಿ

'ವ್ಹಡೆ ಆಲ್ತಡಿ ಲಾಯ,
ಮ್ಹಾಕಾ ಪಲತಡಿ ಪಾಯ
ಜಂಯ ಸುಖ್ ಥಂಡಾಯ
ಪಾಂಡುರಂಗಾ!
(ದೋಣಿ ನದಿಯ ದಡಕ್ಕೆ ತಾಗಲಿ
ನನಗೆ ಆ ಕಡೆ ಸಾಗಿಸು
ಅಲ್ಲಿ ಸುಖ ಶೀತಲ
ಪಾಂಡುರಂಗ!)
ಅದೇ ಸಮಯದಲ್ಲಿ ಕವಿ
ಮಂದ ಮಂದ ವಾಜತ ಆಯಲಿಂ ತುಜಿಂಗೊ ಪಾಂಯಜಣಾ
ಮೌನ ಪಡಲೆಂ ಸಗಳ್ಯಾ ರಾನಾ
ಶಿರಶಿರೂನ ಥಾಂಬಲಿ ಪಾನಾ
ತನ್ನತ್ತ ಬರುತ್ತಿರುವ ಪ್ರಿಯತಮೆಯ ನಡಿಗೆಯನ್ನು ಕವಿ

'ಮಂದಮಂದವಾಗಿ ನುಡಿಯುತ್ತ ಬಂದಿತು ನಿನ್ನ ನೂಪೂರಗಳ ಸದ್ದು ಮೌನವಾಯಿತು. ಕಾನನ, ತಲೆ ಬಾಗಿ ನಿಂತವು ಎಲೆಗಳು' ಅಷ್ಟು ಮಧುರ ಭಾವನೆಗಳನ್ನು ಪಂಡಿತ ಪಾಮರರ ಎದೆಯಲ್ಲಿ ಮೂಡಿಸುತ್ತಿದ್ದ ಅವರ ಕಾವ್ಯ ಶೈಲಿಯ ಗರಿಮೆ ಕವಿವರ್ಯ ಬೇಂದ್ರೆಯವರ 'ಉತ್ತರಧ್ರುವದಿಂ ದಕ್ಷಿಣಧ್ರುವಕೂ ಚುಂಬಕ ಗಾಳಿಯು ಬೀಸುತಿದೆ' ಕಾವ್ಯವನ್ನೂ ನೆನಪಿಗೆ ತರುತ್ತಿದೆ.

ತನ್ನ ಆಯುಷ್ಯ ಪೂರ್ತಿ ಬಾಕಿಬಾಬ ಕಾವ್ಯ ರಚನೆಗೆ ತೊಡಗಿದ್ದರೂ ಅವರು ಗದ್ಯ, ಲೇಖನ, ಸಣ್ಣ ಕತೆಗಳು, ಕಾದಂಬರಿ, ನಾಟಕ ಹಾಗೂ ಅನುವಾದ ಸಾಹಿತ್ಯದಲ್ಲಿಯೂ ಬಹುಮುಖವಾಗಿ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ರಾಷ್ಟ್ರಕವಿ ರವೀಂದ್ರನಾಥ ಟಾಗೋರರ ಕಾವ್ಯ, ಕಥೆ, ಕಾದಂಬರಿ, ನಾಟಕಗಳನ್ನು ಅವರ ಅತ್ಯಂತ ಸಮರ್ಥವಾಗಿ ಮತ್ತು ವಿವೇಚನೆಯಿಂದ ಅನುವಾದ ಮಾಡಿ ವಿದ್ವಜ್ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. 1983ರಲ್ಲಿ ಪ್ರಕಾಶಿತವಾದ ಬಾಕಿಬಾಬರ 'ಪ್ರಿಯಕಾಮಾ' ಕಾದಂಬರಿಯ ವಸ್ತು ಪುರಾಣಕಾಲದ ಒಬ್ಬ ಉಪೇಕ್ಷಿತ ನಾಯಕಿಯ ಜೀವನದ ಪೂರ್ವ ಹಾಗೂ ಉತ್ತರ ರಂಗಗಳ ಕಥೆಗಳನ್ನು ಅವರು ಸ್ವಂತದ ಕಲ್ಪನೆಗಳಿಂದ ರಂಗು ರಂಗಿನ ಛಾಪಿನಲ್ಲಿ ಮೂಡಿಸಿದ್ದಾರೆ. ಅಂತಹ ಹಲವಾರು ಕತೆ, ಕಾದಂಬರಿಗಳನ್ನು ಅವರು ರಚಿಸಿದ್ದಾರೆ.

ಕೊಂಕಣಿ ಭಾಷೆಯ ಹೆಸರಾಂತ ಸಾಹಿತಿ ಲಕ್ಷ್ಮಣರಾವ್ ಸರದೇಸಾಯ ಅವರು ಒಮ್ಮೆ ತಾನು ಬರೆದ 'ಚಾಂಡಾಳ' ಎಂಬ ಕಥೆಯನ್ನು ವಿಮರ್ಷಿಸಲು ಬಾಕಿಬಾಬರೊಡನೆ ಕೊಟ್ಟರು. ಅದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ 'ಈ ಕಥೆಯಲ್ಲಿ ಎಲ್ಲವೂ ಇದೆ ಆದರೆ ಬೇಕಾದಷ್ಟು ಯಾವುದೂ ಇಲ್ಲ' ಎಂದು ಷರಾ ಬರೆದರಂತೆ. ಅದನ್ನು ಓದಿದ ಲಕ್ಷ್ಮಣರಾವ (ಅವರು ವಾವೆಯಲ್ಲಿ ಬಾಕಿಬಾಬರ ಭಾವನೆಂಟರೂ ಹೌದು), 'ನಿನಗೇನು ಕತೆ ಬರೆಯುವುದು ಗೊತ್ತಿದೆ? ಅದು ಕವಿತೆಗಳನ್ನು ಬರೆದಂತೆ ಅಲ್ಲ!' ಎಂದು ತಾತ್ಸಾರವಾಗಿ ನುಡಿದರಂತೆ. ಬಾಕಿಬಾಬ ಅದನ್ನು ಲಘುವಾಗಿ ತೆಗೆದುಕೊಳ್ಳದೇ 'ನಾನು ಮನಸ್ಸು ಮಾಡಿದರೆ ಕಥೆಯೇನು; ಕಾದಂಬರಿಯನ್ನು ಕೂಡಾ ಬರೆದೇನು!' ಎಂದು ಪ್ರತ್ಯುತ್ತರ ನೀಡಿದರು. ಮತ್ತು ಆ ಗಳಿಗೆಯಿಂದಲೇ ಕಾದಂಬರಿಯ ಕಥಾನಕ ಒಂದು ಅವರ ಒಳಮನಸ್ಸಿನಲ್ಲಿ ಬಲಗೊಳ್ಳುತ್ತಾ ಅವರ ಕಣ್ಣ ಮುಂದೆಯೇ ಪರದೆಯ ಮೇಲೆ ಬರುವ ಚಲನಚಿತ್ರದಂತೆ ಮೂಡಿ ಬಂತು. ಅದನ್ನು ಲಿಖಿತರೂಪಕ್ಕೆ ತಂದು ಲಕ್ಷ್ಮಣರಾವ ಸರದೇಸಾಯರ ಮೇಜಿನ ಮೇಲೆ ಇಟ್ಟರಂತೆ. ಅದನ್ನೋದಿದ ಲಕ್ಷ್ಮಣರಾವ ಮಂತ್ರಮುಗ್ಧರಾಗಿದ್ದಂತೆ, ಹಸ್ತಪ್ರತಿಯನ್ನು ಭಾವೂ ಸಾಹೇಬ ಖಾಂಡೇಕರ ಅವರ ಬಳಿ ಕಳುಹಿಸಿ ಕೊಟ್ಟು ಶೀಘ್ರದಲ್ಲಿ ಪ್ರಕಟಗೊಳಿಸಿದರು. ಅದರ ನಂತರ ಕವಿವರ್ಯ ಬಾಕಿಬಾಬ ಕಾದಂಬರಿಕಾರರೂ ಆದರು.

ಬಾಕಿಬಾಬ ಕಥೆ ಕಾದಂಬರಿ ಕಾವ್ಯ ರಚನೆಯೊಂದಿಗೆ ಲಘು ನಿಬಂಧಗಳನ್ನೂ

ರಚಿಸಿದರು. ಅವರ ಲಘು ನಿಬಂಧಗಳ ಸಂಗ್ರಹ 'ಕಾಗದ ಹೊಡ್ಕಾ' ತನ್ನ ೨೭ನೇ ವಯಸ್ಸಿನಲ್ಲಿಯೇ ಪ್ರಸಿದ್ಧವಾಯಿತು. ಬಾಕಿಬಾಬ 'ಪ್ರಿಯದರ್ಶಿನಿ' ಎಂಬ ಕಾವ್ಯ ನಾಮದಿಂದ ಸಣ್ಣ ಕಥೆಗಳನ್ನು ಬರೆದು ಪತ್ರಿಕೆಗಳಿಗೆ ಕಳುಹಿಸಿಕೊಡುತ್ತಲೂ ಇದ್ದರು. "ನಾನು ಬರೆದ ಹಲವಾರು ಕಥೆಗಳು ಗೋವೆಯ ಭೂಮಿಕೆಯನ್ನು ಒಳಗೊಂಡವುಗಳಾಗಿದ್ದು, ಆದರಿಂದ ಓದುಗರಿಗೆ ಗೋವೆಯ ಸಹಜ ದರ್ಶನವನ್ನು ಮಾಡಿಕೊಟ್ಟಾವು ಎಂದಾದರೆ ನನ್ನ ಕೆಲಸ ಸಫಲವಾಗಿದೆಯೆಂದು ನಾನು ತಿಳಿಯುತ್ತೇನೆ" ಎಂದು ಒಂದು ಕಡೆ ಬರೆದಿದ್ದಾರೆ.

'ಬ್ರಹ್ಮ ಕಮಳ ಫುಲತೆ ತೆನ್ನಾಂ' ಬಾಕಿಬಾಬರ ಅತ್ಯುತ್ತಮ ಕವಿತೆಗಳಲ್ಲಿ ಒಂದು. ಅದು ನಿಸರ್ಗದ ಕೌತುಕಗಳಲ್ಲಿ ಒಂದಾದ ಬ್ರಹ್ಮ ಕಮಲ ಹೂವಿನ ಕುರಿತಾಗಿದೆ. ಬ್ರಹ್ಮ ಕಮಲ ರಾತ್ರಿಯಾಗುತ್ತಾ ಅರಳಿ ಸೂರ್ಯನು ಉದಯಿಸುವ ಮುನ್ನವೇ ಬಾಡಿ ಹೋಗುವ, ಅದಷ್ಟು ಗಳಿಗೆಯಲ್ಲಿ ತನ್ನ ಸುಗಂಧವನ್ನು ಜಗತ್ತಿಗೆ ಬೀರುವ ತನ್ನೆಲ್ಲ ಸೌಂದರ್ಯವನ್ನು ಜಗತ್ತಿಗೆ ಪ್ರದರ್ಶಿಸುವ ಒಂದು ಹೂ. 'ಬ್ರಹ್ಮ ಕಮಲ' ಪುಷ್ಪ ಅರಳುವಾಗ, ರಾತ್ರಿಯಲ್ಲಿ ಮಂದವಾಗಿ ಬೀಸುತ್ತಲಿರುವ ಗಾಳಿಯಲ್ಲಿ ಅರಳುತ್ತ ಅರಳುತ್ತಿರುವ ಸ್ಥಿತಿಯಲ್ಲಿ ಕವಿಯ ಸುಂದರ ಅನುಭವ 'ಬ್ರಹ್ಮಕಮಲ ಫುಲತೆ ತೆನ್ನಾಂ'ದಲ್ಲಿ ಮೂಡಿ ಬಂದಿದೆ.

ಬಾಕಿಬಾಬ ಗೋವೆಯ ಸಹಜ ಕವಿ. ಅವರ ಕವಿತೆಗಳಲ್ಲಿ ಗೋವೆಯ ಮಣ್ಣಿನ ವಾಸನೆ. ನಿಸರ್ಗದ ಕಂಪು, ಜನಜೀವನದ ಒನಪು ವೈಯ್ಯಾರಗಳ ಅಸಂಖ್ಯ ವರ್ಣನೆಗಳಿವೆ. ಅವರೇ ತನ್ನ ಒಂದು ಕವಿತೆಯಲ್ಲಿ 'ನನ್ನ ಗೋವೆಯ ಭೂಮಿಯಲ್ಲಿ ನನ್ನ ಎಲ್ಲಾ ಜೀವ ತುಂಬಿದೆ. ಎಲ್ಲಾ ನನ್ನ ಕವನಗಳಲ್ಲಿ ಶ್ರೀಗಂಧದ ಕಂಪು ಹರಡಿದೆ' ಎಂದಿದ್ದಾರೆ. ಪು.ಲ ದೇಶಪಾಂಡೆ, ಜಯವಂತ ದಳವಿ, ಮಂಗೇಶ ಪಾಡಗಾಂವಕರ ಇಂತಹ ಮಹಾರಾಷ್ಟ್ರದ ಮಹಾನ ವಿದ್ವಾಂಸರಿಗೆ, ರಸಿಕ ಕಲಾಗಾರರಿಗೆ, ಬಾಕಿಬಾಬರ ಕವನಗಳಿಂದ ಗೋವೆಯ ಬಗ್ಗೆ ತಿಳುವಳಿಕೆಯ ಅನುಭವವಾಯಿತು. ಆದರಿಂದಾಗಿಯೇ ಅಂತಹ ಸಾಹಿತ್ಯಕಾರರು ಬಾಕಿಬಾಬರ ಕಾವ್ಯಗಳ ಬಗ್ಗೆ ಆದರವನ್ನು ಮುಕ್ತವಾಗಿ ಹೇಳುತ್ತಿದ್ದರು.

ಮಹಾತ್ಮಾ ಗಾಂಧಿ ಆಯಲೋಕೀ

ಗೊಯಾಂತ ಆಮಚ್ಯಾ ಪಾವಲೋಕೀ

ಲೋಹಿಯಾನ ಹಾಡಲೊ ಬಾವಟೋ ತಾಚೊ

ಮಡಗಾಂವ ಶ್ಹಾರಾಂತ ಲಾಯಲೋಕಿ ॥

ಬಾಕಿಬಾಬರ ಈ ಕವಿತೆ ಗೋವೆಯ ಸ್ವಾತಂತ್ರ್ಯ ಚಳವಳಿಯ ದಿನಗಳಲ್ಲಿ ಗೋವಾದ ಜನಸಾಮಾನ್ಯರ ಕಂಠಗಳಿಂದ ಹೊರಬರುತ್ತಿದ್ದ ಸಮರ ಗೀತೆಗಳು. ಬಾಕಿಬಾಬರು ಗೋವೆಯಿಂದ ಅದೃಶ್ಯರಾಗಿ ಮುಂಬಯಿ ತಲುಪಿ ಅಲ್ಲಿಯೇ

ವಾಸಸ್ಥರಾಗಿದ್ದಾಗಲೂ ಗೋವಾದ ಸ್ವಾತಂತ್ರ್ಯ ಆಂದೋಲನ ಮತ್ತು ಕೊಂಕಣಿ ಭಾಷಾ ಆಂದೋಲನದಲ್ಲಿ ತನ್ನ ಲೇಖನಗಳಿಂದ ಕವಿತೆಗಳಿಂದ ಪೂರ್ಣವಾಗಿ ಭಾಗಿಯಾಗುತ್ತಿದ್ದರು. ಅವರ ಪ್ರಯತ್ನದಿಂದಾಗಿಯೇ ಮುಂಬಯಿ ಆಕಾಶವಾಣಿಯಲ್ಲಿ ಕೊಂಕಣಿ ಭಾಷಾ ಕಾರ್ಯಕ್ರಮಗಳಿಗೆ ಪ್ರವೇಶವಾಯಿತು. ಅವರೇ ಬರೆದು, ಹಾಡುತ್ತಲಿದ್ದ ಕೊಂಕಣಿ ಗೀತಗಳು ರೇಡಿಯೋ ಮೂಲಕ ಜನಸಾಮಾನ್ಯರಿಗೆ ತಲುಪಿದವು. 'ಪ್ರಜೆಚೊ ಆವಾಜ್' ಕವಿತಾ ಕಾರ್ಯಕ್ರಮ ಜನರ ಮನಸ್ಸು ಮತ್ತು ಹೃದಯ ತಟ್ಟುತ್ತಿದ್ದವು. ಬಾಕಿಬಾಬರ 'ಪಾಂಯಜಣಾ' ಕಾವ್ಯ ಸಂಕಲನದ ಕವಿತೆಗಳೆಲ್ಲವೂ ಮುಂಬಯಿ ಆಕಾಶವಾಣಿಯ ಕೊಂಕಣಿ ಕಾರ್ಯಕ್ರಮಗಳಲ್ಲಿ ಪ್ರಸಾರವಾಗಿದ್ದವು.

ತನ್ನ ವೈಯಕ್ತಿಕ ಸಾಂಸಾರಿಕ ಹಾಗೂ ಗೋವೆಯ ರಾಜಕೀಯ ಭವಿತವ್ಯಗಳ ಬಗ್ಗೆ ಅವರ ಚಿಂತನ ಮಂಥನಗಳನ್ನು ತಲೆಯಲ್ಲಿ ತುಂಬಿಸಿಕೊಳ್ಳುತ್ತಾ ಬಾಕಿಬಾಬ ಮುಂಬಯಿ, ಪುಣೆ, ಬೆಳಗಾಂವ. ಸಾಬರಮತಿ ಆಶ್ರಯ, ವಾರ್ಧಾ, ದಿಲ್ಲಿ ತನಕ ತಲುಪಿದಾಗಲೂ ಗೋವೆಯ ಬಗ್ಗೆ ರಾಜಕಾರಣವನ್ನು ನಡೆಸಿದರು.

ಅಂತಹ ಅಸಾಮಾನ್ಯ ವ್ಯಕ್ತಿತ್ವದ, ಉತ್ತುಂಗ ಧ್ಯೇಯವಾದಿ, ಬಾಕಿಬಾಬರನ್ನು 'ಕೊಂಕಣಿ ಕವಿ' ಎಂದು ಕರೆಯುತ್ತಾರೆ. 'ಮರಾಠಿಯ ಕವಿ' ಎಂದೂ ಕರೆಯುವವರಿದ್ದಾರೆ. ಆದರೆ ಅವರಿಗೆ ವೈಯಕ್ತಿಕವಾಗಿ ಯಾವ ಭಾಷಾ ಬಂಧನವೂ ಇರಲಿಲ್ಲ. ಅವರು ಹಿಂದಿ, ಸಂಸ್ಕೃತ, ಗುಜರಾತಿ, ಬಂಗಾಲಿ, ಫ್ರೆಂಚ್, ಇಂಗ್ಲಿಷ್, ಪೋರ್ಚುಗೀಸ್ ಭಾಷೆಗಳಲ್ಲಿಯೂ ಕಾವ್ಯಗಳನ್ನು ಸಮರ್ಥ ರೀತಿಯಿಂದ ರಚಿಸಿದ್ದಾರೆ. ಅದರಿಂದಾಗಿ ಅವರನ್ನು 'ವಿಶ್ವ ಕವಿ'ಯೆಂದೂ ಕರೆಯಬಹುದು ಎಂದು ಸಾಹಿತ್ಯಕಾರರು ಅಂದಿದ್ದಾರೆ.

ಬಾಕಿಬಾಬರು ಪುಣೆಯಲ್ಲಿದ್ದಾಗ ಅವರ ಮಗಳ ಮದುವೆ ನಿಶ್ಚಯವಾಯಿತು. ಅವರು ಮಗಳ ಮದುವೆಯ ಆಮಂತ್ರಣ ಪತ್ರಿಕೆಯನ್ನು ಕೊಂಕಣಿ ಭಾಷೆಯಲ್ಲಿಯೇ ಛಾಪಿಸಿದರು. ಅದನ್ನು ಓದಿದ ಪುಣೆಯ ಮರಾಠಿ ಸಾಹಿತ್ಯಕಾರರು ತುಂಬಾ ತಕರಾರು ತೆಗೆದರಂತೆ. ಯಾವ ಮರಾಠಿ ಭಾಷೆ ಬಾಕಿಬಾಬರನ್ನು ಕವಿವರ್ಯನೆಂದು ಕರೆಯುತ್ತ ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆ ಮಾಡಿತ್ತೊ ಆ ಭಾಷೆಯನ್ನು ಅವರು ನಿರ್ಲಕ್ಷಿಸಿದ್ದಾರೆ. ಎಂದು ಅವರು ತಕರಾರು ತೆಗೆದು ಪತ್ರಿಕೆಗಳಲ್ಲಿ ಪ್ರಕಟಣೆಗಳು ಬಂದವು. ಬಾಕಿಬಾಬ ಅವರಿಗೆ ಸಮಜಾಯಿಕೆಯನ್ನು ನೀಡುತ್ತಾ 'ಮಗಳ ಮದುವೆ ಒಂದು ಕೌಟುಂಬಿಕ ಪ್ರಸಂಗ'. ಕುಟುಂಬದಲ್ಲಿ ಯಾವ ಭಾಷೆ ಪ್ರಚಲಿತವಿದೆಯೋ ಅದೇ ಭಾಷೆಯಲ್ಲಿ ಆಮಂತ್ರಣ ಪತ್ರ ಛಾಪಿಸಿದರೆ ತಪ್ಪು ಏನಿಲ್ಲ' ಎಂದು ಬರೆದರು.

ಗೋವಾದಲ್ಲಿ ಸಾಮಾನ್ಯವಾಗಿ ಲೋಕಶಾಹಿ ಪದ್ಧತಿಯಲ್ಲಿ ಏನು ಮಾಡಲು ಬರುವುದಿದ್ದರೂ ಅದಕ್ಕೆ ಹಿಂದೂ ಸಮಾಜ ಮತ್ತು ಕ್ರೈಸ್ತ ಸಮಾಜದ ಇರುವಿಕೆಗಳನ್ನು

ಗಮನದಲ್ಲಿಟ್ಟುಕೊಳ್ಳಲೇ ಬೇಕು. ಕ್ರೈಸ್ತ ಸಮಾಜ ಮೊದಲಿಂದಲೂ ಕೊಂಕಣಿ ಭಾಷೆ ಕಡೆಗೆ ತಮ್ಮ ಒಲವುಗಳನ್ನು ಹೇಳುತ್ತಲೇ ಬಂದಿತ್ತು. ತನ್ನ ಮಾತೃಭಾಷೆ ಕೊಂಕಣಿ ಎಂದೇ ಕ್ರೈಸ್ತರು ಹೇಳುತ್ತಲಿದ್ದರು. ತಮ್ಮ ದೈನಂದಿನ ವ್ಯವಹಾರಗಳನ್ನು ಪತ್ರಗಳನ್ನು ಕೊಂಕಣಿಯಲ್ಲಿಯೇ ಮಾಡುತ್ತಲಿದ್ದರು. ಆದರೆ ಗೋವೆಯ ಹಿಂದೂಗಳು ಮತ್ತು ಸಾಧಾರಣವಾಗಿ ಕಾರವಾರದ ಹಿಂದೂಗಳು ಕೂಡಾ ಅವರ ಮಾತೃಭಾಷೆ ಮರಾಠಿ ಎಂದೇ ತಿಳಿದುಕೊಂಡಿದ್ದರು. ಕೊಂಕಣಿ ತಮ್ಮ ಮಾತೃಭಾಷೆ ಸ್ವತಂತ್ರ ಭಾಷೆಯೆಂಬ ಕಲ್ಪನೆ ಹಿಂದೂಗಳಿಗೆ ತಿಳಿದಿರಲಿಲ್ಲ.

ಆದರೆ ಯಾವಾಗ ಶಣೈಗೋಂಯಬಾಬ 1920 ರಿಂದ 1946 ರವರೆಗೆ ಕೊಂಕಣಿ ಭಾಷೆಯ ಬಗ್ಗೆ ಜನರನ್ನು ಎಚ್ಚರಿಸುವ ಕಾರ್ಯದಲ್ಲಿ ಅಹೋರಾತ್ರಿ ನಿರತರಾಗಿದ್ದಾಗ ಮತ್ತು 1939 ರಲ್ಲಿ ಕಾರವಾರದಿಂದ ಮಾಧವ ಮಂಜುನಾಥ ಶಾನಭಾಗ ಅಖಿಲ ಭಾರತ ಕೊಂಕಣಿ ಪರಿಷದನ್ನು ಸಂಘಟಿಸಿದರೋ ಅದರ ಬಳಿಕ ಹಿಂದೂ ಸಮಾಜ ಎಚ್ಚೆತ್ತು ತನ್ನ ಮಾತೃಭಾಷೆ ಕೊಂಕಣಿ ಎಂದು ಹೇಳುತ್ತಾ ಬಂದಿತು. ಕೊಂಕಣಿ ಸಾಹಿತ್ಯ, ಅಸ್ಮಿತೆ, ಪರಂಪರೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ತಿಳುವಳಿಕೆಯನ್ನು ಗ್ರಹಿಸುತ್ತ, ಅಭಿಮಾನ ಪ್ರದರ್ಶಿಸುತ್ತ ತನ್ನ ಮಾತೃ ಭಾಷೆಯ ಬಗ್ಗೆ ತಲೆ ಎತ್ತಿ 'ತನ್ನ ಮಾತೃ ಭಾಷೆ ಕೊಂಕಣಿ' ಎಂದು ಉದ್ಘೋಷಿಸಲು ಅನುವಾಯಿತು. ಶೆಣೈ ಗೊಂಯಬಾಬರು ಹಾಕಿಕೊಟ್ಟ ಕಾಲುದಾರಿಯಲ್ಲಿ ಹಲವಾರು ಯುವ ಸಾಹಿತಿಗಳು ಅವರನ್ನು ಹಿಂಬಾಲಿಸುತ್ತ ಕೊಂಕಣಿ ಭಾಷೆಯಲ್ಲಿಯೇ ಲೇಖನ, ಕಥೆ, ಕಾದಂಬರಿಗಳನ್ನು ಕಾವ್ಯ ಕಿರು ನಾಟಕಗಳನ್ನು ಬರೆಯುತ್ತ ಬಂದರು. ಕಾಶೀನಾಥ ಬಾಬ ಶ್ರೀಧರ ನಾಯಕರಂತಹ ಕೊಂಕಣಿ ಪ್ರೇಮಿಗಳು ಆ ಸಾಹಿತ್ಯವನ್ನು ಪ್ರಕಟಿಸಲು ಮುಂದಾದರು. ಹೀಗಾಗಿ ವಿಪುಲ ಸಾಹಿತ್ಯ ಕೃತಿಗಳು ಪ್ರಕಟವಾಗಿ, ಜನಸಾಮಾನ್ಯರಿಗೂ ತಲುಪುವಂತಾಗಿದ್ದು ಕೊಂಕಣಿ ಭಾಷೆ ಕತ್ತಲಿಂದ ಬೆಳಕಿಗೆ ಬರುವಂತಾಯಿತು. ಹಿಂದೂ ಕ್ರೈಸ್ತರೆನ್ನದೇ ಕೊಂಕಣಿ ಭಾಷಾ ಚಳುವಳಿಕಾರರು ಮುಂಬಯಿ, ಪುಣೆ, ಬೆಳಗಾಂವ ಎಲ್ಲೆಂದರಲ್ಲಿ ತಲುಪಿದರು. ಅಂತಹ ಕಾರ್ಯಕಿರ್ದಿಯ ಮಹತ್ತರ ಭಾಗ ಬಾಕಿಬಾಬ ಬೋರಕರರ ಸಾಹಿತ್ಯ ರಚನೆಯೆಂದು ಖಂಡಿತವಾಗಿಯೂ ಹೇಳಬಹುದು.

ಅಂತಹ ಒಂದು ಮನೋಸ್ಥೈರ್ಯ ಕೊಂಕಣಿಗಳಲ್ಲಿ ಉದಯವಾದ ಕಾಲದಲ್ಲಿ ಗೋವೆ 1961 ರಲ್ಲಿ ಸ್ವತಂತ್ರವಾದ ಮೇಲೆ 1962 ರಲ್ಲಿ ಗೋವೆಯಲ್ಲಿ ಗೋಮಾಂತಕ ಮರಾಠಿ ೧೧ನೇ ಸಾಹಿತ್ಯ ಸಮ್ಮೇಳನ ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿಯವರ ಅಧ್ಯಕ್ಷತೆ ಜರುಗಿತು. ಎನ್.ಜಿ.ಗೋರೆ ಆಚಾರ್ಯ, ಪಿ.ಕೆ.ಅತ್ರೆ ಅವರೂ ಆಮಂತ್ರಿತ ಭಾಷಣಕಾರರಾಗಿ ಭಾಗವಹಿಸಿದ್ದರು. ಬಾಕಿಬಾಬರೂ ಮುಂದಿನ ಸಾಲಿನಲ್ಲಿ ಹಾಜರಿದ್ದರು. ಅವರನ್ನು ನೋಡಿದ ಆಚಾರ್ಯ ಅತ್ರೆ ತಮ್ಮ ಉರಿಭಾಷಣದಲ್ಲಿ 'ಸ್ವತಂತ್ರ ಗೋವೆ ಮತ್ತು ಕೊಂಕಣಿ ಭಾಷೆಯ ಅಸ್ಮಿತೆಯ ಕನಸು ಕಾಣುತ್ತಿರುವ ಈ ಬಾಕಿಬಾಬ ಬೋರಕರ, ತನ್ನ ಸಾಹಿತ್ಯ ಮರಾಠಿ ಮತ್ತು

ಮರಾಠಿಗರಿಂದ ಬೆಳಕಿಗೆ ಬಂದುದನ್ನು ಮರೆತಿದ್ದಾರೆ. ಅವರ ಎಲ್ಲಾ ಸಾಹಿತ್ಯ, ಕಾವ್ಯ ಕಥಾ ಸಂಗ್ರಹಗಳನ್ನು ನಾವು ಮರಾಠಿಗರು ಪ್ರಕಟಿಸಿದೆವು. ಅವರಿಗೆ ಪುರಸ್ಕಾರ ಕೊಟ್ಟೆವು. ಪದಕಗಳನ್ನು ಕೊಟ್ಟೆವು.

ಅಂತಹ ಕೊಂಕಣಿ ಬೋರಕರರ ಎಲ್ಲಾ ಮರಾಠಿ ಸಾಹಿತ್ಯ ಕೃತಿಗಳನ್ನು ನನಗೆ ಹಿಂತಿರುಗಿಸಿರಿ. ನಾನು ಅದರ ಎಲ್ಲಾ ಬೆಲೆಯನ್ನು (ಹಣವನ್ನು) ಕೊಟ್ಟೇನು. ನಾನು ಅವನ್ನೆಲ್ಲವನ್ನೂ ಮುಂಬಯಿಯ ಶಿವಾಜೀ ಪಾರ್ಕಿನಲ್ಲಿ ಸಾರ್ವಜನಿಕ ಸಭೆಯನ್ನು ಕರೆಸಿ ಬೆಂಕಿ ಕೊಟ್ಟು ಹೋಳಿ ಮಾಡುತ್ತೇನೆ' ಎಂದು ಘರ್ಜಿಸಿದ್ದರಂತೆ. ಆದರೆ ಬಾಕಿಬಾಬ ಇಂತಹ ಗರ್ಜನೆಗಳಿಗೆ ಬೆಲೆಯನ್ನೇ ಕೊಡದೇ ಕೊಂಕಣಿ ಭಾಷೆಯ ಸೇವೆಯನ್ನೇ ಮುಂದುವರಿಸಿದರು. ಮತ್ತು ಗೋವೆ ಭಾರತದಲ್ಲಿ ಸ್ವತಂತ್ರ ಘಟಕ ರಾಜ್ಯವಾಗಿ ಇರಬೇಕು ಎಂಬ ನಿಲುವಿಗೆ ದೃಢವಾಗಿಯೇ ಅಂಟಿಕೊಂಡರು. ಮಹಾರಾಷ್ಟ್ರದ ಅತ್ಯುಚ್ಚ ಪದವಿಗಳು, ಪುರಸ್ಕಾರಗಳು ಸರಕಾರೀ ಬಿರುದಾವಳಿಗಳು ಅವರಿಗೆ ಕೈಗೆಟಕುವ ಸನಿಹವೇ ಇದ್ದವು. ಅವುಗಳನ್ನೆಲ್ಲವನ್ನೂ ತ್ಯಾಗಮಾಡಿ 'ಬಾಕಿಬಾಬ' ಕೊಂಕಣಿ ಮಾತೆಯ ಮಡಿಲಲ್ಲಿಯೇ ಇರುವುದನ್ನು ಬಯಸಿದರು.

'ಮರಾಠಿ ಸರಸ್ವತಿಯ ಸೇವೆಯನ್ನು ನಾನೇನು ಮಾಡಿದೆ? ಅದನ್ನು ಲಕ್ಷ್ಯಕ್ಕೆ ತಂದು ಪರಿಗಣಿಸಿ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದ ನನಗೆ ಲಭಿಸುವುದಾದಲ್ಲಿ ನಾನದನ್ನು ಅತೀ ನಮ್ರತೆಯಿಂದ ಸ್ವೀಕರಿಸುವೆ. ಆದರೆ ನನ್ನ ಮಾತೃಭಾಷೆ ಕೊಂಕಣಿ ಮತ್ತು ನನ್ನ ಮಾತೃಭೂಮಿ ಗೋವೆಗೆ ದ್ರೋಹ ಮಾಡುವುದು ನನ್ನಿಂದಾಗದ ಮಾತು. ಸ್ವಾಭಿಮಾನದ ಪ್ರಶ್ನೆ ಬಂದಾಗ, ನನಗೆ ಪ್ರಾಪ್ತವಾಗಬೇಕಾದ ಕೀರ್ತಿ ಮತ್ತು ವೈಭವಗಳನ್ನು ತಿರಸ್ಕರಿಸಲು ನಾನು ಹಿಂದೆ ಮುಂದೆ ನೋಡಲಾರೆ' ಎಂಬ ಛಲದ ಮಾತುಗಳನ್ನಾಡಿ ಬಾಕಿಬಾಬ ಮರಾಠಿಗರಿಂದ ಬಂದ ಎಲ್ಲಾ ತರದ ಆಮಿಷಗಳನ್ನು ಕಾಲಿನಿಂದ ಒದ್ದರು. ಇದು ಬಾಕಿಬಾಬರ ವ್ಯಕ್ತಿತ್ವಕ್ಕೆ ಸಾಕ್ಷಿ.

ಬಾಕಿಬಾಬರದ್ದು ನೀರೀಶ್ವರವಾದವಲ್ಲ. ಅದು ಆಧ್ಯಾತ್ಮಿಕವಾದದ ಅಭಿವ್ಯಕ್ತಿಯಲ್ಲಿಯೇ ಸಾಗುವ ಜೀವನ ಮತ್ತು ಸಾಹಿತ್ಯ. ಅವರು ದೇವರ ಸೃಷ್ಟಿಯಲ್ಲಿಯ ನಿಸರ್ಗವನ್ನು ಅದರ ಸೌಂದರ್ಯವನ್ನು ತನ್ನ ಕೃತಿಗಳಲ್ಲಿ ತಂದರು. ಮತ್ತು ಪಂಡಿತ ಪಾಮರರಾದಿಯಾಗಿ ಎಲ್ಲರೂ ಆಸ್ವಾದಿಸಲು ಕಾವ್ಯಗಳನ್ನು ಬರೆದರು. 'ತುಜ್ಯಾ ಪಾಂಯಾರ ಹಾಂವೆ ಘಾಲೆ ಉಡೀ ಬುಡಯ ನಾ ಜಾಲ್ಯಾರ ಪಾಯರೇ ತಡಿ' (ನಿನ್ನ ಕಾಲ ಬಳಿ ನಾನು ಬಂದು ಬಿದ್ದಿದ್ದೇನೆ, ಮುಳುಗಿಸು ಅಥವಾ ತಡೆದು ಎಬ್ಬಿಸು' ಎಂಬ ಭಕ್ತಿಭಾವ ಬಾಕಿಬಾಬರದ್ದು.

'ಸತ್ಯಂ ಶಿವಂ ಸುಂದರಂ' ಇದು ಸೌಂದರ್ಯ ಉಪಾಸಕ ಬಾಕಿಬಾಬರ ದೃಷ್ಟಿ.

ಅಂತಹ ಅಸಾಮಾನ್ಯ ವ್ಯಕ್ತಿತ್ವದ, ಉತ್ತುಂಗ ಧ್ಯೇಯವಾದಿ, ಸೌಂದರ್ಯ ಮೀಮಾಂಸಕನ ಶತಮಾನದ ಸ್ಮರಣೆ ಇಂದು ಕೊಂಕಣಿಗಳು ದೇಶದೆಲ್ಲೆಡೆ ಆಚರಿಸುವವರಿದ್ದಾರೆ.

ಬಾಕಿಬಾಬ ಬೋರಕರ ಅವರು ನಿಧನರಾದ ಸಂದರ್ಭದಲ್ಲಿ ಇನ್ನೊಬ್ಬ ಮಹಾನ ಕೊಂಕಣಿ ಕವಿ, ಸಾಹಿತಿ, ವಿಮರ್ಷಕ ಬಹುಭಾಷಾ ಪಂಡಿತ ಮತ್ತು ಬಾಕಿಬಾಬರ ಸಮಕಾಲೀನ ಡಾ. ಮನೋಹರರಾಯ ಸರದೇಸಾಯ ಅವರು ಈ ಕೆಳಗಿನ ಶಬ್ದಗಳಲ್ಲಿ ಬಾಕಿಬಾಬರಿಗೆ ಚರಮಾಂಜಲಿಯನ್ನು ಇತ್ತರು.

'ಬಾಕಿಬಾಬ ನೀನಿವತ್ತು ನಮ್ಮಲ್ಲಿ ಇಲ್ಲ. ಸತ್ಯವಾಗಿಯೂ ಕಾಣಲಾರೆ. ಬಾಕಿಬಾಬ, ನಿನ್ನಲ್ಲಿ ಗೊಂಯ ತುಂಬಿ ತುಳುಕಿತ್ತು. ಗೋವೆಯಲ್ಲಿ ನೀವು ಅರಳಿದಿರಿ'.

ನೀವು ತೆರೆಯ ಮರೆಗೆ ಸರಿದಿರಿ ಎಂಬುದು ಸತ್ಯವಲ್ಲ. ನೀವೆಂದರೆ ಮೂರ್ತಿಮಂತ ಕಾವ್ಯ. ಜೀವನದ ಕೊನೆಯ ಕ್ಷಣದವರೆಗೂ ನೀವು ಕಾವ್ಯದ ಗುಂಗಿನಲ್ಲಿಯೇ ಇದ್ದಿರಬೇಕು. ಬಯಾಬಾಬ (ಕಾಶೀನಾಥ) ಕೊಂಕಣಿ ಕಾವ್ಯದ ಗಿಡವನ್ನು ಬರಿದೇ ಆದ ನೆಲದಲ್ಲಿ ನೆಟ್ಟು ಅರಳಿಸಿದರು. ನೀವು ಕೊಂಕಣಿ ಸರಸ್ವತಿಯ ದೇವುಳದಲ್ಲಿ ನೂಪುರ (ಪಾಂಯಜಣಾ)ದ ಶಬ್ದವನ್ನು ಕೇಳಿಸುವಂತೆ ಮಾಡಿದಿರಿ. ಗೋವೆಯ ಜನತೆಯನ್ನು ಎಚ್ಚರಿಸಿದಿರಿ. ಎಲ್ಲ ಕಡೆಯಲ್ಲಿಯೂ ಕತ್ತಲು ತುಂಬಿದ್ದಾಗ, ನಮ್ಮ ಗೋವೆಯ ನಾಂದಿ ನೀವು ಹಾಡಿದಿರಿ. ನೀವು ಹಾಡಿದ ಗೋವೆಯ ಮತ್ತು ಕೊಂಕಣಿಯ ಸುರ್‌ಗಳು ನಮ್ಮ ತುಟಿಗಳ ಮೇಲೆ ಸದಾ ನಲಿಯುವುದು. ನಮ್ಮ ಹೃದಯದಂಗಳದಲ್ಲಿ ಸದಾ ಮೆಲುಕಾಡುವುದು.

ಸುಖ ಮತ್ತು ದುಃಖ ಇವೆರಡರಲ್ಲಿಯೂ ನೀವು ಸಹಜ ರೀತಿಯಲ್ಲಿ ರಮಿಸಿದಿರಿ. ಗಂಗೆಯ ಶೀತಳ ಧಾರೆಯನ್ನು ತಲೆಯ ಮೇಲೆ ತಡೆದು ನಿಲ್ಲಿಸಿ, ದುಃಖದ ವಿಷವನ್ನು ನುಂಗಿದಿರಿ. ಯಾವ ಸುಖಗಳು ನಿಮ್ಮ ಕಡೆ ಬಂದವೋ ಅವನ್ನು ನೀವು ತಿರಸ್ಕರಿಸಿದಿರಿ'' ಎಂದು ಚರಮಾಂಜಲಿಯಲ್ಲಿ ಹೇಳಿದ್ದಾರೆ.

ಅದನ್ನು ನಾವಿಂದು ಬಾಕಿಬಾಬ ಬೋರಕರ ಉರ್ಫ್ ಬಾಳಕೃಷ್ಣ ಭಗವಂತ ಬೋರಕರ ಅವರ ಜನ್ಮ ಶತಾಬ್ದಿಯ ಸ್ಮರಣೆಯ ಸಮಯದಲ್ಲಿ ಮತ್ತೊಮ್ಮೆ ನೆನಪಿಸುವುದು ಸೂಕ್ತವಾಗಿದೆ. ದೇವು ಬರೆಂ ಕೊರೊ.

* * *

ನೂಪುರದಿ ಪೋಣಿಸಿದ ಮಣಿಗಳು

पांयजणां

त्या दिसा वडाकडेन गडद तिनसनां
मंद मंद वाजत आयलिं तुजिं गो पांयजणां

मौन पडलें सगल्या राना
शिरशिरून थांबलिं पानां
कंवळि जाग आयलि तणा झेमतां झेमतना

पैसुल्यान वाजलि घांट
दाटलो न्हंयचो कंठ कांठ
सांवळ्यांनीं घमघमाट सुटलो त्या खिणा


फुलल्यो वैर चंद्रजोती
रंध्रांनीं लागल्यो वाती
नवलांचीं जावंक लागलिं शकुन लक्षणां

गळयां सुखां, दोळयां दुखां
लकलकलीं जावन थिकां
नकळटनां एक जालीं आमि दोगांय जाणां

वडफळांच्या अक्षदांत
कितलो वेळ न्हायत न्हायत
हुपले कितले चंद्रलोक, इंद्रनंदनां

तांतलें कांय नुल्लें आज
सगल्या जिणे आयल्या सांज
तरीय अकस्मात तुजीं वाजति पांयजणां

कानसुलांनीं भोंवति भोंवर
आंगार दाट फुलता चंवर
पट्टि केंन्नां सपनां तींच घट्टि जाग्रणां



ನೂಪುರ

ಆ ದಿನಾಂತದ ವೇಳೆ ವಟವೃಕ್ಷದಡಿಯಲ್ಲಿ
ಮೆಲುಉಲಿಯು ತೇಲಿಬರೆ ನಿನ್ನ ನೂಪುರದ

ಮೌನವಾಂತುದು ಬನವು
ಸ್ತಬ್ಧಕಂಪಿತ ಎಲೆಯು
ತೂಕಡಿಪ ಮೃದು ಹುಲ್ಲಿಗದೊ ಹೊಸ ಜಾಗರವು ಮೂಡೆ

ಎಲ್ಲೋ ದೂರದಿ ಗಂಟೆ ನಿನಾದ
ನದಿ ಮೇರೆ ಮೀರುತಿರೆ ಏನೋ ಉನ್ಮಾದ
ನೆರಳಿಂದ ಹೊಮ್ಮುತಿರೆ ಹೊಸತು ಸಿರಿಗಂಧ

ಆಗಸದಿ ಅರಳುತಿರೆ ಕೋಟಿ ಬೆಳಕಿನ ಪುಂಜ
ಅಂಗಾಂಗ ರಂಧ್ರದಲಿ ಹೊತ್ತಿರಲು ಬತ್ತಿ
ಶುಭಶಕುನ ಮೂಡಿದವು ಇನ್ನಿಲ್ಲದಂತೆ

ಸುಖದ ಅನುಭೂತಿಯಲಿ ಕಂಠಬಿಗಿಯಾಗಿರಲು
ಕಣ್ಣಂಚ ದುಃಖಾಶ್ರು ರತುನದಂತೆ ಹೊಳೆಯುತಿರೆ
ಒಂದಾದೆವು ನಾವಲ್ಲಿ ಅರಿವಿಲ್ಲದಂತೆ

ವಟಫಲದ ಅಕ್ಷತೆಯ ಸುರಿಸಿತದೊ ವಟವೃಕ್ಷ
ನಿರತಮಿಂದೆವು ನಾವು ಅದರಲ್ಲೆ ನೆನೆದು
ಚಂದ್ರಲೋಕದಿಂದಾಚೆ ಇಂದ್ರನಂದನಕೈದು

ಆದರೇನು ಗೆಳತಿ ಇಂದೇನೂ ಉಳಿದಿಲ್ಲ
ಜೀವನದ ಸಂಧ್ಯೆಯಲಿ ಏಕಾಕಿ ನಾನಿಲ್ಲಿ
ನಿನ್ನ ನೂಪುರದನಿಯು ಮತ್ತೆ ಧ್ವನಿಸುತ್ತಿಹುದು!

ನನ್ನ ಕಿವಿಗಳ ಬಳಿಯೇ ಭ್ರಮರ ಸುಳಿಸುಳಿದಂತೆ
ದೇಹವೇ ಚಿಗುರುತಿದೆ ಹೊಸ ಹುರುಪಿನಿಂದೆ
ಕನಸೆಂದು ಬೀಳುವುದೋ ಅಲ್ಲಿಂದ ಆರಂಭ
ಇರುಳಿಡೀ ಜಾಗರಣೆ ನಿನ್ನ ನೆನಪಿಂದ

दुःख कोणा चुकना

दुःख कोणा चुकना
संसाराची ताप नासताना
पूर्वपुण्य पिकना


हरिश्चंद्र भवजाळीं पडलो
परोपरीन वनवन विडविडलो
बायल, पूत, धन, राज्य व्हगडलो
लागुन ह्या मायणा

जाल्लें व्हेल्लें घर आसुन उंचेलें
शितेक पळेया कितलें भोगलें
घोव देव आसून हुल्पली
जावन भयो दैना

देवपुतां पांडवां अतिरथी
वश जाल्लो साक्षात श्रीपती
साह्य आसुन संसारसारथी
पडलें सामके उदणा

व्हडाव्हडांची ही असली गति
कुळक्षयय खर भोगलो श्रीपती
पळवन पुण हे मनिस अल्पमति
रतिभरय शिकना

भोग जिवा संसारयातना
असलो योग परतून येवचो ना
जळळयाबगर हें शास्त्र उमजना
तांतलि जोत जिखना



ದುಃಖ ಯಾರಿಗೂ ತಪ್ಪಿದ್ದಲ್ಲ

ದುಃಖ ಯಾರಿಗೂ ತಪ್ಪಿದ್ದಲ್ಲ
ಸಂಸಾರತಾಪ ಇಲ್ಲದಿರೆ
ಪೂರ್ವಪುಣ್ಯ ಫಲಿಸುವುದಿಲ್ಲ

ಭವಬಂಧನದಿ ಬಳಲಿದನು ರಾಜಾ ಹರಿಶ್ಚಂದ್ರ
ವನವನದಿ ಅಲೆದಾಡಿದನು ವಿವಿಧ ರೀತಿಯಿಂದ
ಸತಿ, ಸುತನ, ಧನ, ರಾಜ್ಯ ಕಳೆದುಕೊಂಡನು ಆತ
ಉಸುಕು ನೆಲದಲಿ ದೃಢವಿ ಹೆಜ್ಜೆ ಊರಲಾದೀತೇ?

ಹುಟ್ಟಿದ, ಸೇರಿದ ಮನೆತನಗಳು ಎಷ್ಟಿರಲಿ ಭವ್ಯ?
ಸೀತೆಯೇನು ಕಡಿಮೆ ಅನುಭವಿಸಿದಳೇ?
ಪತಿಯು ದೇವರೇ ಆದರೂ ಬೆಂದಳು
ದುರ್ದೆಸೆಯ ಪಾಡು ಪಟ್ಟಳು

ಇರಬಹುದು ಪಾಂಡವರು ಅತಿರಥಿಗಳು
ವಶನಾದನವರಿಗೆ ಸಾಕ್ಷಾತ್ ಶ್ರೀಪತಿ
ಜೊತೆಯಿದ್ದರೂ ಜಗದ ಸಾರಥಿ
ಸಂಕಟದ ಸಮಯದಿ ಅವರೂ ಮುಗ್ಗರಿಸಲಿಲ್ಲವೇ?

ದೊಡ್ಡವರದೇ ಹೀಗಿರಲು ಗತಿ
ಯಾದವೀ ಕಲಹದಿ ನೊಂದಿರಲು ಶ್ರೀಪತಿ
ಇದನೋಡಿಯಾದರೂ ಮನುಜನೆಂಬ ಅಲ್ಪಮತಿ
ಕಲಿಯಲಾರನದೇಕೆ ಬಾಳಿನಾ ನೀತಿ?

ಅನುಭವಿಸು ಜೀವವೇ ಜಗದ ಯಾತನೆಯ
ಮರಳಿಬಾರದು ಮಗದೊಮ್ಮೆ ಇಂಥಯೋಗ
ಉರಿದುದಲ್ಲದೆ ಇದರ ಅರಿವಾಗದು
ಭವಪಾಶದ ಜೊತೆಯಗೆಲ್ಲಲಾಗದು

चल्याची अर्थ

यो रे यो रे चांदीमामा भाच्या तुज्या पळय
मोतयांच्या झेल्या म्हज्या खांदार तुज्या खेळय

मावुळबडीर गेला, हाज्यो वरा सतरा कळा
पारजावरी चित हाजें पळटा जळा मळा

सांबाळूंक गेल्यार म्हाका खरस सामकि हाट्टा
दिसता म्हणसर खिणाभितर दोळयांर हात काट्टा


न्हाणैन म्हळयार मेळणा हाता आंगणां पोरसां हुपता
जैवौंक गेल्यार मेळणा उल्या गल्लांफाटल्यान लिपता

लाय रे देख मातशि हाका रीत इल्ली शिकय
घरच्यांचे थोमणे म्हजे तूंच आतां चुकय

घरां वज्रकेम्पांचीं हाका दाखै लिपय
अवजाळि हो गोलांट मारुन घेत तांचेर झोंपय

मात सांबाळ अप्सरांची नदर हाका लागत
तुजेभशेन दिसान दीस पंदरशींत भागत

असोच आंगणिं येवन हाका दोन उंडयो जेवय
न्हिदच्या वेळार तूंच हाजो अर्थीन जा रे गवय



ಕಂದನೆಂಬ ಕೊಂಡಾಟ

ಬಾರೋ ಬಾರೋ ಚಂದಮಾಮ ಈ ನಿನ್ನ ಸೋದರಳಿಯನ ನೋಡು
ನನ್ನ ಈ ಮುತ್ತಿನಗೊಂಡೆಯ ನಿನ್ನ ಹೆಗಲ ಮೇಲಾಡಿಸು

ಮಾವನನೇ ಹೋಲುವನೀತ, ಹದಿನೇಳು ಕಲೆಗಳಲ್ಲಿ ವಿಖ್ಯಾತ
ಪಾದರಸದಂತಹ ಚಿತ್ತದ ಇವನು ನಿಂತಲ್ಲಿ ನಿಲಲಾರ

ಸಂಬಾಳಿಸೆ ಹೋದರೆ ತರುವನಿವ ಏದುಸಿರ
ಕಂಡನು ಎಂಬ ಕ್ಷಣದಲ್ಲೇ ಕಾಣದಾಗುವನು ಈ ಚೋರ

ಮೀಯಿಸುವೆನೆಂದರೆ ಸಿಗನಿವ, ಅಂಗಳದಾಚೆಯ ತೋಟವ ದಾಟುವನು
ಉಣಿಸಲು ಹೋದರೆ ಸಿಗನೀ ಪೋರ, ಓಣಿಯ ಹಿಂದೆ ಅಡಗುವನು

ಶಿಸ್ತಿನ ಹಾದಿಗೆ ಈತನ ಹಚ್ಚಿ, ಒಂದಿನಿತು ರೀತಿ ನೀತಿಯನು ಕಲಿಸು
ಮನೆಮಂದಿಯ ವಾಗ್ದಾಳಿಗಳನ್ನು ನೀನೇ ಈಗ ತಪ್ಪಿಸು

ಮನೆಯ ಮಾಣಿಕ್ಯನಿವನು ಇವನ ತೋರಿಸಿ ಕೂಡಲೇ ಅಡಗಿಸು
ಜಗ ಪುಂಡನಿವ ಹಾರಿ ಬಿದ್ದಾನು ಅದರಿಂದವರನು ರಕ್ಷಿಸು

ಅಪ್ಸರೆ ಸ್ತ್ರೀಯರ ದಿಟ್ಟಿ ತಟ್ಟೀತು ಕೊಂಚ ಆ ಕಡೆ ಲಕ್ಷಿಸು
ಶುಕ್ಲ ಪಕ್ಷದೊಳು ನೀ ಬೆಳೆದಂತೆ ಬಳೆಯುವನೀತನು ಗಮನಿಸು

ಹಾಗೇ ಅಂಗಳಕೆಳೆದು ಎರಡು ತುತ್ತ ನೀ ಉಣ್ಣಿಸು
ಮಲಗಿರಲು ಈತ, ಜೋಗುಳ ಹಾಡಿ ಪ್ರೀತಿಯಿಂದ ನೀ ಮಲಗಿಸು

सपन-वासवदत्ता

काळखि रात आसुन वाटेर पुनव कशी ओत्ता
येता नगर-सुंदरता सपन-वासवदत्ता

ताटांत नवो, लामणदिवो चल्ली बाय देवळा
कानां वेडी, नाखा पिली, वज्रतिळो कपळा
आंगांत केळीकांडयेवरी मोडत वीज झेलता

हिज्या सयेन व्हीर जाले वयावेले भुरगे
नद्रेखातीर जाण्टेजुण्टे लेगित दिती अर्गे
हिज्या दयेर तिगलां नगर, रायालीय सत्ता

गीत म्हण्टा तेन्नां निळी रात जावंक लागता
रत्नांच्या झुमरानीं लक्ष वात जागता
पावलि मारूंक लागलि तशी इंद्रपदय हालता

घागरि घुमतां घुमतां मंद न्हिदे-धुंद फांकता
देवांचेय जागते दोळे पलकाभितर धांकता
ज्याचें जशें चित ताका तशें सपन घालता



ಸ್ವಪ್ನ - ವಾಸವದತ್ತೆ

ಕಾರ್ಗತ್ತಲ ಇರುಳಲ್ಲಿ ಬೆಳ್ದಿಂಗಳು ಇಳಿದಂತೆ
ಶೋಭೆ ತಂದಿಹಳೀ ಪುರಕೆ ಸ್ವಪ್ನ ವಾಸವದತ್ತೆ

ಪರಿವಾಣದಿ ಹೊಸ ತೂಗುದೀಪವಿರಿಸಿ ಹೊರಟಿಹಳು ಬಾಲೆ ದೇಗುಲಕೆ
ಕಿವಿಯಲಿ ಓಲೆ. ಮೂಗಲಿ ನತ್ತು ಹಣೆಯಲಿ ವಜ್ರದ ತಿಲಕ
ಬಾಳೆದಿಂಡಂತ ಅಂಗಾಂಗದ ತುಂಬ ವಿದ್ಯುತ್ತಿನ ರಸ ಸಂಚಾರ

ಇವಳ ಸೆಳೆತಕೆ ಬಿದ್ದ ಪಡ್ಡೆ ಹುಡುಗರು ಸೊರಗಿ ತಾ ಕಡ್ಡಿಯಂತಾಗಿಹರು
ಇವಳದೊಂದು ಕುಡಿನೋಟಕಾಗಿ, ವೃದ್ಧರೂ ಅರ್ಘ್ಯವನು ಅರ್ಪಿಸುತಿಹರು
ಇವಳ ಕೃಪಾ ಕಟಾಕ್ಷದಿಂದಲೇ ಉಳಿದಿಹುದು ಈ ನಗರ, ರಾಜಾಧಿಕಾರ

ಇವಳೊಮ್ಮೆ ಹಾಡಿದರೆ ದಟ್ಟ ನಿಶೆ ಕವಿಯುವುದು
ರತ್ನದ ತೂಗುದೀಪಗಳಲಿ ಲಕ್ಷಬತ್ತಿ ಹೊತ್ತಿ ಬೆಳಗುವುದು
ಇವಳ ಪಾದಾಘಾತಕೆ, ಇಂದ್ರ ಪದವಿಯೇ ಅಲುಗಾಡುವುದು

ಕಿರುಗೆಜ್ಜೆಯ ಮೆಲ್ಲುಲಿಯ ಪ್ರತಿಧ್ವನಿಗೆ ನಿದಿರೆಯೆಂಬ ಅಮಲು ಆಮರಿಕೊಳ್ಳುವುದು
ಅನಿಮಿಷ ದೇವರ ರೆಪ್ಪೆಗಳೂ ಕ್ಷಣ ಮಾತ್ರದಿ ತೂಕಡಿಸಿ
ನೀಡುವನು ಕನಸೊಂದ ಅವರವರ ಚಿತ್ತ ಬಯಸಿದಂತೆ

भावकेचें गीत

गोंय आमचें मूळपीठ, कोंकणीं आमची भास
कोंकणी संस्कृताय आमच्या जाण्ट्यांली मिरास

आसूं आमीं लागीं पैसे खैंय संसारार
जैत तांकां हाडूंक आमी घोळूं आठय पार
तांच्या जपान तुटत चल्ले सगले बंदपास


जिवीं आमच्या प्रीत आनी चलणुकेंत नीत
आमच्या मनीं मुखीं सदां माणुसकेचें गीत
दुर्बलांक ग्रास दिवंक काडूं केदेय त्रास

झाडापेडां-ओड आमकां मोनजातीचो भो
मनशापुढें तुच्छ आमकां सगलो सर्गभोग
तांच्या बऱ्याभल्या आमच्या पुण्यायेची रास

पूर्व आमचें कीर्तिवंत त्यापरस फुडार
गोंय आमकां करचें आसा भावकेचें कुळार
त्याखातीर पितरदेव धरून आसात आस

ह्याच खातीर जायतें आमी सोंसलां आजवैर
तपान आमच्या माल्लां आमी दुस्मानांचेंय वैर
सोंपत सगले आयले आतां त्रास बंदिवास

गोंय आमचें मूळपीठ, कोंकणी आमची भास
तांच्या जपीं तपीं आमच्या मुक्तिचे विलास



ಸಹೋದರತೆಯ ಹಾಡು

ಗೋವೆ ನಮ್ಮ ಮೂಲಮನೆಯು, ಕೊಂಕಣಿ ನಮ್ಮ ಆಡುನುಡಿಯು
ಕೊಂಕಣಿ ಸಂಸ್ಕೃತಿಯೇ ನಮ್ಮ ಪಿತ್ರಾರ್ಜಿತ ಆಸ್ತಿ

ಇರಬಹುದು ನಾವು ಈ ಜಗದಿ ಎಲ್ಲೋ ಒಂದೆಡೆ
ದಿನವಿಡೀ ದುಡಿಯೋಣ ಈ ಯಶವ ಕಾಪಿಡೆ
ಅವರ ತಪ ಫಲದಿಂದಾದುದು ಈ ಬಿಡುಗಡೆ

ಜೀವಂತವಹುದು ನಮ್ಮ ಪ್ರೀತಿ, ನಡತೆಯಲ್ಲಿ ನ್ಯಾಯನೀತಿ
ಮಾತುಕೃತಿಗಳಲಿ ಹೊಮ್ಮಿಹುದು ಸದಾ ಮನುಕುಲದಗೀತೆ
ದೀನ ಜನರಿಗೆ ತುತ್ತು ನೀಡಲು ಶ್ರಮವನಾಂತೆವು ಎನಿತು

ಈ ಮರಗಿಡ ಪ್ರಾಣಿಗಳು ನಮಗೆ ಬಲು ನೆಚ್ಚು
ಮನುಜ ಪ್ರೀತಿಯ ಇದಿರು ಸ್ವರ್ಗಸುಖವೂ ತುಚ್ಛ
ಅವರ ಏಳ್ಗೆಗೆ ಸಕಲ ಪುಣ್ಯಫಲವನು ಹಚ್ಚು

ಕೀರ್ತಿಶಾಲಿಗಳೆಂತೊ ಹಿರಿಯರು, ಕಿರಿಯರೂ ಅದೇ ಹಾದಿ ಹಿಡಿವರು
ಗೋವೆಯನು ನಾವ್ ಮಾಡಬೇಕಿದೆ ಸೌಹಾರ್ದದ ತೌರು
ಪಿತೃದೇವತೆಗಳಾಶಿಪರು ಸದಾ ಮನದಿ ಹಾರೈಸುವರು

ಇದಕಾಗಿ ಬಹುಸಹಿಸಿ ಉಳಿದೆವು
ವೈರಿ ಹಗೆಯನು ತಪದಿ ಕಳೆದೆವು
ಬಂಧಮುಕ್ತಿಯ ಕಾಲವೀಗ ತೀರ ಹತ್ತಿರವು

ಗೋವೆ ನಮ್ಮ ಮೂಲಮನೆಯು ಕೊಂಕಣಿ ನಮ್ಮ ಆಡುನುಡಿಯು
ಅವರ ಜಪತಪದಿಂದಲೇ ನಮಗಹುದು ಮುಕುತಿ

तुजे हात

हात्याभशेन हात तुजे गोरे गोरे पान गो
घरदार आठय पार भल्लें परमळान गो

बचकां तुजीं साळकांवरी
नाखटां तुजीं माणकांवरी
पळौनच जल्मजुगाची न्हिवता भूकतान गो


व्हंकल कशें सोबता घर
चान्नें जमनिवण्टींचेर
भायर भितर खेळटा घोळटा तीच नितळसाण गो

तांका लागुन हांसता पोरसूं
गोरवां लागति हरसूं वरसूं
उधळटात पाडकां झाडकां फुलौन कान पान् गो

तुज्या हातच्या परखन्नांनीं
वासरि भल्लि आप्तेष्टांनीं
देव धांवन आयले आंगणीं कीरमोर जावन गो

तुज्या हातच्या उदकानय
जोडटा जय, झडटा भंय
वाटसुऱ्यांची लागता लय घेवंक हेंय दान गो

पुण्यवंत असले हात
काळजार घेवंक सवनरात
सात जल्म झरैन हांव कूड आनी प्राण गो



ನಿನ್ನ ಕರಗಳು

ಕೇದಗೆಯಂಥ ನಿನ್ನೀ ಕೈಗಳು ಅಚ್ಚಬಿಳಿಯ ಚಿಗುರೆಲೆಗಳು ಕಣೇ
ಮನೆಮನಗಳು ತುಂಬಿ ಹೋಗಿವೆ ಮೃದು ಮಧುರಗಂಧದಿ ಕಣೇ

ನಿನ್ನ ಅಂಗೈಯೋ ತಾವರೆಯಂತೆ
ನಿನ್ನ ನಖಗಳೋ ಮಾಣಿಕ್ಯದಂತೆ
ಅದ ನೋಡಿಯೇ ತಣಿಯುದೆನ್ನ ಜನ್ಮಜನ್ಮಾಂತರದ ಹಸಿವು ನೀರಡಿಕೆ

ಕಂಗೊಳಿಸಿದೆ ಮನೆಯಿದು ನವವಧುವಿನಂತೆ
ನೆಲ, ಗೋಡೆ ತುಂಬೆಲ್ಲ ಬೆಳದಿಂಗಳೆರೆದಂತೆ
ಒಳ ಹೊರಗೆ ಶುಭ್ರತೆಯು ನಿನ್ನ ಮನದಂತೆ

ಕೈ ತೋಟ ನಗುತಿಹುದು ಕೈ ಚಳಕದಿಂದ
ಕಿವಿ ನಿಮಿರಿ ಕುಣಿಯುತಿವೆ ದನಕರುಗಳೆಲ್ಲ
ಎಲೆ ತೂಗಿ ಆಡಿಸಿವೆ ಗಿಡಮರದ ಗೆಲ್ಲ

ನಿನ್ನ ಅಡುಗೆಯ ರುಚಿಯು ಸವಿಯಲು
ಪಡಸಾಲೆಯ ತುಂಬ ಆಪ್ತೇಷ್ಟರ ಸಾಲು
ಅಂಗಳಕೆ ಧಾವಿಪರು ಮೇಲಿಂದ ದೇವರೇ ಗಿಳಿ, ನವಿಲುಗಳ ರೂಪವನು ತಳೆದು

ನೀನೆರೆದರೆ ಕರಗಳಿಂದ ನೀರು
ಜಯ ಸಿಗುವುದು, ಭಯ ಕಳೆವುದು
ಈ ದಾನವ ತಾ ಪಡೆಯೆ ಸರತಿಯಲಿ ನಿಂದಿಹರು ದಾರಿಹೋಕರು

ಪುಣ್ಯವಂತ ಈ ಕರಗಳ
ಎದೆಯ ಮೇಲಿಡೆ ಇರುಳೆಲ್ಲ
ಏಳೇಳು ಜನ್ಮದಿ ಸವೆಸುವೆನು ಈ ದೇಹ, ಈ ಪ್ರಾಣವೆಲ್ಲ

आनंदाचो दीस

आनंदांचो दीस् आज बाळक जल्मलें
ल्हान-व्हड आयले-पेले रडून हांसैले ताणें

फळाक गे आयली दोनय कुळांची पुण्याय
गोठ्यांत पान्हेली खंय बाबुल्याची गाय । बाये


आंगवणीक पावन देव पळया जालो ल्हान
घराचें गोकूळ जालें ताज्या दर्शनान । बाये

शीण विसल्ली गे माय पळया तिजें रूप
जायांचेर ओतली ही चांदन्याची ओप । बाये

बापायच्या काळजाक पळया केदे बेगीं ओड
साकरेपरसय् ताजें तोंड गोड गोड । बाये

आजयेच्या दोळयांत आयलें अम्रुताचें दूख
अंतल्लेलें आंयलें पुनां सर्गातलें सूख । बाये

घराचे हो दिवो हाजी माणकांची कांत
अर्थअपुर्बायेन गे करा तेलवात । बाये



ಆನಂದದ ದಿನ

ಆನಂದದ ದಿನವಿದು ಪುಟ್ಟಪೋರ ಜನಿಸಿಹನು
ಹಿರಿ-ಕಿರಿಯರ, ಬಂದ-ಹೋದವರ ಆಳಿಸಿ ನಗಿಸುತ್ತಿಹನು

ಫಲಿಸಿಹುದೆರಡು ಕುಲಗಳ ಪೂರ್ವದ ಪುಣ್ಯವು
ತುಂಬಿ ಸೋರೆ ಬಿಟ್ಟಿಹುದು ಹಟ್ಟಿಯಾಕಳ ಕೆಚ್ಚಲು

ದೇವನಾಗಿಹ ಕಂದ, ಹರಕೆ ಪಡೆದ ಆನಂದದಿಂದ
ಮನೆಯಹುದು ಗೋಕುಲವು ಇವನ ದರುಶನದಿಂದ

ನೋಡಿಲ್ಲಿ ಹೆತ್ತ ಆಯಾಸವನೆ ಮರೆತ ಈ ತಾಯರೂಪ
ಅಚ್ಚಮಲ್ಲಿಗೆ ಮೇಲೆ ಎರೆದಂತೆ ಬೆಳದಿಂಗಳ ಲೇಪ

ತಂದೆ ಹೃದಯದಿ ಉಕ್ಕಿ ಹರಿಯುತಿದೆ ವಾತ್ಸಲ್ಯ
ಮೊಗ ತುಂಬ ಸಿಹಿ ನಗೆಯು, ಮಾತು ಸಕ್ಕರೆ ಸವಿಯು

ಜಿನುಗುತಿದೆ ಅಮೃತಾಶ್ರು ಹಿರಿಯಜ್ಜಿ ಕಣ್ಗಳಲಿ
ಸ್ವರ್ಗೀಯ ಪಿತೃಗಳು ಹರಸುವರು ಆಗಸದಿ

ಮನೆಯ ನಂದಾದೀಪ ಇವಗೆ ಮಾಣಿಕ್ಯದ ಕಾಂತಿ
ಆರ್ತಿ ಅಕ್ಕರೆಯಿಂದಲಿ ಬೆಳಗಿ ಎಣ್ಣೆಬತ್ತಿಯ ಆರತಿ

तुजी गोडी लाय


भगवन्ता तुजी गोडि लाय
तुज्या गोडयेविण आस्त तुंटचिना हाडव्हर हें तें जाय
व्हगडटकच तें मात पट्टले जिवाक मिचमिच घाय

दीसरात सोंशीत घाय हे सोंपत आयली पिराय
तुज्या चिंतनाशिवाय ना रे अंतिम वखद उपाय

आजवेर हांव करीत रावलों जें जें तुका नसाय
कृपावंतपणिं तू तोखतालो मनांत म्हजी पिसाय

बायल भुर्गिं संसार पसारो आसुन ना थंडाय
भायर भितर दनपार गिमाचो, षड्रिपुची बंडाय

स्तवन तुजें कर कवन मुखीचें जें जें हें मन गाय
अम्रुताय उपजायत पदोपदिं अढळ सुखा तें पाय



ನಿನ್ನ ರುಚಿಯನು ಹತ್ತಿಸು

ಭಗವಂತಾ ನಿನ್ನ ರುಚಿಯನು ಹತ್ತಿಸು
ನಿನ್ನ ರುಚಿಯು ದೊರೆತುದಲ್ಲದೆ ಕಡಿಯಲಾರದು ಅದು ಇದು ಬೇಕೆಂಬ ಕಾಂಕ್ಷೆ
ಅದ ಕಳೆದುಕೊಂಡಲ್ಲದೆ ತೀರದು ಜೀವವ ಹಿಂಡುವ ಶಿಕ್ಷೆ

ಹಗಲಿರುಳು ಉಂಡು ನೋವನು, ವಯಸ್ಸು ತೀರುತ ಬಂದಿದೆ
ನಿನ್ನ ಚಿಂತನೆಯೊಂದೇ ಭವರೋಗಕೆ ಮದ್ದೆಂದು ಅರಿತೆ

ಇದುವರೆಗೆ ನಾಗೈದೆ ನಿನಗಿಷ್ಟವಿಲ್ಲದುದ
ಕೃಪಾವಂತ ಕರಗಳಿಂದೆ ನೀ ಅಳೆಯುತ್ತಿಹೆ ಮನದೆ ನನ್ನೀ ಹುಚ್ಚಾಟವ

ಮಡದಿ, ಮಕ್ಕಳು, ಸಂಸಾರ, ತೋಟ ಇದ್ದೂ ಇಲ್ಲವಾಗಿದೆ ಶಾಂತಿ
ಒಳ ಹೊರಗೆಲ್ಲ ಮಧ್ಯಾಹ್ನದ ಉರಿಬೇಗೆ, ಷಡ್‌ರಿಪುಗಳದೇ ಭ್ರಾಂತಿ

ಕವನ ಮುಖೇನ ನಿನ್ನಯಸ್ತವನ, ಮಾಡು ಮನವೇ ನೀ ಹಾಡು
ಸ್ಥಿರ ಸುಖವ ಅಡಿಗಡಿಗೆ ಪಡೆವೆ, ಅಮೃತಮಯ ಈ ಬಾಳು

जग हें जगम

स्नाप दिवं नाका जगाक न्हय रे सामकें वायट तें
स्वर्गा परस करुंक येता गोड गायत गायत तें


मेळणा किट्टीक दूध
बेबकां ना कमळगंध
सोदतल्याक मेळटा मात तो मनीं मोलायत तें

दिवन उणें घेवचें दुणें
फळटा जग आपले गुणें
प्रीतिविणें उरना जिणें जर बऱ्याक लायत तें

रोयता तेंच मेळटा पिके
वायट वान्सा व्हरता भिके
येवजिता मनीं परा येता घरा नुलैत तें

रचलां जग अिस्वारान
तोच जावन आस्ता प्राण
सांग मागिर ओगिच कशें दुःखमूळ जायत तें

आमट तुरट जिवित जरी
आसता जुस्त जगमावरी
अरळ मधुर म्होंव लागता जर खेळौन खायत तें



ಜಗವಿದು ಬೋರೆಹಣ್ಣು

ಶಪಿಸದಿರು ಜಗವನು ಅಲ್ಲ ಇದು ಅಷ್ಟು ಕೆಡುಕು
ಸ್ವರ್ಗ ಸದೃಶ ಮಾಡಬಹುದದನು ಆದರ ಒಳಿತನೆ ಹಾಡುತ

ಹಾಲಲಿ ಕರಿಬಣ್ಣ ದೊರೆಯದು
ಕಮಲದ ಗಂಧವ ಕಪ್ಪೆ ಅರಿಯದು
ಹುಡುಕುವಾತಗೆ ಮಾತ್ರ ದೊರೆವುದು, ಆತನೆಣಿಸಿದ ಬೆಲೆಯು

ಜೀವಿತವು ಇದೆ ಕಡಿಮೆ, ಇಮ್ಮಡಿಯ ನೀ ಪಡೆವೆ
ತನ್ನ ಗುಣವನು ಜಗವು ಫಲಿಸಿ ತೋರುವುದು
ಬದುಕು ಉಳಿಯದು ಪ್ರೀತಿ ಇರದಿರೆ, ಉತ್ತಮಿಕೆಗೆ ಅದ ನೀನು ಬಳಸದಿದ್ದರೆ

ನೀನೇನ ನೆಡುವೆಯೋ ಅದನೇ ಫಲವಾಗಿ ಪಡೆವೆ
ಕೆಟ್ಟವಾಂಛೆಯು ತಾ ಕೆಡುಕ ಬೆಳೆವಂತೆ
ಮನದಲೇನನು ಎಣಿಸುವೆಯೋ ಅದೇ ಮರಳಿ ದೊರಕುವುದು ಗುಣಿಸಿದಂತೆ

ಜಗವಿದು ಈಶ್ವರನ ಸೃಷ್ಟಿ
ಪ್ರಾಣ ರೂಪದಿ ಇರುವ ಎಲ್ಲೆಡೆಯೂ ಸುತ್ತಿ
ಇಂತಿರೆ ಎಂತು ಅದು ದುಃಖಕೆ ಕಾರಣ, ಸುಮ್ಮನೆ ಹೇಳಲೆ ಓ ಮನ

ಸಿಹಿ - ಹುಳಿಯು ಬೆರೆತಂತೆ ಈ ಜೀವನ
ಕಿರಿ ಬೋರೆ ಹಣ್ಣಂತೆ ಸವಿ ಮಿಶ್ರಣ
ಪರಿಪಕ್ವ ಮಾಧುರ್ಯ ಲಭಿಸುವುದು ಆತನಿಗೆ
ಸಾವಕಾಶದಿ ಬಾಯನಾಡಿಸಿ ಅದನು ತಿಂಬವಗೆ

ठुमरीं

याद न्हंय गो हो उजो
        हें दुख सोसूंक नजो । हाय रे देवा
जाळ हुलप हे कोणा भोगुं नये
        जीव उबगलो म्हजो । हाय रे देवा
म्हैनो म्हैनो हो चीट बरैना
म्हजि तर अशि ही चल्ल्या दैना
        जालो जायत काय दुजो । हाय रे देवा
याद न्हय गो हो उजो



ಠುಮರೀ

ನೆನಪಲ್ಲ ಇದು ಕಣೇ ಇದು ಬೆಂಕಿ
        ಈ ದುಃಖವ ತಾಳಲಾರೆನು, ಓ ದೇವರೇ
ಮತ್ಸರಿಪ ಈ ಉರಿಯನಾರೂ ಅನುಭವಿಸಬಾರದು
        ನನ್ನ ಜೀವನವೇ ಹರಿಹಂಚಾಗಿಹುದು, ಓ ದೇವರೇ
ತಿಂಗಳು ತಿಂಗಳೂ ಅವನೇಕೆ ಪತ್ರ ಬರೆಯನು?
ನನ್ನದೀ ದೈನ್ಯ ಹೀಗೆಯೇ ನಡೆದಿದೆ
        ಸಾಕಷ್ಟು ಬೆಂದಿರುವೆ ನಾ ವಿವಿಧ ಪರಿಯಲಿ, ಓ ದೇವರೇ
ನೆನಪಲ್ಲ ಕಣೇ, ಇದು ಬೆಂಕಿ

तांचें नांव


तांचें नांव घेवंचें कशें । गे बाये ।
        रुपागुणाक सोबत अशें ?

चान्न्या भशेन तांची नदर
भांगरान बांदचें एकेक उतर
ओंठ दांत केम्प वज्र
        ल्हानाव्हडाक तांचें पिशें

भाग्यवंत तांचो हात
लागल्यार गे खिणांत
मातयेचेंय भांगर जायत
        अम्रूतय गोड निशें

मन तांचें पुण्यशीळ
मळब जशें अिंद्रनीळ
नामनेचें कूळ शीळ
        गंगेचें मूळचशें

धा लाखांचें तांचें नांव
गाजता आज सगळो गांव
तोंड भरुन घेन हांव
        पुण गे फुकट घेवंचें कशें ?



ಅವರ ಹೆಸರು

ಅವರ ಹೆಸರ ಹೇಗೆ ಕರೆಯಲೇ ಸಖೀ
        ರೂಪಗುಣದಿಂದವರು ಇನಿತು ಶೋಭಿಸುವಾಗ?

ಅಳಿಲಿನಂಥ ಅವರ ನೋಟ
ಚಿನ್ನದಲಿ ಕಟ್ಟುವಂಥ ಒಂದೊಂದು ಮಾತು
ಮಾಣಿಕ್ಯದಂತ ಕೆಂದುಟಿಗಳು
        ಅಬಾಲ ವೃದ್ಧರಿಗೂ ಅವರದೇ ಹುಚ್ಚು

ಭಾಗ್ಯವಂತ ಅವರ ಕರಗಳು
ವ್ರಣವೂ ವಾಸಿಯಾಗುವುದು ತಾ ಸೋಕಲು
ಮಣ್ಣು ಕೂಡಾ ಆಗುವುದು ಹೊನ್ನು
        ತಿಳಿಗಂಜಿಯೂ ಸಿಹಿಯ ಅಮೃತ ತಾನು

ಅವರ ಮನಸೋ ಎನಿತು ಪುಣ್ಯಶೀಲ
ಸ್ವಚ್ಛ ಆಗಸದಂತೆ ಇಂದ್ರನೀಲ
ಖ್ಯಾತಿವೆತ್ತುದು ಅವರ ಗುಣ ಮತ್ತು ಕುಲ
        ಸರಿಸಾಟಿಯಾಗಿಹುದು ಅದಕೆ ಗಂಗಾಮೂಲ

ಹತ್ತು ಲಕ್ಷಕೆ ಒಂದು ಅವರ ಹೆಸರು
ಊರಿಡೀ ಅವರದೇ ಮಾತನಾಡುವರು
ಬಾಯ್ತುಂಬ ಕರೆದೇನು ಅವರ ಹೆಸರನು ನಾನು
        ಪ್ರಕಟಿಯಾಗಿ ಮಾತ್ರ ನಾ ಎಂತು ಕರೆದೇನು?

निळें सवणें

निळें निळें सवणें एक
सकाळच्या गो पारा
भांगराचीं घुंगरां बांदुन
आयलें म्हज्या दारा

सवणें गायत आलें तशें
झाडा पेडा लागलें पिशें
कोमऱ्यो आंकऱ्यो फुटुन म्हजें
पोंरसुं आयले चंवरा
निळें निळें सवणे एक
आयलें म्हज्या दारा

म्होंवान भल्ले फुलां - गले
हरयाळेक फुटले दोळे
अकस्मात अम्रुताचें
गीत सुचलें भोंवरा
निळें निळें सवणें एक
आयलें म्हज्या दारा

सवणें जिवा भिडुन गेलें
हांवय जालें गाड निळें
दिष्टाव्यान भेटलें हांव
म्हज्या राजकुंवरा
निळें निळें सवणें एक
आयलें म्हज्या दारा



ಅಚ್ಚ ನೀಲಿಯ ಹಕ್ಕಿ

ಅಚ್ಚ ನೀಲಿಯ ಹಕ್ಕಿಯೊಂದು
ಮುಂಜಾನೆಯ ಹೊತ್ತಿನಲ್ಲಿ
ಬಂಗಾರದ ಕಿರುಗೆಜ್ಜೆ ಕಟ್ಟಿ
ಎನ್ನ ಬಾಗಿಲಿಗೆ ತಾ ಬಂದಿತು

ಹಕ್ಕಿ ಹಾಡಿನ ಮಧುರ ಕಂಠಕೆ
ಮರಗಿಡಕೂ ಹುಚ್ಚು ಹತ್ತಿರೆ
ಹೊಸತು ಚಿಗುರು ಕುಡಿಯನೊಡೆಯುತ
ಕೈತೋಟವೆನ್ನದು ಅರಳಿದೆ
ಅಚ್ಚ ನೀಲಿಯ ಹಕ್ಕಿಯೊಂದು
ಎನ್ನ ಬಾಗಿಲಿಗೆ ತಾ ಬಂದಿತು

ಹೂವಗಲ್ಲದಿ ಜೇನು ತುಂಬಿತು
ಹಸಿರು ಹುಲ್ಲಿಗೆ ಕಣ್ಣು ಮೂಡಿತು
ಅಮರ ಗೀತೆಯ ಗುಣುಗುಣಿಸುತ
ದುಂಬಿಗಳು ಝೇಂಕರಿಸಿದುವು
ಅಚ್ಚ ನೀಲಿಯ ಹಕ್ಕಿಯೊಂದು
ಎನ್ನ ಬಾಗಿಲಿಗೆ ತಾ ಬಂದಿತು

ಪ್ರಾಣ ಪಕ್ಷಿಯು ಹಾರಿ ಹೋಯಿತು
ನೀಲವರ್ಣವ ದೇಹ ತಳೆಯಿತು
ದೃಷ್ಟಿಗೋಚರವಾದನೆನಗೆ
ನನ್ನ ರಾಜಕುವರ


तुज्या पांयार

तुज्या पांयार हांवें घाली उडी
बुडय ना जाल्यार पाय रे तडी

जायतो तळफेलों, जायतो वळपलों
तापत्रयिं या लासलों, हुल्पलों
थकलों आतां, तुजेर सोंपैल्यो
संसाराच्यो अडी नडी

सुख हांगचें हारशांची माया
अद्दड ही कंवचेची काया
कित्याचोच ना हांगा भरवंसो
कळणा केन्ना बसत बडी

तुजेबिणें जग व्यर्थ समर्था
निव्वळ जळ दुःखाक अनर्था
घाय हुलप है लाय सार्थका
तुज्या दयेची घालुन घडी



ನಿನ್ನ ಚರಣಗಳಲ್ಲಿ

ನಿನ್ನ ಚರಣಗಳಿಗಿದೋ ಉದ್ದಂಡ ನಮನ
ಮುಳುಗಿಸೋ ಇಲ್ಲದಿರೆ ದಡ ಸೇರಿಸೋ

ಸಾಕಷ್ಟು ನೊಂದಿರುವೆ, ಬೇಕಷ್ಟು ಬೆಂದಿರುವೆ
ತಾಪತ್ರಯಗಳಿಂದೆ ಸುಟ್ಟು ಸೀಕರಿಯಾದೆ
ಬಳಲಿ ಬೆಂಡಾಗಿರುವೆ, ನಿನಗೇ ಅರ್ಪಿಸುವೆ
ಸಂಸಾರದೀ ಎಲ್ಲ ವಿಘ್ನವಿಡ್ಡೂರಗಳ

ಸುಖವೆಂಬುವದು ತಾನು ಕನ್ನಡಿಯೊಳಗಣಗಂಟು
ದೇಹವೆಂಬುದು ತಾನು ಗಾಜಂತೆ ಸೂಕ್ಷ್ಮ
ಯಾತರದೂ ಇಲ್ಲ ತಾ ಭರವಸೆ
ಎರಗಬಹುದೆಂದೋ ದೊಣ್ಣೆಯೇಟು

ನೀನಿಲ್ಲದೀ ಜಗವು ವ್ಯರ್ಥವಲ್ಲವೇ ಪ್ರಭೂ
ದುಃಖ, ಅನರ್ಥಗಳ ತಿಳಿಗೊಳಿಸು ದೇವಾ
ಸಂಸಾರ ಪ್ರಣಬಾಧೆ ಉರಿಯನ್ನು ನೀಗಿಸಲು
ದಯೆಯ ಕರಗಳನಿರಿಸೋ ಶಿರದ ಮೇಲೆ

खुंटली गे तृष्णेची धांव

खुंटली गे तृष्णेची धांव दिसले देवा-पांय
यातना न्हिवली गे सगली पेखले सगले धांय

तुटले पास आतां सगलें विस्व घरदार
वेता थैं थैं जिवा म्हज्या ताजोच आधार

जिवाक गात्रांक आतां थंडाय गंदाची
जळीं स्थळीं सया निळी म्हज्या मुकुंदाची

सवण्याच्याय कंठी ताजी वाजता बाये वेणू
सोड्डा धार जीण म्हजी जावन कामधेनू

उजवाडा-काळखांत आतां ताजीच सासाय
मोग म्हजो जालो असो दुदावेली साय

करुं कित्या आतां पुजा ? हांवच फुलां-झाड
देव म्हज्या देहीं हांसता दिष्ट ताजी काड



ಕಿತ್ತೊಗೆದಿಹೆ ತೃಷೆಯ ಓಟವ

ಕಿತ್ತೊಗೆದಿಹೆ ತೃಷೆಯ ಓಟವ, ನಾ ಕಂಡಿರುವೆ ದೇವ ಪಾದವ
ಯಾತನೆಯು ತಾ ಶಮನವಾಗಿದೆ, ಗಾಯವೆಲ್ಲವು ಮಾಗಿದೆ

ಮನೆ, ಮಠ, ಅಖಿಲ ವಿಶ್ವದ ಪಾಶವನು ಕಡಿದೊಗೆದಿಹೆ
ಎಲ್ಲೆ ಹೋಗಲಿ ಎನ್ನ ಜೀವಕೆ ಅವನೆ ಆಸರೆಯಾಗಿರೆ

ತೇದಗಂಧವ ತಂಪು ಲಭಿಸಿದೆ, ಎನ್ನೀ ಜೀವಕೆ ದೇಹಕೆ
ಅಲ್ಲು ಇಲ್ಲು ಎಲ್ಲೆಲ್ಲು ತುಂಬಿದೆ ಮುಕುಂದ ನೀಲಿಯ ಛಾಯೆಯು

ಹಕ್ಕಿಗಳ ಕೊರಳಲ್ಲೂ ಆಲಿಪೆ ಅವನ ಮುರಳಿಯನಾದವ
ಕಾಮಧೇನುವಿನಂತೆ ಅವನಿರೆ ಬದುಕು ವಿಮುಕ್ತಿಯ ಕಂಡಿದೆ

ಹಗಲು ಇರುಳುಗಳೆರಡರಲ್ಲೂ ಕೃಪೆಯ ರಕ್ಷೆಯು ಕಾದಿದೆ
ಹಾಲ ಮೇಲಿನ ಕೆನೆಯು ರೀತಿ ಪ್ರೀತಿ ತಾ ದಟ್ಟೈಸಿದೆ

ಈಗೇಕೆ ಪೂಜೆಯ ನಾನು ಮಾಡಲಿ? ನಾನೇ ಹೂವ ಗಿಡವಾಗಿರುವಾಗ
ನನ್ನ ದೇವರು ಮುಗುಳು ನಗುವನು, ದೃಷ್ಟಿಯನು ನೀ ನಿವಾಳಿಸು ಬೇಗ

वेणु

हाजो वेणु कोणय पुण घेया काडुन
म्हजो संसार गेलो बाये झडुन पडुन
वेणु वाजलो तसो
जीव जाता पिसो
चित्त कशेंच कित्याचेर लागना
ओतो दुदा वेता
केल्लें आंगार येता
सारकें कितेंच हातून जथना
मागिर सगलींच बोंचती म्हाका घालुन पाडुन
दूद बसल्यार कांडूक
गाय तशें पाडूक
कान फुलौन भांबावन पळेता
गाय दुभच ना
वांसरु लुचच ना
आशिं नवलांचीं वेणूचीं ललितां
मागिर म्हाकाय दिसता वचचें दांवें तोडुन
वात सारतां सारतां
हांव विसरून वेतां
बोट भाजलें तरीय म्हाका जळना
सूर जिवीं भरुन
सुद्द वेता सरुन
कोणें दागलें भाजलें तेंय कळना
आसे जंत्रान या जीव काडला ओढून



ಕೊಳಲು

ಇವನ ಕೊಳಲನು ಯಾರಾದರೂ ಸೆಳೆದೊಯ್ಯಿರೇ
ನನ್ನ ಸಂಸಾರವಾಗಿಹುದಿವನಿಂದ ಅಸ್ತವ್ಯಸ್ತ
ಇವನು ಕೊಳಲನೂದಿದನೆಂದರೆ
ಹುಚ್ಚೇ ಹಿಡಿಯುವುದು ಎನಗೆ
ಏನ ಮಾಡಲಿ? ಚಿತ್ತ ಯಾತರಲೂ ನಿಲದು
ಹಾಲುಕ್ಕಿ ಹರಿಯುವುದು
ಮೈಮೇಲೇ ಸುರಿಯುವುದು
ನನ್ನ ಕೈಗಳಿಂದೀಗ ಏನೇನೂ ಸಾಗದು
ಎಲ್ಲರೂ ಮತ್ತೆ ನನ್ನನೇ ಹೀಗಳೆವರು, ಬಿರುನುಡಿಗಳನಾಡುವರು
ಹಾಲು ಕರೆಯಲು ಕುಳಿತರೆ
ಕರು ಮತ್ತು ಆಕಳು
ಕಿವಿ ನಿಮಿರಿಸಿ ತಬ್ಬಿಬ್ಬಾಗಿ ಅತ್ತಿತ್ತ ನೋಡುವವು
ಹಸುವು ಹಾಲನೇ ನೀಡದು
ಕರುವು ಹಾಲನೇ ಕುಡಿಯದು
ಈ ತೆರನ ಕೊಳಲ ಲೀಲೆಯು ಅದೇನೆಂದು ಬಣ್ಣಿಸಲೆ?
ಮತ್ತೆ ನನಗೂ ಅನಿಸುವುದು
ಕೊರಳ ಕುಣಿಕೆ ಸಡಿಲಿಸಿ ನಡೆದೇ ಬಿಡಲೇ?
ದೀಪದ ಬತ್ತಿಯನು ಮುಂದಕೆ ಸರಿಸರಿಸುತ್ತಾ
ನಾನು ಮರೆತೇ ಬಿಡುವೆ
ಬೆರಳೇ ಸುಟ್ಟರೂ ನನಗದರ ಅರಿವಾಗದು
ಕೊಳಲನಾದ ತುಂಬಿ ಹರಿವಾಗ
ಪ್ರಜ್ಞೆಯೇ ಇಲ್ಲದಂತಾಗುವುದು
ಯಾರು ಸಿಟ್ಟಾದರೋ ಯಾರು ಸುಟ್ಟು ಹೋದರೋ ಒಂದೂ
ತಿಳಿಯದಂತಾಗುವುದು
ಕಡುಕಷ್ಟದಿಂ ಈ ಜೀವವ ಇಂತು ಬಿಗಿ ಹಿಡಿದಿರುವೆ

भुपाळी

उगड तुजीं नयनदळां श्यामसुंदरा
भांगराचो चट्टा कळस विस्वमंदिरा

सृष्ट सगलि पांचवी चार
वाजता तांबयांत धार
शिपटें वेडो घेवन अधिर ही वसुंधरा

रुशिमुनिनीं श्लोक म्हळे
गुथुन जाले फुलां - झेले
दुदा - धयां वाटयो पेले भल्ले श्रीधरा

भरुन घेवन पडगो पळी
तीर्थ दीप पुष्पदळीं
लजत लजत आयली पुजे सजळ इंदिरा

उजळ जाल्यो सगल्यो दिशा
न्हावन धुवन आयलि उषा
हळदी कुकमांत घालुन सुपलिभर वरा



ಭೂಪಾಳೀ

ತೆರೆ ನಿನ್ನ ಕಣ್‌ದಳವ ಶ್ಯಾಮ ಸುಂದರನೆ
ಬಂಗಾರದ ಕಳಸವೇರುತಿದೆ ವಿಶ್ವಮಂದಿರದ

ಸೃಷ್ಟಿಯೆಲ್ಲವು ಹಚ್ಚ ಹಸುರಾಗಿಹುದು
ಕಳಶದ ನೀರಧಾರೆ ಸಶಬ್ದ ಸುರಿಯುತಿದೆ
ಫಲತಾಂಬೂಲ ಹಿಡಿದು ರಥಾಸೀನೆ ಈ ವಸುಂಧರೆ

ಋಷಿ ಮುನಿಗಳು ತಾ ಶ್ಲೋಕ ಹೇಳುತಿರೆ
ಹೆಣೆದು ಇರಿಸಿಹರಿಲ್ಲಿ ಹೂವ ಮಾಲೆ
ಹಾಲು ಮೊಸರಿನ ಬಟ್ಟಲದು ತುಂಬಿಹುದು ನೀ ಕೇಳೋ ಶ್ರೀಧರಾ

ಹರಿವಾಣ, ಉದ್ಧರಣೆ ತುಂಬಿವೆ
ತೀರ್ಥ, ದೀಪ, ಹೂದಳಗಳೂ ಅಣಿಯಾಗಿವೆ
ನಾಚುತ್ತಾ ನಾಚುತ್ತಾ ಪೂಜೆಗೆ ಬಂದಿಹಳು
ನೀರ ಬಿಂದಿಗೆ ಹಿಡಿದು ಇಂದಿರೆ

ಬೆಳಕು ತುಂಬಿಹುದು ಎಲ್ಲ ದೆಸೆ
ಮೀಯುತ್ತ ತೊಳೆಯುತ್ತ ಬಂದಳದೊ ಉಷೆ
ತಂದಿಹಳು ಹಳದಿ ಕುಂಕುಮ ಸಹಿತ ಮೊರ ತುಂಬ ವರವ

अशी तुजी कृपा

अशी तुजी कृपा बापा
        अशी तुजी कृपा
उपासांची ब्रतां जालीं
        त्रितापांचीं तपां
कालचीं दुखां जावन आयलीं
        अमृताचीं कुपां
कृपांजुळी पावस तुजो
        असो आंगार घेतां
एका सुखाचींच जालीं
        आंगणभर वितां
खतां मखां धुवन गेलीं
        व्हांवलीं सगलीं विखां
लसलसून आयलीं वैर
        पुण्यायेचीं पिकां
तुज्या हातचीं उदकां पसुन
        जालीं म्हाका तुपां
भोगतां तुजीं पदोपदीं
        अजापाचीं रुपां



ಈ ತೆರನಾದ ನಿನ್ನ ಕೃಪೆ

ಈ ತೆರನಾದುದು ನಿನ್ನ ಕೃಪೆ, ತಂದೆಯೇ
    ಈ ತೆರನಾದುದು ನಿನ್ನ ಕೃಪೆ
ಉಪವಾಸ ವ್ರತವನಾಂತೆ
    ತ್ರಿವಿಧ ತಾಪಗಳನೂ ಉಂಡೆ
ನಿನ್ನೆಯ ದುಃಖಗಳೆಲ್ಲವೂ ಇಂದು
    ಅಮೃತದ ಮಳೆಗರೆವ ಮುಗಿಲಾಗಿವೆ
ನಿನ್ನ ಕೃಪಾಂಜಲಿಯು ಸುರಿವ ಧಾರೆಗೆ
    ಮೈಯೊಡ್ಡಿ ನಾ ನಿಂತಿರುವೆ
ಒಂದೊಂದು ಸುಖವು ತಾ ಮರುಸುಖವ ಹೆತ್ತಿದೆ
    ಅಂಗಳದ ತುಂಬೆಲ್ಲ ಸಿರಿ ಸಮೃದ್ಧಿ ತುಂಬಿದೆ
ಮಲಿನ ಕಲೆಗಳು ತೊಳೆದು ಹೋಗಿವೆ
    ವಿಷದ ಪಾತ್ರೆಯು ಸೋರಿ ಈಗ ತಾ ಬರಿದಾಗಿದೆ
ಪುಣ್ಯಫಲವದು ನಳನಳಿಸಿ ತುಂಬಿ
    ಬೆಳೆಬೆಳೆದು ಸಿಹಿ ಹಣ್ಣಾಗಿದೆ
ನಿನ್ನ ಕೈಯ ಉದಕವೀಗ
    ಘೃತವಾಗಿ ಪರಿಮಳಿಸಿದೆ
ಹೆಜ್ಜೆಹೆಜ್ಜೆಗು ಬೆರಗಾಗಿ ಪಡೆವೆನು
    ನಿನ್ನ ವಿಸ್ಮಯ ರೂಪವ

मुक्तिदेवते


मुक्तिदेवते तुज्या नमन पावलां
विस्व पंचारती घेवन रावलां

शांती तूं कांति तूं
आत्म - उत्कांति तूं
सगळयो वेदश्रुती गायति नवलां

जाग्रुती नित्य तूं
सास्वती सत्य तूं
त्वद्रुपीं पुण्यधन आमकां पावलां

सायबिणी तुजेविणें
सुख उणें दुख दुणें
फुलचेलें जनजिणें सामकें बावलां

गे तुजी बिबुत दी
गे तुजें तीर्थ दी
सार्थ जावं दी तुवें दिल्लि कौलां



ಮುಕ್ತಿದೇವತೆ

ಮುಕ್ತಿದೇವತೆಯೇ ನಿನ್ನ ಪಾದಕೆ ಎರಗುವೆ
ವಿಶ್ವ ಪಂಚಾರತಿಯನೆತ್ತಿ ಸಿರಿ ಮೊಗವ ನಾ ಬೆಳಗುವೆ

ಶಾಂತಿ ನೀನು ಕಾಂತಿ ನೀನು
ಆತ್ಮದ ಪರಂಜ್ಯೋತಿ ನೀನು
ವೇದಶ್ರುತಿಗಳೆಲ್ಲ ಹಾಡಿವೆ ನಿನ್ನ ಅಚ್ಚರಿಯ

ನಿತ್ಯ ಜಾಗೃತಿಯು ನೀನು
ಶಾಶ್ವತ ಸತ್ಯವು ನೀನು
ನಮಗಿಂದು ಒದಗಿರುವ ಪುಣ್ಯಧನಳು ನೀನು

ದೇವಿಯೇ ನಿನ್ನ ಹೊರತು
ಸುಖವೆಂಬುದಿಲ್ಲ, ದುಃಖವೇ ಎಲ್ಲ
ಅರಳದೆ ಜನಜೀವನ ಬಾಡುವುದು ಸಲ್ಲ

ನಿನ್ನ ವಿಭೂತಿಯನು ಕೊಡು ತಾಯೇ
ನಿನ್ನ ತೀರ್ಥವನು ಕೊಡು ತಾಯೇ
ಸಾರ್ಥಕವಾಗಲಿ ನೀನಿತ್ತ ಅಭಯವಾಕ್ಯ

पण्टी

एक पण्टी भितर पेट्टा ती जगय रे ती जगय
घेवन आयला वांगडा जी तूं वाट सरतासर तिगय

गर्जेपुरती तीच दितली चलतल्या पावला पसय
उजवाडा कोणेंच पापया ल्हान केन्ना म्हणचें न्हय

जें फुडारांत सपन न्हिदलां तें उठय रे तें उठय
रे तुज्या पण्टेन जंय थंय मेळटा ती पण्टी पेटय

पण्टि न्हय ती गुप्त दुर्गा, कसलें भंय रे कसलें भंय ?
लक्ष शस्त्रान खेत्र जातलें, मेळटलो अंती विजय

तंववरी पण्टी जगय रे वात सरतासर तिगय
रात काळखी सरचे पैलीं मेळ्ळा तो उजय



ಹಣತೆ

ಒಂದು ಹಣತೆಯ ಹಚ್ಚುವೆ ಅಂತರಂಗದೊಳು ಕಾಪಿಡು ಅದನು ಕಾಪಿಡು
ಅದನೆತ್ತಿಕೊಂಡು ಬಂದಿರುವ ಸಹಚರಾ ದಾರಿ ತೀರುವವರೆಗೆ ಅದ ಆರಗೊಡಬೇಡ

ಅವಶ್ಯಪೂರ್ತಿ ಅದು ನೀಡುವುದು ನಡೆವ ಕಾಲ್ಬುಡಕೆ ದಾರಿದೀಪ
ಬೆಳಕನೆಂದಿಗೂ ಯಾರೂ ಕ್ಷೀಣವೆಂದು ಹೀಗಳೆಯಲಾಗದು

ಯಾರು ಭವಿಷ್ಯದ ಕನಸು ಕಾಣುತ ಮಲಗಿಹರೋ ಅವರನೆಚ್ಚರಿಸು
ನಿನ್ನ ಹಣತೆಯಿಂದಲೆ ಹೋದ ಬಂದೆಡೆಯೆಲ್ಲ ಮರುಹಣತೆಯ ಹಚ್ಚುತಿರು

ಬರಿಹಣತೆ ಅಲ್ಲವಿದು ಗುಪ್ತ ದುರ್ಗೆಯಂತಿರಲು ಯಾತರ ಭಯ ನಿನಗೆ?
ಲಕ್ಷಶಸ್ತ್ರಗಳಿಂದ ಹರಿಯಬಹುದು ನೆತ್ತರಹೊಳೆ, ಸಿಗಲಿದೆ ಅಂತಿಮ ವಿಜಯ

ಅದುವರೆಗೂ ಹಣತೆಯ ಕಾಪಿಡು, ಬತ್ತಿ ತೀರುವವರೆಗೂ ಉರಿಸುತ್ತಿರು
ರಾತ್ರಿಯ ಕತ್ತಲೆ ಕರಗುವ ಮುನ್ನ, ಪಡೆದ ಜನ್ಮವ ಸಾರ್ಥಕಗೊಳಿಸು

दीस गेला खाला


दीस गेला खाला, चंद्रिम वैर आयला
कळणा कोणें आमारेचो राग असो लायला

चंद्रदेवा सांग रे म्हाका
ओगीच कुपां पांगरुं नाका
मोगा म्हज्या मोवाळ करुन खंय तुवे पावैला

कोणे मोडां - लकारांनी
बावक्या फुलांर मारुन पाणी
पारथ्या आपल्या सुवासांनी सांग ताका भुलैला

भिजौन हांव सारतां वाती
दिसार पसुन लागना पाती
जाल्यो आतां तीन राती जीव गोळा लागला

गायतां लायतां ताजेंच नांव
पळौंक ताका मरतां हांव
नुलैत ताका सांग हांवें जळटना आपैला



ಹಗಲು ಕೊನೆಯಾಗಿಹುದು

ಹಗಲು ಕೊನೆಯಾಗಿಹುದು, ಚಂದಿರನು ಮೇಲಕೆ ಬಂದಿಹನು
ಅರಿಯೆ ಯಾರೆಂದು ಹಚ್ಚಿಹರು ಸಂಧ್ಯಾರಾಗದ ಆಲಾಪವನು

ಚಂದ್ರದೇವನೆ ಹೇಳು ನೀ ನಿನಗೆ
ಸುಮ್ಮನೇ ಮೋಡದ ಹಿಂದೆ ಮರೆಯಾಗಬೇಡ
ನನ್ನ ಪ್ರೀತಿಯ ಪತ್ರಗೆ ಮಾಡಿ ಅದನೀಗ ಎಲ್ಲಿಗೆ ತಲುಪಿಸಿರುವೆ

ಯಾರಾಕೆ ನನ್ನವನ ಮೋಹಿಸಿಹಳು?
ಬಾಡಿದ ಹೂವಿನ ಮೇಲೆ ನೀರನೆರಚಿ
ಕಳೆಗುಂದಿದ ಸುವಾಸನೆಯಿಂದಲೇ ಆತನ ಮರುಳು ಮಾಡಿಹಳು?

ತೈಲದಲಿ ನೆನೆಸಿ ಬತ್ತಿಯನು ಸರಿಸುತ್ತಿರುವೆ
ಹಗಲಲ್ಲೂ ಕಣ್ಣರೆಪ್ಪೆ ಕೊಂಚವೂ ಹತ್ತುವುದಿಲ್ಲ
ಇದೀಗ ಸರಿದಿಹುದು ಮೂರನೆಯ ಜಾವ, ಸೋತು ಹೋಗಿದೆ ನನ್ನೀ ಜೀವ

ಹಾಡುವೆನು, ಹಚ್ಚಿಹೆನು ಅವನದೇ ಹೆಸರು
ಅವನ ನೋಡದಿರೆ ಸಾಯುವೆನು ನಾನು
ಅನುನಯದಿ ಹೇಳುವಾಗೆ, ನಾನಿಲ್ಲಿ ಉರಿವೆನೆಂದು, ಅವನನೊಮ್ಮೆ ಬರಹೇಳಿಹೆನೆಂದು

तुज्याबगर

तुज्याबगर म्हजी खबर
घेतलो कोण दुसरो ?

तुज्याबगर जिवा म्हज्या
दितलो कोण आसरो

कांयच हांव सांगना कोणा
हृदय म्हजें तूंच जाणा

तुजे फुंके बगर कसो
पेखचो म्हजो कातरो ?

संवसाराचें तोडलें दावें
किर्द सगलि लासली हांवे

तुज्या नांवान पावणेर आतां
काडला मांड पसरो

तूंच आतां पावय रीण
सा करुन सगलि जीण

तुज्या धिरार ओता कडार
हांव जालां निलाजरो



ನಿನ್ನ ಹೊರತು

ನಿನ್ನ ಹೊರತೆನ್ನ ಬನ್ನವ ಆಲಿಸುವರಾರು ಅನ್ನ?

ನಿನ್ನ ಹೊರತೆನ್ನ ಜೀವಕೆ ನೀಡುವವರಾರು ಮಾನ್ಯ?

ನಾನೇನೂ ಈಗ ಹೇಳಲಾರೆ

ನೀನಾಗಿ ನನ್ನ ಮನವ ಅರಿತಿರುವೆ

ನಿನ್ನ ಮೃದು ಸ್ಪರ್ಶವಿಲ್ಲದೆ

ನನ್ನೀ ಗಾಯ ಮಾಯುವುದೇ?

ಜಗದ ಬಂಧನವೆಲ್ಲ ನಾ ಕಳಚಿಕೊಂಡಿರುವೆ

ಆಶೆ ಆಕಾಂಕ್ಷೆಗಳನೆಲ್ಲ ನಾನು ಸುಟ್ಟಿರುವೆ

ನಿನ್ನ ಹೆಸರಲಿ ಹರಾಜಲಿ ಪಡೆದಿರುವೆ ಅಂಗಡಿ ಮುಂಗಟ್ಟುಗಳ

ನನ್ನೀ ಜೀವನವನೇ ಹರಾಜಿಗೆ ಒಡ್ಡಿ

ಸಾಲವನು ತೀರಿಸಲು ನೀನೇ ಬಾರಯ್ಯ

ನಿನ್ನ ಬಲದಿಂದಲೇ ಬಿರುಬಿಸಿಲ ಧಗೆಯಲ್ಲೂ

ಬೆದರದೆ ನಿಂದಿಹೆನು ನಿರ್ಲಜ್ಜೆಯಲ್ಲಿ

म्हाका पल्तडिं पाय

व्हडें आल्तडिं लाय म्हाका पल्तडिं पाय
जयं सुख थंडाय पांडुरंगा

कांय बांदचेलें ना कांय घेवचेलें ना
जग साय नसाय पांडुरंगा


हांगा कांय खरें न्हय मना भोंवतणिं वंय
सुख दुःख पिसाय पांडुरंगा

गुंडे पट्टना जावं फुलां झट्टना जावं
तुजि फळळि सासाय पांडुरंगा

ओत मोव जालां दळभार फुलां
सांवळयांत निळाय पांडुरंगा

तुजेवीण म्हाका आतां कांयच नाका
जा तूंच थाकाय पांडुरंगा

जड न्हय रे म्हजें तुका जावचें वजें
शरिरय ल्हाव ल्हाय पांडुरंगा



ಈ ಕಿರುನಾವೆಯ ದಡಮುಟ್ಟಿಸು

ಈ ಕಿರುನಾವೆಯ ಆ ದಡಕೆ ಮುಟ್ಟಿಸು
ನನ್ನನೀ ದಡಕೆ ತಲುಪಿಸು
ಎಲ್ಲಿ ಸುಖ, ಶಾಂತಿ ಇದೆಯೋ ಅಲ್ಲಿಗೆ, ಪಾಂಡುರಂಗ

ಏನನ್ನೂ ಕಟ್ಟಿಕೊಂಡಿಲ್ಲ, ಏನನೂ ತೆಗೆದುಕೊಂಡುದೂ ಇಲ್ಲ
ಜಗದ ಒಳಿತು ಕೆಡುಕು ಚಿಂತನೆಗಳಷ್ಟೆ, ಪಾಂಡುರಂಗ

ಇಲ್ಲಿ ಎಲ್ಲವೂ ನಿಜವಲ್ಲ, ಮನಕೆ ಅಡೆತಡೆಗಳಿವೆಯಲ್ಲ
ಸುಖ ದುಃಖವೆಂಬುದು ಹುಚ್ಚಾಟವಲ್ಲವೇ? ಪಾಂಡುರಂಗ

ಕಲ್ಲು ಬಂಡೆರಗುವಾಗ, ಹೂವ ಮಳೆ ಸುರಿವಾಗ
ನಿನ್ನ ಕೃಪೆಯ ನೆನಪೊಂದೆ, ಪಾಂಡುರಂಗ

ಬಿಸಿಲು ಮಾಗಿಹುದೀಗ, ಹೂ ಕೂಡಾ ಬಲುಭಾರ
ನೆರಳಲ್ಲಿ ತೋರುವುದು ನಿನ್ನ ನೀಲವರ್ಣ, ಪಾಂಡುರಂಗ

ನಿನ್ನ ಹೊರತೆನಗೆ ಈಗೇನೂ ಬೇಕಿಲ್ಲ
ನೀಡೆನಗೆ ಚಿರಮುಕ್ತಿ, ಪಾಂಡುರಂಗ

ನಿನಗೆ ನಾನೇನು ಹೊರಲಾರದ ಒಜ್ಜೆಯೇ?
ಅರಳಂತೆ ಹಗುರವೀ ಕಾಯ, ಪಾಂಡುರಂಗ

तुवें म्हजेर मोग केलो ना जायत

तुवें म्हजेर मोग केलो ना जायत
पुण हांव तो तुजेर करीत आयलां तो कितें न्हय
जाला ?
तूं कित्याक परतिता मान परती परती ?
ताजोच तुका भंय जाला ?
वच तूं सुसेगाद, तो तिसऱ्याक कळचेलो ना
आनी मुरीं पडलीं तरी जळचेलो ना
तो पाथेतलो काळखांत कणकींनीं हेडटना
परमळटलो दोंगरार चंद्रिम उदेतना
पातळटलो न्हंयेच्या उदकार फांतोटेची किरमीच झडटना
कळळोच जाल्यार तो कळत रुजपी रोवाक
फुलपी फुलाक. झाडावैल्या अमुरपिक्या फळाक
आनी घाया कणकणीं कोमरी धरपी वर्स -
संकीच्या शीतळ वडाक
मनशांची वाट वेगळी. तांकां ताजी नात
लागपाची ना
मात अेक कर. मध्यान रातचें म्हगेलें अलगूज
तुज्या माळयेच्या जनेलांतल्यान आयकुं नाका
आनी हांव वेळेवेल्यान परततना तुका हटकि
नासताना गेलों जाल्यार हाजेर ताजेर तिडकुं
नाका.




ನೀನು ನನ್ನನ್ನು ಪ್ರೀತಿಸಿಲ್ಲದಿರಬಹುದು

ನೀನು ನನ್ನನ್ನು ಪ್ರೀತಿಸಿಲ್ಲದಿರಬಹುದು
ಆದರೆ ನಾನು ನಿನ್ನನ್ನು ಪ್ರೀತಿಸುತ್ತಲೇ ಇರುವುದನ್ನು
ಅಲ್ಲಗಳೆಯಲಾದೀತೇ?
ನೀನೇಕೆ ಕತ್ತನ್ನು ಮತ್ತೆ ಮತ್ತೆ ಹೊರಳಿಸಿ ನೋಡುವೆ?
ಅದರದೇ ನಿನಗೆ ಭಯವೇ?
ನೀನು ನೆಮ್ಮದಿಯಿಂದ ಹೋಗು
ಅದು ಮೂರನೆಯವರಿಗೆ ತಿಳಿಯುವುದೂ ಇಲ್ಲ
ಬೂದಿಯಲಿ ಬಿದ್ದರೂ ನನ್ನೊಲವು ಸುಟ್ಟು ಹೋಗದು
ಈ ಗುಟ್ಟುರಟ್ಟಾದೀತು, ಕಡುಕತ್ತಲೆಯ ವೇಳೆ
ಬಿದಿರ ಮೆಳೆಗಳ ನಡುವೆ ನಾ ಅಡ್ಡಾಡುತಿರೆ.
ಅದರ ಪರಿಮಳ ಪಸರಿಸೀತು,
ಗುಡ್ಡದಂಚಲಿ ಚಂದ್ರಮನುದಿಸುವಾಗ.
ಅದು ಹಬ್ಬೀತು ಪ್ರಾತಃ ಕಾಲದ ನೇಸರನ ಎಳೆಯ ಕಿರಣಗಳು
ನದಿನೀರಲಿ ಬಿದ್ದಾಗ.
ತಿಳಿದರೆ ತಿಳಿದೀತು ಅದು ಕುಡಿಯೊಡೆವ ಹುಲ್ಲಿಗೆ,
ಅರಳುವ ಹೂವಿಗೆ, ಗಿಡದಲ್ಲೇ ನಗುವ ಅರೆಮಾಗಿದ ಹಣ್ಣಿಗೆ
ಮತ್ತು ಪಡೆದ ಪ್ರತಿಗಾಯದಲ್ಲೂ ಹೊಸ ಚಿಗುರೊಡೆದು
ಅನಂತ ವರ್ಷದಿ ನಿಂತ ಶೀತಲ ವಟವೃಕ್ಷಕ್ಕೆ
ಮನುಷ್ಯರ ವಿಚಾರವೇ ಬೇರೆ,
ಅವರಿಗದು ಅರಿವಾಗುವುದೇ ಇಲ್ಲ
ನನಗಾಗಿ ಇದೊಂದನ್ನು ಮಾಡುವೆಯಾ?
ಮಧ್ಯರಾತ್ರಿಯ ಸಮಯ ನನ್ನ ಹೃದಯದ ಪಿಸುಮಾತ,
ನಿನ್ನ ಉಪ್ಪರಿಗೆಯ ಕಿಟಕಿಯಿಂದ ನೀ ಆಲಿಸದಿರು
ಮತ್ತೆ ನಾನು ಕಡಲತಡಿಯಿಂದ ಮರಳುವ ವೇಳೆ,
ನಿನ್ನ ಛೇಡಿಸದೇ ತೆರಳಿದರೆ,
ಅವರಿವರ ಮೇಲೆ ಹರಿಹಾಯಬೇಡ

आबोल्यांची फांती


कुपांत जोगुल तशी तुजी आबोल्यांची फांती
वांयगणाची चोळी, कापड रगत खणी - माती

चिरो कशी फाट, कमर करगुटाचो मुडो
उज्या किटी झडैत वता कोंपरमेरेन चुडो

काळशि जांभळी पौंट नितळ तळपाची कान्त
कळटा म्हाका भंगली कशी पराशरा - शान्त

दनपारांच्या कडार पसुन दोळयांर येता सा़ंज
वाजता दोनय कानसुलांनीं आकांताळी झांज

चलता तशें चलत राव, परतुं नाका मान
भरतें माप उमथें जायत तुटुन म्हजें त्राण



ಕನಕಾಂಬರದ ಮಾಲೆ

ಕಾರ್ಮುಗಿಲ ನಡುವೆ ಮಿಂಚು ಹೊಳೆಹೊಳೆದಂತೆ
ನಿನ್ನ ಮುಡಿಯೊಳಿರುವ ಈ ಕನಕಾಂಬರದ ಮಾಲೆ

ಹಸಿರು ಬಣ್ಣದ ರವಕೆ, ರಕ್ತವರ್ಣದ ಸೀರೆ
ಶಿಲೆಯಂಥ ದೃಢಬೆನ್ನು, ಛತ್ತದ ಮುಡಿಯಂಥ ಸೊಂಟ
ಬೆಂಕಿ ಕಿಡಿಯು ಕಾರುತ್ತಿವೆ ಮೊಣಗಂಟವರೆಗಿನ ಬಳೆಗಳ ಸಾಲು

ನಸುಕಪ್ಪು ನೇರಳೆ ವರ್ಣದ ಹೊಳೆವ ಮೊಣಕಾಲ ಕಾಂತಿ
ಅಚ್ಚರಿಯಿಲ್ಲ ಭಂಗವಾದಲ್ಲಿ ಪರಾಶರನ ಶಾಂತಿ

ನಡು ಮಧ್ಯಾಹ್ನದ ತಾಪದಲೂ ಸಂಜೆ ತಂಪಿನ ಅನುಭವ ಕಣ್ಗೆ
ಕಿವಿಗಳೆರಡರ ಬಳಿಯೂ ನುಡಿಯುತ್ತಿದೆ ಗೊಂದಲದ ತಾಳ

ನಡೆಯುತ್ತಿರುವಂತೆ ನಡೆಯುತ್ತಿರು ಹಿಂತಿರುಗಿಸದಿರು ಕತ್ತು
ನನ್ನ ಭಾವನೆಗಳ ಪ್ರಾಣ ಪಾತ್ರೆ ಬೋರಲಾಗಿ ಸೋರಿ ಹೋದೀತು ತ್ರಾಣ


वाजता तुजें बीन

वाजता तुजें बीन
ताजेर चीज नवनवीन

भायर भितर सूर तुजो
केन्ना पावस केन्ना उजो
भिजतां भिजतां लीन हांव
हुल्पतना दीन

गायशि मेघ गायशि दीप
तितलो तितलो तूं समीप
तांचेवरविं फुलत झडत
वाडटा म्हजी जीण

तुजे कृपे ना रे तुळा
अम्रुताचें शिंपणें मुळा
ओंपलो जल्म तरीय तुजें
सोंपचें ना रे रीण



ಮಿಡಿಸುತಿಹೆ ನಿನ್ನ ವೀಣೆ

ಮಿಡಿಸುತಿಹೆ ನಿನ್ನ ವೀಣೆಯಲಿ
ಹೊಸ ಹೊಸತು ರಾಗಗಳ

ನಿನ್ನ ರಾಗದ ಮದಿರೆ, ನನ್ನ ಒಳ ಹೊರಗೆಲ್ಲ
ಒಮ್ಮೆ ಮಳೆ ಸುರಿದಂತೆ, ಮಗದೊಮ್ಮೆ ಬೆಂಕಿ
ಅದರಲ್ಲೇ ನೆನೆನೆನೆದು ನಾನಿಲ್ಲಿ ಲೀನ,
ಉರಿಉರಿದು ದೀನ

ನೀ ಹಾಡಲು ಮೇಘರಾಗ, ನೀ ಹಾಡಲು ದೀಪರಾಗ
ಅಷ್ಟಪುಷ್ಪ ಸರಿಯುತಿಹೆ ನೀ ನನ್ನ ಸಮೀಪ
ಅವುಗಳಂತೆ ಅರಳುತ್ತ, ಬಾಡುತ್ತ
ವಿಕಸಿತವು ಎನ್ನೀ ಜೀವನ


ನಿನ್ನ ಕೃಪೆಗೆ ಹೋಲಿಕೆಯೇ ಇಲ್ಲ
ಅಮೃತಸಿಂಚನಗೈವೆ ಪದತಲದಿ ಎಲ್ಲ
ಜನುಮವನೇ ಧಾರೆಯೆರೆದರೂ
ಋಣವ ತೀರಿಸಲಾರೆನೇ
ನಿನ್ನ ಋಣವ ತೀರಿಸಲಾರೆನೇ

शत जल्म पुण्यतायेन

शत जल्म पुण्यतायेन नरजल्म भारतांत
वेद श्रुती पुराणां हर्सून वर्णितात
गगनाय परस उंचेले हावेस हे भुंयेचे
गंगेयपरस घोगेले हुटके हिचे दयेचे
ध्यासान हिच्या गिमांतय वरमेघ वसंताता
शत जल्म पुण्यतायेन नरजल्म भारतांत

उद्दिष्ट हे जिणेचें पैली हिणेंच मोखलें
प्राणीं चराचराच्या आपलेंच रुप देखलें
तप फळटलें हिचें हें फायच्या जगायुगांत
शत जल्म पुण्यतायेन नरजल्म भारतांत

काळजांत आसचि प्रीत चलपांत सत्य नीत
उत्तुंग कर्तुपान रेखचें हिचें चरीत
स्रय हें अपूर्व जोडचें हांगच्याच जीवितांत
शत जल्म पुण्यतायेन नरजल्म भारतांत



ನೂರು ಜನುಮದ ಪುಣ್ಯಫಲದಿಂದ


ನೂರು ಜನುಮದ ಪುಣ್ಯಫಲದಿಂದ ನರಜನ್ಮವಹುದೀ ಭಾರತದಿ
ವೇದ, ಶ್ರುತಿ, ಪುರಾಣಗಳು ಹರಸಿ ಬಣ್ಣಿಸುತಿವೆ,
ಗಗನಕ್ಕಿಂತಲೂ ಉನ್ನತವು ಈ ನೆಲದ ಆದರ್ಶ,
ಗಂಗೆಗಿಂತಲೂ ಆಳ ಇವಳ ದಯಾ ಸರೋವರ,
ಇವಳು ಧೇನಿಸಲು ಬೇಸಗೆಯಲೂ ವಸಂತದ ವರ ಮೇಘ ಸುರಿವುದು
ನೂರು ಜನುಮದ ಪುಣ್ಯಫಲದಿಂದ ನರಜನ್ಮವಹುದೀ ಭಾರತದಿ.

ಬದುಕಿನುದ್ದೇಶವನು ಮೊದಲಿವಳೆ ಸಾರಿದಳು,
ಪ್ರಾಣಿಚರಾಚರಗಳೆಲ್ಲರಲೂ ತನ್ನ ರೂಪವನೆ ಕಂಡಳು,
ಫಲಿಸೀತು ಇವಳ ತಪ ಮುಂಬರುವ ಯುಗಾಂತರದಲೂ
ನೂರುಜನುಮದ ಪುಣ್ಯಫಲದಿಂದ ನರಜನ್ಮವಹುದೀ ಭಾರತದಿ

ಎದೆಯೊಳಿರೆ ಪ್ರೀತಿ, ನಡತೆಯಲಿ ಸತ್ಯನೀತಿ
ಉತ್ತುಂಗ ಕರ್ತೃತ್ವದಿಂ ಚರಿತೆಯನು ಬರೆಯೋಣ
ಅಪೂರ್ವ ಶ್ರೇಯವನು ಈ ನೆಲದಿ ಬದುಕಿ ಪಡೆಯೋಣ
ನೂರು ಜನುಮದ ಪುಣ್ಯಫಲದಿಂದ ನರಜನ್ಮವಹುದೀ ಭಾರತದಿ

येतना तुवें हाडलें कितें ?

येतना तुवें हाडलें कितें ?
        वतना कितें व्हरतलो ?
पोटलो तुजो खोंटलो तुजो
        हांगचो हांगा उरतलो !
पण्टुरांचो हुस्को कित्या ?
        तुजोच ना रे भरवंसो !
आळावतलो केन्ना तुजो
        सभाव असलो वसवसो ?
चडटो काळ आसा तंवर
        भोंवतिं लोक भोंवतलो
अंतकाळा तांतलो कोण
        उल्या तुज्या पावतलो ?
येवज मात्शें खैंचो कोण
        आयलों कित्या लौकिकीं
चार दिसांचे हांगचें पेणें
        लागत कशें सार्थकी ?
अंतर्यामी पळेत राव
        तुकाच थाव लागतलो
थंयचो दिवो नित्य नवो
        फुडलि वाट सांगतलो.




ರುವಾಗ ನೀನು ತಂದಿರುವೆ ಏನನ್ನು ?

ರುವಾಗ ನೀನು ತಂದಿರುವೆ ಏನನ್ನು?
ಮರಳುವಾಗ ಏನನ್ನು ತಾನೇ ಒಯ್ಯುವೆ?
ನ್ನ ಗಂಟು, ನಿನ್ನ ಮೂಟೆ
ಇಲ್ಲೆ ಇರುವಲ್ಲೆ ಉಳಿವುದು
ಬರಿಮಕ್ಕಳ ಚಿಂತೆ ನಿನಗ್ಯಾಕೆ?
ನಿನ್ನದೇ ಇರದಿರೆ ಭರವಸೆ
ಬನೆಯಾದೀತು ಎಂದು ನಿನ್ನ
ಕೃಪಣತ್ವದ ಈ ಗುಣ?
ಮೇಲೆ ಹೋಗುವ ಕಾಲ ಬರುವ ತನಕ
ಇಲ್ಲೇ ಅಲೆಯುತ್ತಿರು ಗಿರಗಿರನೆ ಸುತ್ತಿ
ಅಂತ್ಯಕಾಲದಿ ಇವರಲಿ ಯಾರು?
ನಿನ್ನ ಕರೆಗೆ ತಾ ಓಗೊಡುವರು
ಚಿಂತಿಸು ಕೊಂಚ, ಎಲ್ಲಿಂದ, ಯಾರು,
ಯಾಕೆ ಬಂದರೀ ಲೌಕಿಕಕೆ?
ನಾಲ್ಕೇ ದಿನದ ಅತಿಥಿ ನೀನಿಲ್ಲಿ,
ಅದ ಸಾರ್ಥಕ ಪಡಿಸುವೆ ಹೇಗೆ?
ಅಂತರ್ಯಾಮಿಯ ಧೇನಿಸುತಿರು
ಶೋಧಿಸು ಬುಡಮುಟ್ಟ ನಿನ್ನನೇ ನೀನು
ಆ ಅಲ್ಲಿಯ ಬೆಳಕು ನಿತ್ಯನವೀನ
ತೋರುವುದು ಮುಂಬರಿವ ಹಾದಿಯನ್ನು

दीस अशे येवचे आसात

दीस अशे येवचे आसात
        कोणच खबर घेवचो ना
राती अशो येवच्यो आसात
        कोणच साद दिवचो ना
देखुन म्हाका एकटुक्यान
        रान चलचें त्राण दी
भितर्यांचें उतर तुजें
        आयकुपाचो कान दी
यतना मनीस एकलो येता
        वतना मनीस एकलो वता
जाण्टयांली भास अशी
        ल्हानपणच्यान आयकल्या
तीच आज जाण्टेपणी
        ल्हाना जावन पारखिल्या
एकटुक्यान चडले घांट
        तांचे वाटे - भान दी
पढ कसा झरावक प्राण
        सास्वताची साण जी
संसाराचे पंले थडी
        सोदूक म्हजें फाटलें थडें
जातलों जेन्ना हांवच म्हजे
        शीड, व्हलो, येरें व्हडें
तेन्ना म्हाका प्राक्तनाच्या
        अंतिमाची जाण दी
गान तुजें गातना म्हाका
        सोंपना अशी तान दी



ದಿನಗಳು ಈ ರೀತಿ ಘಟಿಸಬಹುದು

ಹಗಲು ಘಟಿಸಿವೆ ಬರಿದೆ,
ಎನ್ನ ಪರಿಯ ಕೇಳುವವರಾರೂ ಇಲ್ಲದೆ
ಇರುಳೂ ಸರಿದಿವೆ ಅಂತೆ
ಎನಗಾಗಿ ಕರೆ ಕೊಡುವವರಾರೂ ಇಲ್ಲದೆ
ಆದುದರಿಂದಲೇ ಎನಗೀ ಕಷ್ಟಗಳ ಕಾನನದಿ
ಏಕಾಕಿಯಾಗಿ ನಡೆವ ಶಕ್ತಿ ಕೊಡು
ನಿನ್ನೊಳಗಿನ ಮಾತುಗಳ
ಆಲಿಸುವ ಕಿವಿಗಳ ಕೊಡು
ಬರುವಾಗಲೂ ಮನುಜನೊಬ್ಬನೆ,
ಹೋಗುವಾಗಲೂ ಆತನೊಬ್ಬನೇ
ಎಂಬ ಹಿರಿಯರ ನುಡಿಯ
ಕೇಳಿರುವೆ ಎಳವೆಯಿಂದಲೇ
ಹಿರಿಯರ ಆ ಆದೇವಾಣಿ
ಋಜುವಾತುಗೊಂಡಿದೆ
ಒಬ್ಬಂಟಿಯಾಗಿ ಗಿರಿಶಿಖರವನೇರುವವರ
ಹಾದಿಗುಂಟ ಎಚ್ಚರ ನೀಡು
ನನ್ನೀ ಪ್ರಾಣವ ನಿನ್ನ ನಿಕಷದಿ
ತೇಯುವಂತ ಶಾಶ್ವತದ ಸಾಣೆಕಲ್ಲೊಂದ ನೀಡು
ನನ್ನ ಹಿಂದಿನ ಬದುಕಿನೆಳೆಗಳ
ಈ ಜಗದ ಇನ್ನೊಂದು ಪಾರ್ಶ್ವದಿ ಹುಡುಕಲು
ನಾನೇ ನನ್ನ ನೌಕೆಯ
ಕರ್ಣಧಾರನೆಂದಾಗುವೆನೋ?
ಆಗ ನನಗೆ ನನ್ನ ಹಿರಿಯರ
ಅನುಭವದ ಪರಿಪಕ್ವ ಜ್ಞಾನವ ಕೊಡು
ನಿನ್ನ ಗಾನವ ನಾ ಹಾಡುವಾಗ
ಕೊನೆಯಾಗದ ಸ್ವರ ತಾನವ ಕೊಡು

तुजें भुशण

तुवेंच दिलां माथ्यार म्हज्या
सगळ्या जगा वजें
कोणाय जिवाक लागल्यार हुलप
काळीज जळटा म्हजें
कोणय बायल पुसता जेन्ना
मणकटांनी दुखां
म्हज्याच आंगार चरत येती
तांतलिं मोनीं विखां
समर्थाच्या दारांत जेन्ना
मनीस जाता सुणो
दिसता म्हाका हांवच जालां
सत्विं म्हज्या उणो
मनशांमदीं, राष्ट्रामदा
पेट्टि जेन्ना झुजां
जंयचे थंयच खचुन कमर
तुट्टि म्हजीं भुजां
दांतय म्हजे वोठय म्हजे
लावचे दुशण कोण ?
कळवळ्यांत भुशण तुजें
इतलें हांव जाणां



ನಿನ್ನ ದೊಡ್ಡತನ

ನೀನೇ ಹೊರಿಸಿರುವೆ ನನ್ನ ಶಿರದಿ
ಅಖಿಲ ಜಗತ್ತಿನ ಭಾರ
ಯಾವ ಜೀವ ಬೆಂದರೂ
ನೋಯುವುದು ಎನ್ನೀ ಹೃದಯ
ಯಾವ ಹೆಣ್ಣು ಒರೆಸಿದರೂ
ದುಃಖಾಶ್ರುವ ತನ್ನ ಕರಗಳಿಂದೆ
ನನ್ನ ದೇಹದಿ ಮಿಡುಕುವುದೇತಕೆ,
ಮಾತಿಗೆ ನಿಲುಕದ ಮೂಕವ್ಯಥೆ?
ದೊಡ್ಡವರ ಮನೆ ದ್ವಾರದಲ್ಲಿ
ಮನುಜ ತಾ ಕುನ್ನಿಯಾದರೆ
ನನಗನಿಸುವುದು ಅದು ನಾನೇ
ಸತ್ವಹೀನ ನಾನಾದುದರಿಂದೆ
ಮನುಜ ಮನುಜರ ನಡುವೆ,
ದೇಶ ದೇಶದ ನಡುವೆ ನಡೆದಾಗ ಕದನ
ಈ ಸೊಂಟ, ಈ ಭುಜಗಳು
ಆಗುವವು ಸೋತು ಸುಣ್ಣ
ಹಲ್ಲೂ ನನ್ನದು, ತುಟಿಯೂ ನನ್ನದಾಗಿರುವಾಗ
ಯಾರ ತಾನೇ ನಾ ದೂಷಿಸಲಿ?
ಕಾತರಿಸಿ ಕಾಯುವುದೇ ನಿನ್ನ ದೊಡ್ಡತನ
ಎಂದಷ್ಟೇ ಅರಿತಿರುವೆ ನಾ

एकटुक्यान

एकटुक्यान येवचेलें एकटुक्यान व वचेलें
जल्म मर्ण सूख दुःख एकटुक्यान भोगचेलें

आपलेपरस व्हडलो खरिस एकटुक्यान व्हरचेलो
देगंतिंचें दोंगुल्लेचेर एकटुक्यान पुरचेलो

चिखलांतली आपलि वाट एकटुक्यान चलचेली
पावसांतली काळखि रात एकटुक्यान तोलचेली

आपलि कूड करुन चूड एकटुक्यान धांवचेले
आपले -वेणे - गीत करुन एकटुक्यान गावचेलें

एकटुकेच सगळे आमी कोण कोण शिणचेलें ?
वाटेंत वांगडि मेळ्ळो हेंच व्हडलें भाग्य म्हणचेलें !

एकटुक्यान येवन हांगा आयचें जिण रेखचेलें
आपल्या पायान उमथुन माप फायचें पेणं सोखचेलें



ಒಬ್ಬಂಟಿಯಾಗಿ

ಒಬ್ಬಂಟಿಯಾಗಿ ಬರಬೇಕಿರುವಲ್ಲಿ, ಒಬ್ಬಂಟಿಯಾಗಿಯೇ ಹೋಗಲೂ ಬೇಕು
ಹುಟ್ಟು, ಸಾವು, ಸುಖ, ದುಃಖವನೆಲ್ಲ ಒಬ್ಬಂಟಿಯಾಗಿಯೇ ಅನುಭವಿಸಬೇಕು

ನಮಗಿಂತ ಭಾರದ ಖುರಿಸನ್ನು ಒಬ್ಬಂಟಿಯಾಗಿ ನಾವೇ ಹೊತ್ತೊಯ್ಯಬೇಕು
ದಿಗಂತದಂಚಿನ ಗುಡ್ಡದ ಮಡಿಲಲ್ಲಿ ಒಬ್ಬಂಟಿಯಾಗಿ ಚಿರನಿದ್ರೆಗೆ ಸಲ್ಲಬೇಕು

ಕೆಸರು ತುಂಬಿದ ನಮ್ಮ ಹಾದಿಯ ಒಬ್ಬಂಟಿ ಪಥಿಕ ನಾವಾಗಬೇಕು
ಮಳೆ ಸುರಿವ ಕಾರಿರುಳ ಮೌನವನು ಒಬ್ಬಂಟಿಯಾಗಿಯೇ ಅಳೆಯಬೇಕು

ನಮ್ಮ ದೇಹದ ಬೀಪಟಿಗೆ ಸೂಡಿ ಒಬ್ಬಂಟಿಯಾಗಿ ಹೋರಾಡಬೇಕು
ಮನದ ಬಾವನೇ ಹಾಡಾಗಿಸಿ ಒಬ್ಬಂಟಿಯಾಗಿ ತಾ ಅದ ಹಾಡಬೇಕು.

ಒಬ್ಬಂಟಿ ಜೀವರು ನಾವೆಲ್ಲರೂ, ಯಾರನು ತಾ ಯಾರು ನೋಯಿಸಬೇಕು?
ಬಾಳ ಹಾದಿಯಲಿ ಸಹಚರರು ದೊರೆತಾಗ ಅದನೆ ಮಹಾಭಾಗ್ಯವೆನ್ನಬೇಕು

ಒಬ್ಬಂಟಿಯಾಗಿ ಬಂದಲ್ಲಿ ಜೀವನವ ರೂಪಿಸಬೇಕು
ನಮ್ಮ ಕಾಲಿಂದಲೇ ಪ್ರಾಣ ಪಾತ್ರೆಯ ಚೆಲ್ಲಿ ಬಿಡುಗಡೆಯ ತಾಣವನು ತಲುಪಬೇಕು

जोगी

घांटार सावन आयला जोगी
घेवन भगवी घुडी
घराक चूड लावन सोदता
ओडुंक आपली विडी
घांटार सावन आयला जोगी
घेवन तायत दोरे
चार जोंधळे दिवन हातार
व्हरूंक आंबे घरे
घांटार सावन आयला जोगी
गायता कीर कसो
लायता शिंगां लेखुन आमचो
गोंयचो लोक पिसो
घांटार सावन आयला जोगी
घेवन गुंजो मणी
पुल्ल्यो जाल्यार जातल्यो म्हण्टा
घरांत भांगरा खणी
घांटार सावन आयला जोगी
त्रण्टि खणुंक सांगता
सावध भावा देवाऱ्यांतलो
साळिग्राम मागता



ಬೈರಾಗಿ

ಪರ್ವತದಾಚೆಯಿಂದ ಬಂದಿಹನು ಬೈರಾಗಿ
ತಂದಿಹನು ಕೇಸರಿ ಧ್ವಜವ
ಮನೆಗೆ ಬೆಂಕಿಯನು ಹಚ್ಚಿ ಹುಡುಕುವನು
ಸೇದಲು ತನ್ನ ಗುಡುಗುಡಿಯ
ಪರ್ವತದಾಚೆಯಿಂದ ಬಂದಿಹನು ಬೈರಾಗಿ
ತಂದಿಹನು ತಾಯಿತ, ದಾರಗಳ
ನಾಲ್ಕು ಧಾನ್ಯಗಳ ಇಡುತ ಕೈಯೊಳು
ಮಾವು, ಹಲಸ ತಾ ಒಯ್ವ
ಪರ್ವತದಾಚೆಯಿಂದ ಬಂದಿಹನು ಬೈರಾಗಿ
ಗಿಳಿಯಂತೆ ತಾ ಮಾತಾಡುವ
ನಮ್ಮವನೆಂಬಂತೆ ನಟಿಸಿ ಮೋಸದಿ
ಜನಪದಕೆ ಹುಚ್ಚನು ಹಿಡಿಸುವ
ಪರ್ವತದಾಚೆಯಿಂದ ಬಂದಿಹನು ಬೈರಾಗಿ
ಕಾಯಿ, ಮಣಿಗಳ ಹಿಡಿಯುತ
ಹುಗಿದರೆ ಅದನು ಆಗುವುದಂತೆ
ಮನೆಯೇ ಗಣಿ ಬಂಗಾರದ
ಪರ್ವತದಾಚೆಯಿಂದ ಬಂದಿಹನು ಬೈರಾಗಿ
ಗೋಡೆಯ ಅಗೆಯಲು ಹೇಳುವ
ಸಾವಧಾನ ಎಲೆ ಸೋದರ ಕೇಳು,
ದೇಗುಲದ ಸಾಲಿಗ್ರಾಮವನೆ ಬೇಡುವ

येतले दीस म्होवेच म्होवे

निळया जळार सवणाऱ्यांचे
    थव्यार थवे धवेच धवे
उफेत हुबत सांगति आतां
    येतले दीस म्होवेच म्होवे
ओलशिं ओलशिं येतलिं ओता
    भांगराचे घालित शिंवर
झाडापेडाक कुचकुचीत
    कुकमाचें येतलें चंवर
तणाक पसुन येतले दोळे
    आनिक वालिंक कळेच कळे
आडुन दडुन येतले कानार
    सवण्यांचे उल्यार उले
सांज जावचे पैलिं येतलें
    कंवळे चान्नें शितळ शितळ
कळचे पैलिं पांगुन कुपां
    जातलें मळब नितळ नितळ
खोंपी मुखार धुंकरि पळौन
    जातल्यो ओगीच यादीर यादी
सांडिल्ल्याचें विकळ चित्तं
    मुदयेच्या वतले सोदी
जायलें तुजें सारित वाती
    सवनरात जातलें खंतीं
सोंपले आतां जिवा-जाळ
    म्होव्यो दिसांयपरस रातीं



ಬರಲಿವೆ ದಿನಗಳು ಮಧುರ ಅತಿ ಮಧುರ

ತಿಳಿನೀಲಿಯ ನೀರಲಿ ಅಚ್ಚ ಬಿಳಿಯ
ಹಕ್ಕಿಗಳ ಪರಿವಾರ
ತೇಲುತ ಹಾರುತ ಜೊತೆಯಾಗಿ
        ಬರಲಿವೆ ದಿನಗಳು ಮಧುರ ಅತಿ ಮಧುರ
ಹೂಮಳೆಯು ಬಿಸಿಲಿನೊಡನೆ ಆಟವನಾಡುತ್ತ
ಬರಲಿದೆ ಬಂಗಾರದ ಹನಿಗಳ ಸಿಂಪಡಿಸುತ
ಮರಗಿಡಗಳಲಿ ಸಮೃದ್ಧವಾಗಿ
        ಪಲ್ಲವಿಸಲಿವೆ ಕೆಂಪನೆ ಚಿಗುರು
ಹುಲ್ಲಿಗೂ ಮೂಡಿಬರಲಿವೆ ಕಣ್ಣು
        ಬಳ್ಳಿಯ ತುಂಬಾ ಮೊಗ್ಗು
ಕಿವಿದೆರೆಗಳಿಗೆ ಹರಿದುಬರಲಿದೆ
        ಹಕ್ಕಿಕೊರಳ ಹಿಗ್ಗಿನ ಹಾಡು
ಸಂಜೆಗತ್ತಲಿಗೂ ಮುನ್ನ ಆವರಿಪುದು
        ಶೀತಲ ಹೊಸ ಬೆಳದಿಂಗಳು
ಆರಿಯುವ ಮುನ್ನ ಕಳೆದು ಮೋಡಗಳ
        ಶುಭ್ರ ನಿರಭ್ರ ಸ್ವಚ್ಛ ಬಾಂದಳ
ಗುಡಿಸಲ ಮುಂದಣ ಹೆಣ್ಣು ಹಂದಿಯು ಕಂಡು
        ಮೌನ ಮೆರವಣಿಗೆ ನೆನಪುಗಳ
ತ್ಯಜಿಸಲ್ಪಟ್ಟವರ ವಿಕಲ ಚಿತ್ರವು
        ಉಂಗುರ ಹುಡುಕುತ ನಡೆದಿದೆ
ದೀಪದ ಬತ್ತಿಯ ಮುಂದಕೆ ಸರಿಸುತ
        ಇರುಳಿಡೀ ಚಿಂತೆಯು ಕೊರೆದಿದೆ
ತೀರುತ ಬಂದಿದೆ ಬದುಕಿನ ಬೇಗುದಿ
        ಇರುಳೇ ಈಗ ಹಗಲಿಗಿಂತ ಸಿಹಿಯು

उलो

फुलांत लिपुन आयला भावा तक्षकाचो पिलो
सादुर तुवें जावचें म्हणुन घालित आयलां उलो
विखाळचा ह्या फुलाक चुकुन लायशि जाल्यार हात
नदति मठी जळुन जातलो जल्म जुगा घात
मेल्ले जाण्टे दितले स्नाप भुरगिं दितलिं जाप
दीस रात खातलें तुका तुवेंच केल्लें पाप

नाका भुलूं दिसल्यो म्हणुन मोंवति ताज्या म्होरो
योच अखेर सुरयो जावन कातरतल्यो शिरो
फुलारुपान आयल्या गोंयां घटोकचा माया
म्होरां माती जावन वतलि संसाराची रया
प्रसादाची जुवळिं पानां-घेवन स्नया पाव
सोळा तारीख यवंचि जाली सादुर भावा राव.



ಕರೆ

ಹೂವಿನಲಿ ಅಡಗಿಬಂದಿವೆ ಸಹೋದರಾ ತಕ್ಷಕನ ಮರಿಗಳು
ಎಚ್ಚರಿರಬೇಕು ನೀನೆಂದೇ ಕೊಡುತ್ತಾ ಬಂದಿರುವೆ ಕರೆ
ವಿಷಪೂರಿತ ಈ ಹೂವನು ತಪ್ಪಿಯಾದರೂ ಮುಟ್ಟೇಯಾ ಜೋಕೆ
ಮನೆಮಠ ದಹಿಸೀತು ನಶಿಸೀತು ಜನ್ಮಾಂತರದ ಪೀಳಿಗೆ
ಮಕ್ಕಳು ಮರಿಗಳು ಕೊಟ್ಟಾರು ಎದುರುತ್ತರ, ಗತಿಸಿದ ಹಿರಿಯರೂ ಕೊಟ್ಟಾರು ಶಾಪ.
ಹಗಲಿರುಳೂ ತಿಂದೀತು ನಿನ್ನನು ನೀನೇಗೈದ ಪಾಪ

ಮೋಡಿ ಮಾಡಿಹುದೆಂದು ಸುತ್ತಾಡದಿರು ಅದರ ಮೋರೆಯೆದುರು
ಖಡ್ಗವಾಗಿ ಕೊನೆಗದುವೆ ತುಂಡರಿಸೀತು ನಿನ್ನ ಶಿರವ
ಹೂವಿನ ರೂಪಿಂದ ಬಂದಿದೆ ಗೋವೆಗೆ, ಘಟೋತ್ಕಚ ಮಾಯೆ
ಧನವು ಮಣ್ಣಾದೀತು ಜಗತ್ತಿನ ಮಹತ್ತಿನೊಡನೆ
ಪ್ರಸಾದವಾಗಿ ಸ್ವೀಕರಿಸು ಜೋಡಿ ಎಲೆಗಳ,ಶ್ರೇಯವನು ನೀನು ಪಡೆವೆ
ಹದಿನಾರನೆಯ ದಿನಾಂಕ ಬರಲಿದೆ, ಎಚ್ಚರದಲಿರು ಜೋಕೆ

घराची रसणाय


म्हज्या घराची तूं रसणाय
सदांच मुख गे तुजें हांस्कुरें
अडचल्ल्याचे तुका चुरचुरे
सदळ हात म्होवाळ उतर मन
कंठ रूचिक नाजूक शेनाय

तुज्या कळेन घर सदां कुळागर
फुलां फळां गिरबुजां आंगणभर
ताळये कणकणीं भोवर भोंवतणीं
परमळ कंवळिक सुख थंडाय

तुका पळौन हीं गाय ल्हंवरता
तुज्या पर्सणेन जाय चंवरता
माजरां पायां विलोद घांसती
साय कशी तूं तांकां जाय

हांवय फुलतां लाख सुखांनीं
ओंवळां घमघमतात दुखांनीं
यशीं म्हज्या पुण्याय तुजी गे
कवनिं प्रीतिची नवनवलाय

सोबशी देवता कशी तिनसनां
लामणदिव्याची वात लायतनां
नुलैत करतां तुका वंदना
पडुन तुजी अवचित सासाय



ಮನೆಯ ಶೋಭೆ

ನೀನೆನ್ನ ಮನೆಯ ಶೋಭೆ
ಮುದ್ದು ಮೊಗದಲಿ ಸದಾ ಅರೆಬಿರಿದ ನಗು ಮುಗುಳಿ
ಗೃಹಕೃತ್ಯದ ಚಿಂತೆಯಲೇಕೆ ನೀ ಮುಳುಗಿರುವೆ
ಮೃದು, ಮಧುರ ನಡೆ, ನುಡಿಯು ಕೊಡುಗೈಯ ಜಾಣೆ
ಇಂಪು ಕಂಠದ ದನಿಯೋ ಸನಾದಿ ನುಡಿಸಿದಂತೆ ಕಣೇ

ನಿನ್ನ ಕೈ ಚಳಕದಲಿ ಮನೆಯಾಯಿತು ಉಪವನ
ಹೂ, ಹಣ್ಣುಹಂಪಲದಿ ತುಂಬಿಹುದು ಅಂಗಣ
ನೀಮುಲಿಯ ಹಿಂಬಾಲಿಪುದು ಬಂಡುಣಿಗಳ ದಿಬ್ಬಣ
ಕಂಪು, ತಂಪಿನ ಜೊತೆಗೆ ಹೊಸ ಸುಖದ ರಿಂಗಣ

ನಿನ್ನನೀಕ್ಷಿಸಿ ಹಸುವು ಕಿವಿನಿಮಿರಿಸಿ ನಿಂದಿದೆ
ನಿನ್ನ ಮೆಲುಸ್ಪರ್ಶಕ್ಕೆ ಮೊಲ್ಲೆ ತಾ ಪಲ್ಲವಿಸಿದೆ
ಬೆಕ್ಕು ತಾ ಅಕ್ಕರೆಯ ತೋರುತ ಕಾಲ ಮೆಲ್ಲನೆ ತೀಡಿದೆ
ಹಾಲ ಕೆನೆಯನ್ನೆಂತೊ ಅಂತೆ ನಿನ್ನನೂ ಅದು ಬಯಸಿದೆ

ಅಗಣಿತ ಸುಖದನುಭೂತಿಗೆ ಮನವು ಹೂವಾಗಿ ಅರಳಿದೆ
ಅದರ ಕಂಪಿಗೆ ರಂಜೆ ಘಮವೂ ಮಸುಕುಗೊಂಡಂತಾಗಿದೆ
ನಿನ್ನ ಪುಣ್ಯದ ಫಲದಿಂದಲೆನಗೆ ಯಶೋಧನವು ಲಭಿಸಿದೆ
ತುಂಟತನದ ಪ್ರೀತಿಯಾಟಕೆ ಮೂಕ ವಿಸ್ಮಿತನಾಗಿಹೆ

ಸಂಜೆ ವೇಳೆಗೆ ದೇವತೆಯು ತಾ ಇಳೆಗೆ ಇಳಿದಂತೆ ಕಾಣುವೆ
ತೂಗುದೀಪಕೆ ಎಣ್ಣೆ ಎರೆದು ಬತ್ತಿಯನು ನೀ ಬೆಳಗುವೆ
ಮಾತಿಲ್ಲದೆ ಎದೆಯಾಳದಿ ನಿನಗಿದೊ ಎನ್ನ ವಂದನೆ
ಸಂತೃಪ್ತಿಯು ಎನಗಿತ್ತಿದೆ ಎಣಿಕೆಗೂ ಮಿಗಿಲಾದ ಒಲುಮೆ

चवरां

दोंगुल्ल्यांचीं जुंवळीं थानां
तांचेर गच्च पांचवीं रानां
सुर्यान उमो रोमलो तशीं
हळदि कुकमांत भिजलीं पानां

*

तळये कांठार कोंडचां-रांय
उदकार पातळ चाऱ्या-साय
खर्ज गावंक पांचवो बेबो
बसलो चिऱ्यार दोडुन पांय

*

दोळ्याक दोळो लायलो जाल्यार
तांबसो कसो पोलो ?
दोळो चुकौंक केल्यार तोच
रोखडो कसो ओलो ?

*

मनाक खोलाय आसली जाल्यार
साद्याय बोलांक मोल
जाल्यार सगलो देद
जिबेर आसून पोल


*

दीस म्हजो [illegible]ाणो
आनी रात म्हजी पिशी
सगल्या दिसा शीण पोण्ण
न्हिवता तिजे कुशी

*

खरो जावं लटीक
संवसार लागला फाटीक
केळौन पसुन आफडून घेना
मुक्ति ताजे गांटीक

*



ಬಿಡಿ ಮುಕ್ತಕಗಳು

ಕುಚದ್ವಯಗಳಂತಿರ್ಪ ಆ ಜೋಡಿ ಬೆಟ್ಟ
ಕಾನನದ ಹಸುರದೊ ಪಸರಿಸಿದೆ ದಟ್ಟ
ಸೂರ್ಯನೊತ್ತಿದನದೊ ಅದೆಂಥ ಚುಂಬನ !
ಅದರಿಂದೆ ಎಲೆತೂಯ್ದು ತಳೆದಿವೆ ಕುಂಕುಮ-ಅರಸಿನ

*

ಬಂಡೆಯ ಅಂಚಲಿದೆ ಪುಟ್ಟದೊಂದು ಕೊಳ
ಆ ನೀರಲಿ ಕೆನೆಕಟ್ಟಿದೆ ದಟ್ಟ ಬೆಳದಿಂಗಳ
ಮಂದ್ರಗಾಯನವನಾಲಿಸು ಹಸಿರು ಕಪ್ಪೆಗಳ
ಕಲ್ಲಂಚಲಿ ಕುಳಿತಿವೆ ಮಡಚಿ ಕಾಲುಗಳ

*

ಕಣ್ಣಲಿ ಕಣ್ಣಿಟ್ಟು ನೋಡಿದರೆ
ಕೆಂಪಾಗಿದೆ ಏಕೆ ಕೆನ್ನೆ ?
ಕಣ್ಣು ತಪ್ಪಿಸಿ ನಾ ಓಡಾಡಿದರೆ
ಏಕಾಗಿವೆ ಅವು ಒದ್ದೆ?

*

ಮನಸ್ಸಿಗೆ ಆಳವೆಂಬುದು ಇದ್ದರೆ ಮಾತ್ರ
ಆಡಿದ ಮಾತಿಗೆ ಇರುವುದು ಬೆಲೆ
ಇಲ್ಲದಿರೆ ವೇದಗಳೆಲ್ಲ
ನಾಲಗೆಯಲೇ ಇದ್ದೂ ಆಗುವವು ವ್ಯರ್ಥ

*

ನನ್ನ ಹಗಲು ಬುದ್ಧಿವಂತಿಕೆಯದು
ನನ್ನ ಇರುಳೋ ಹುಚ್ಚು ಹಿಡಿಸುವುದು
ದಿನಪೂರ್ತಿಯ ಆಯಾಸವನೆಲ್ಲ
ತಣಿಸುವುದು ಅವಳಿತ್ತ ಸಂತಸದ ಬೆಲ್ಲ

*

ಸುಳ್ಳೆಲ್ಲವೂ ನಿಜವಾಗಲಿ
ಪ್ರಪಂಚವೇ ಬಿದ್ದಿಹುದು ಬೆನ್ನಿಗೆ
ಜತನವ ನೀ ಕಾಯದಿದ್ದರೆ
ಮುಕ್ತಿ ದೊರಕದು ಬಡಪೆಟ್ಟಿಗೆ

*

चंवर आसा तंवर
रुखार सर्वणिं भोंवर
सुकुंक लागलो तसो पुता
कोण घेता खबर ?

*

पांयांत आसुन वाट
आनिक दोळ्यांत आसुन दिवो
चलता तंवर समज, मनीस
नाखटामेरेन जिवो

*

देवान दिवंक केलेंय जाल्यार
मागूंक पुण्याय जाय
भस्म करपी मागल्यार हात
निसंताना पाय

*

संवसारा-सार
चांखूंक गेल्यार
कोडु झार,
पचल्यार
अमृता-धार


*

शेत पळौंचें कसून
पुजा पळौची बसून
घर तशें कुळगर
पळौंचें वसून

*

एक म्हस, एक म्हशिंग
एक मिरसांग, एक माड
एक मोगर, एक मठी
दारांत एक फुलतें झाड
इतलें जाल्यार म्हाका
सर्ग पसुन दिल्यार नाका

*



ಚಿಗಿತ ಚಿಗುರೆಂಬುದು ಇರುವವರೆಗೆ
ಹಕ್ಕಿ, ದುಂಬಿಗಳು ಬರುವವು ಮರದ ಆಸರೆಗೆ
ಒಣಗತೊಡಗಿತೋ ಆ ಮರ
ಯಾರಿಗೆ ಬೇಕು ಉಸಾಬರಿ ಅದರ ?

*

ಕಾಲಲ್ಲಿ ಇದೆ ನಡೆಯಲಿಹ ಹಾದಿ
ಕಣ್ಣಲ್ಲಿ ಇದೆ ದಾರಿದೀಪದ ಬೆಳಕು
ನಡೆಯಲು ಶಕ್ತನಿರುವವರೆಗೆ ತಿಳಿ ಮನುಜಾ
ಉಂಗುಷ್ಟದ ವರೆಗೂ ನೀ ಜೀವಂತ

*

ದೇವರು ಕೊಡುವ ಮನಸು ಮಾಡಿದರೂ
ಬೇಡಿ ಪಡೆಯಲು ಭಾಗ್ಯಬೇಕು
ಭಸ್ಮ ಮಾಡುವಂಥ ಕರಗಳ ಬೇಡಿದರೆ
ನಿಸ್ಸಂತಾನನಾಗುವ ವರಗಳ ಪಡೆವೆ

*

ಸಂಸಾರದ ಸಾರ
ಸವಿಯಲು ಹೋದರೆ
ಕಹಿಯ ವಿಷ
ಅದ ಜೀರ್ಣಿಸಿಕೊಂಡರೆ
ಅದೆ ಅಮೃತದ ಧಾರೆ

*

ಪೈರನ್ನು ಅದ ಬೆಳೆಸಿ ನೋಡಬೇಕು
ಪೂಜೆಯನು ಭಕ್ತಿಯಿಂದ ಕುಳಿತು ನೋಡಬೇಕು
ಮನೆ ಮತ್ತು ಮನೆತನಗಳ
ಸ್ವತ: ಅಲ್ಲಿಗೆ ಹೋಗಿ ನೋಡಬೇಕು

*

ಒಂದೆಮ್ಮೆ, ಒಂದು ನುಗ್ಗೆಮರ,
ಒಂದು ಮೆಣಸಿನಕಾಯಿ, ಒಂದು ತೆಂಗಿನ ಮರ
ಒಂದಿಷ್ಟು ಒಲವು, ಇರಲೊಂದು ಸೂರು
ಮನೆಬಾಗಿಲಲಿ ದಿನವೂ ಹೂ ಹೊತ್ತ ಗಿಡ
ಇವಿಷ್ಟಿದ್ದರೆ ಸಾಕೆನಗೆ,
ಸ್ವರ್ಗವನೇ ಕೊಟ್ಟರೂ ಅದು ಬೇಡವೆನಗೆ

*

हांसत्या मुखा, फुलत्त्या रुखा
वांगड सदांच सुखांचो
हांसुंक फुलुंक नकळ ताका
संवसार सगलो दुखांचो

*

आयज म्हजें मन
दुदावैली साय
तापुन न्हिवंक
जाणा जाल्ल्यान

*

तुजें नांव घेतलें तशे
फातर जाले ल्हव
रातयांत घालो माकडांनी
समुद्राचेर सांकव

*

आज आसा, फाल्यां ना
असलें हांगचें जिवीत
सगलें क्षर म्हणुन म्हजें
अक्षरांत कंवीत

*

उजवो जावं, दावो जावं
दोनय सारके म्हजेच हात
तुज्या नमस्कारा-वेळार
दोन आसुन एक जातात

*

कोणाचेरय बडि बसूं
म्हजे फाटीर वळ
कोणाकय कांटो रोमूं
म्हज्या काळजांत कळ
कोणाचोय सूर लागूं
म्हज्या दोळयांत जळ
कोणाचेंय दुःख सरूं
म्हज्या सुखाक फळ

*



ನಗುವ ಮುಖ, ಅರಳಿರುವ ಮರ
ಬಳಿ ಇರೆ ಬಾಳು ಸದಾ ಸುಖಮಯ
ನಗಲು ಮತ್ತು ಅರಳಲು ಅರಿಯದವಗೆ
ಜಗವೆಲ್ಲಾ ಸದಾ ದುಃಖಮಯ

*

ನನ್ನ ಮನವಿಂದು
ಹಾಲಮೇಲಣ ಕೆನೆಯಂತೆ
ಕುದಿಕುದಿದು ಬಳಿಕ ತಣಿಯಲು
ನಾನರಿತಿರುವುದರಿಂದೆ

*

ನಿನ್ನ ಹೆಸರನೆತ್ತಿದ ಕ್ಷಣವೇ
ಕಲ್ಲಾಯಿತು ಹಗುರ
ರಾತ್ರಿ ಬೆಳಗಾಗುವುದರೊಳಗೆ ಕಪಿಗಳಿಗೆ
ಸಾಧ್ಯವಾಯಿತು ಸಮುದ್ರ ಸೇತು ಬಂಧನ

*

ಇಂದು ಇರುವುದು ನಾಳೆಗದು ಇಲ್ಲ
ಇಂತಹುದು ಈ ಜೀವನ
ಎಲ್ಲವೂ ಕ್ಷಯಿಸುವುದೆಂದೇ
ಬಂಧಿಸಿಹೆ ಅಕ್ಷರದಲಿ ನಾ ಕವನ

*

ಎಡ ಇರಲಿ, ಬಲ ಇರಲಿ
ಎರಡೂ ನನ್ನ ಕೈಗಳೇ ಹೌದು
ನಿನ್ನನು ನಮಸ್ಕರಿಸುವ ವೇಳೆ
ಎರಡಿದ್ದರೂ ಅವು ಆಗುವವು ಒಂದು

*

ಯಾರಿಗಾದರೂ ಬೆತ್ತದ ಏಟು ಬಿದ್ದರೆ
ನನ್ನ ಬೆನ್ನಲಿ ಮೂಡುವುದು ಬರೆ
ಯಾರಿಗಾದರೂ ಚುಚ್ಚಿದರೆ ಮುಳ್ಳು
ನನ್ನ ಹೃದಯ ಉಣ್ಣುವುದು ನೋವು
ಯಾರಾದರೂ ಹಚ್ಚಿದರೆ ರಾಗಾಲಾಪ
ನನ್ನ ಕಣ್ಣಲಿ ಹರಿವುದು ನೀರು
ಯಾರದೋ ದುಃಖ ತೀರಿತೆಂದರೆ
ನನ್ನ ಸುಖ ಉಕ್ಕೇರುವುದು

*

काळखांत जशी चूड
तशीच मनीस कूड
सोंपतासर पेटूं
उरिल्लि वाट तुटूं

*

ओत म्हण्टा, सुकैतां
पावस म्हण्टा, भिजैतां
बी म्हण्टा, म्हणुन मातयेंत
सपन म्हजें रुजैतां

*

बापुय म्हण्टा, 'सगलि रात
        पोरान न्हिदूंक दिलें ना'
आवय म्हण्टा, 'सगलि रात
        पोर म्हजें न्हिदलें ना'

*

भुकंवेळार दिल्लो ग्रास
तानेवेळार दिल्लें पाणीं
रोंवचेवेळार हाडटा पावस
लुंवचे वेळार फसल दुणो

*

सुदर्शनाबगर गिता
रणांत कोण आयकुन घेता ?


*

उज्यांत जाल्लें फूल ओतांत कशें बावत ?
छळांत सुखावतल्याक रडुक कशें फावत ?

*

नेमलां म्हणुन मरण
        मनिस यमाक दिता दुशण
तोंच मारून आपल्या भावा
        तांतुत मानता भुशण

*



ಕತ್ತಲೆಯಲಿ ಎಂತೊ ದೀವಟಿಗೆ
ಅದರಂತೆಯೇ ಶರೀರವಿದು ಮನುಜಗೆ
ತೀರುವವರೆಗೂ ಉರಿಸುತ್ತಿರು
ಉಳಿದ ದಾರಿ ಕ್ರಮಿಸುತ್ತಿರು

*

ಬಿಸಿಲು ಅನ್ನುತ್ತದೆ ಒಣಗಿಸುವೆ
ಮಳೆ ಅನ್ನುತ್ತದೆ ಒದ್ದೆ ಮಾಡುವೆ
ಬೀಜವೆನ್ನುತ್ತದೆ ಆದುವರಿಂದೆ ಮಣ್ಣಲಿ
ನನ್ನ ಕನಸು ಮೊಳಕೆಯೊಡೆಯುತ್ತದೆ

*

ತಂದೆ ಅನ್ನುವನು, "ರಾತ್ರಿಯೆಲ್ಲ
ಪೋರನೆನ್ನ ಮಲಗಲು ಬಿಡಲಿಲ್ಲ"
ತಾಯಿ ಅನ್ನುವಳು, "ರಾತ್ರಿಯೆಲ್ಲ
ಎನ್ನ ಪೋರಗೆ ಪಾಪ ನಿದ್ದೆಯೇ ಇಲ್ಲ"

*

ಹಸಿದಾಗ ದೊರೆತ ತುತ್ತು
ಬಾಯಾರಿದಾಗ ದೊರೆತ ನೀರು
ನೆಡುವಾಗ ಬಂದ ಮಳೆ ಇವುಗಳಿಂದ
ಫಲಿತು ಬರುವ ಫಸಲು ದುಪ್ಪಟ್ಟು

*

ಸುದರ್ಶನನ ಹೊರತು ಗೀತೆಯನು
ರಣರಂಗದಲಿ ಯಾರು ತಾನೇ ಕೇಳಿಸಿಕೊಳ್ಳುವರು?

*

ಬೆಂಕಿಯಲ್ಲಿ ಅರಳಿದ ಹೂವು ಹೇಗೆ ಬಾಡೀತು?
ಕಸದಲೂ ರಸ ಪಡೆಯಬಲ್ಲವ ಯಾತಕಾದರೂ ಅಳುವನು?

*

ಮರಣಕ್ಕೆಂದೇ ನಿಯುಕ್ತಿಗೊಂಡನೆಂದು
ಮನುಜರು ಮಾಡುವರು ಯಮನ ದೂಷಣೆ
ಸ್ವಂತ ಸೋದರರನೇ ತಾವು ಕೊಂದು
ಅದನೇ ಭಾವಿಪರು ಬಲು ಭೂಷಣವೆಂದು

*

पेज आसूं शीत आसूं
रूच आसची जिबेक
सूख आसूं, दुःख आसूं
मनीस आसचे उबेक

*

दिसान्‌दीस नव्यो फटी
वाचतात आमी नित्य
तरीय कालचो इतिहास
मानुन चलतात सत्य

*

देवाक सोदुन सोदुन हांवें
म्हळें, 'आतां सोदचों ना'
म्हळें ताणें, हेडलो कित्याक
तुज्याच म्हाऱ्यांत आसताना'

*

शेतकार बळी आसलो जाल्यार
तुमकां आमकां गोटो
त्राण ताजें तुटलें जाल्यार
सगलो पावस खोटो

*

ल्हान जरी काजुलो
उजवाडाचो पिलो
बिण्णपसुन काळोख
खिणभर निळो

*

देव आसूं नासूं
आसा म्हळ्ळो बरो
निवेद्याच्या ताटांत
आसासर घरो

*

धाय वता भरत
पुण उत्‌र वता चरत

*



ತಿಳಿಗಂಜಿಯಿರಲಿ, ಅನ್ನವಿರಲಿ
ಸವಿಯುವ ರುಚಿಯಿರಬೇಕು ನಾಲಗೆಗೆ
ಸುಖವಿರಲಿ, ದುಃಖವಿರಲಿ
ಮನುಜ ಬೇಯಬೇಕು ಮೆತ್ತಗೆ

*

ದಿನದಿನವೂ ಹೊಸ ಸುಳ್ಳಿನ ಕಥೆಯ
ಓದುವೆವು ನಾವು ನಿತ್ಯ
ಆದರೂ ನಿನ್ನೆಯ ಇತಿಹಾಸವ
ಭಾವಿಸುವೆವು ಅದು ಸತ್ಯ

*

ದೇವರನು ಅರಸಿ ಅರಸಿ ನಾನು
ಹೇಳಿದೆ, "ಇನ್ನು ಹುಡುಕಲಾರೆ"
ಅವನೆಂದ, "ಸುಮ್ಮನೆ ಅಲೆದೆ ಏಕೆ?,
ನಿನ್ನೆದೆಯ ಒತ್ತಿನಲೇ ನಾನಿರುವಾಗ"

*

ರೈತ ತಾ ಬಲಶಾಲಿ ಇದ್ದರೆ
ನಿಮಗೆ ನಮಗೆ ಅನ್ನ
ಅವನ ತ್ರಾಣ ಕುಸಿಯಿತೆಂದರೆ
ಮಳೆ ಬಂದರೂ ಸೊನ್ನೆ

*

ಪುಟ್ಟದಾದರೂ ಮಿಂಚುಹುಳ
ಮರಿ ಅದು ಬೆಳಕಿನ
ಡಾಂಬರಿನಷ್ಟು ಕಡುಕಪ್ಪು
ಕ್ಷಣಾರ್ಧದಿ ನೀಲವರ್ಣ

*

ದೇವರು ಇರಲಿ ಇಲ್ಲದಿರಲಿ
ಇರುವನಾತ ಸಂಭಾವಿತ
ನೈವೇದ್ಯದ ತಾಟಿನಲ್ಲಿ
ಆತನುಳಿಸುವ ವರೆಗೆ ಹಲಸಿನ ತೊಳೆಯ

*

ಗಾಯ ಮಾಸುತ್ತದೆ ತುಂಬುತ್ತ
ಆದರೆ ಮಾತು ಹೋಗುತ್ತದೆ ಚಲಿಸುತ್ತ

*

फाल्यां करचेलें आज कर
आज करचेलें आतां कर
जाता तशें स्वता कर

*

खाल्लें अन्न निवेद्य
पियेल्लें उदक तीर्थ
अशें मन जालें जाल्यार
आयिल्लो दीस तीथ

*

स रस वळखिले
ताजी म्हाका जीब दी
सात सूर वळखिले
ताजे म्हाका कान दी
कापसान लुगट विणलें
ताजे म्हाका हात दी
मायेन जीव विणले
ताजें म्हाका मन दी

*

खिणाचो भरवंसो ना
पिळग्यांचो हुस्को
तुळाकार जाला तरी
घेवंक सोदता पोस्को


*

जमीन खणिल्ल्यान जोडलें धन
उतर विणिल्ल्यान घडलें मन

*

पावसांतल्या ओतांत
पानावैले थेंबे
तश म्हजीं दुखां
सुखान झिगझिगतात

*



ನಾಳೆ ಮಾಡುವುದ ಇಂದೇ ಮಾಡು
ಇಂದು ಮಾಡುವುದ ಈಗಲೇ ಮಾಡು
ನಿನ್ನಿಂದಾಗುವ ಕೆಲಸ ಸ್ವತಃ ಮಾಡು

*

ತಿಂದ ಅನ್ನವೇ ನೈವೇದ್ಯ
ಕುಡಿದ ನೀರೇ ತೀರ್ಥ
ಈ ತೆರನ ಮನದಿ ಭಾವಿಸಿದರೆ
ಬರುವ ದಿನಗಳೆಲ್ಲ ಬೆಳದಿಂಗಳೇ

*

ಷಡ್ರಸಗಳ ಕಂಡು ಹಿಡಿದಾತನ
ನಾಲಗೆಯ ಎನಗೆ ಕೊಡು
ಸಪ್ತಸ್ವರಗಳ ಪತ್ತೆ ಹಚ್ಚಿದವನ
ಕಿವಿಗಳನು ಎನಗೆ ಕೊಡು
ಹತ್ತಿಯಿಂದ ಬಟ್ಟೆಯನೆಯ್ದವನ
ಕೈಗಳನು ಎನಗೆ ಕೊಡು
ನನ್ನೀ ಜೀವವ ಹೆಣೆದವ್ವನ
ಮನವನ್ನು ಎನಗೆ ಕೊಡು

*

ನಿನ್ನದೇ ಎಳ್ಳಷ್ಟೂ ಭರವಸೆ ಇಲ್ಲ
ಮುಂಬರುವ ಪೀಳಿಗೆಯ ಚಿಂತೆ ಏಕೆ ?
ಸರ್ವವಿನಾಶದಕಾಲ ಬಂದಿರಲು ಹತ್ತಿರಕೆ
ದತ್ತುಪುತ್ರನ ಹುಡುಕಿ ಅಲೆವೆ ಏಕೆ ?

*

ಭೂಮಿಯು ಅಗೆತದಿಂದ ದೊರೆವುದು ಧನ
ಮಾತನು ಹೆಣೆದುದರಿಂದ ಸೇರುವುದು ಮನ

*

ಮಳೆಗಾಲದ ಬಿಸಿಲಲ್ಲಿ
ಎಲೆಗಳ ಮೇಲಣ ನೀರಹನಿಗಳೆಂತೊ
ಅಂತೆ ನನ್ನ ದುಃಖವೂ
ಸುಖವೆಂಬಂತೆ ಹೊಳೆ ಹೊಳೆಯುವುದು

*

कमळाचे कळे
तशे तुजे दोळे
पळेताना बाये
सांबाळुन पळे

*

येवजिल्लें घडना
तंवर आमी बरे !
घडुन येत जाल्यार
कितले आमी खरे ?

*

भुरगेपणांत आनंद ना
तरणेपणांत उमेद ना
जाण्टेपणांत विवेक ना
म्हातारपणांत समाधान ना
अशें आमचें जिणे सासणाचें उदास
घायार मिरसांग वेदान्ताची भास

*



ಕಮಲದ ಮೊಗ್ಗಂತೆ
ನಿನ್ನ ಕಣ್ಣುಗಳು
ನೋಡುವಾಗ ಎಲೆ ಹೆಣ್ಣೆ,
ಜತನದಿಂದ ನೋಡು

*

ಅಂದುಕೊಂಡುದು ಘಟಿಸದಿರೆ
ನಾವು ಒಳ್ಳೆಯವರು
ಘಟಿಸಿದರೆ ಆಗ ಹೇಳು
ನಾವೆಷ್ಟು ಸಾಚಾ?

*

ಬಾಲ್ಯದಲಿ ಆನಂದವಿಲ್ಲ,
ಯೌವ್ವನದಲಿ ಉತ್ಸಾಹವಿಲ್ಲ,
ಪ್ರೌಢಾವಸ್ಥೆಯಲಿ ವಿವೇಕವಿಲ್ಲ,
ವೃದ್ಧಾಪ್ಯದಲಿ ಸಮಾಧಾನವಿಲ್ಲದಿರೆ,
ಈ ತೆರನ ನಮ್ಮೀ ಜೀವನ. ಶಾಶ್ವತ ಅಸಂತುಷ್ಟಿಯು ಕಂತೆ,
ವೇದಾಂತದ ಮಾತೆಂಬುದು ಗಾಯದ ಮೇಲೆ ಮೆಣಸು ಅರೆದಂತೆ

*

ಬಾಕಿಬಾಬರ ಸಾಹಿತ್ಯ ಸಂಪದ

(ಮರಾಠಿ) ಕಾವ್ಯ ಸಂಗ್ರಹ

1. **ಪ್ರತಿಭಾ** (1930) : ಪ್ರಕಾಶಕ ಕಾಶೀನಾಥ ಶ್ರೀಧರ ನಾಯಕ, ಮುಂಬೈ - 4
2. **ಜೀವನ ಸಂಗೀತ** (1937) : ಭಾರತಗೌರವ ಗ್ರಂಥಮಾಲ, ಮುಂಬೈ
3. **ಧೂದಸಾಗರ** (1947)
4. **ಆನಂದ ಭೈರವಿ** (1950) : (6 ನೇ ಆವೃತ್ತಿ 1976) ಕಾಂಟಿನೆಂಟಲ್ ಪ್ರಕಾಶನ ಪುಣೆ - 30
5. **ಚಿತ್ರವೀಣಾ** (1960) : (4 ನೇ ಆವೃತ್ತಿ 1984 ಮೌಜ ಪ್ರಕಾಶನ, ಮುಂಬೈ - 4
6. **ಗಿತಾರ** (1965) : (2 ನೇ ಆವೃತ್ತಿ 1984) ಮೌಜ ಪ್ರಕಾಶನ, ಮುಂಬೈ - 4
7. **ಚೈತ್ರ ಪುನವ** (1970) : ಮೌಜ ಪ್ರಕಾಶನ ಗೃಹ, ಮುಂಬಯಿ - 4
8. **ಕಾಂಚನ ಸಂಧ್ಯಾ** (1971) : ಮೌಜ ಪ್ರಕಾಶನ ಗೃಹ, ಮುಂಬಯಿ - 4
9. **ಅನುರಾಗಿಣಿ** (1972) : ಸುರೇಶ ಏಜೆನ್ಸಿ, ಪುಣೆ - 2
10. **ಚಿನ್ಮಯಿ** (1974) : ಸುರೇಶ ಏಜನ್ಸಿ, ಪುಣೆ - 2

ಕಾವ್ಯ ಸಂಕಲನ :

1. **ಬೋರಕರಾಂಚಿ ಕವಿತಾ (1960)** : ಬಾಕಿಬಾಬರ ಐದು ಪ್ರಕಾಶಿತ ಸಂಕಲನಗಳಿಂದ ಆಯ್ದ ಕವನಗಳು ಮತ್ತು ಕೆಲವು ಅಪ್ರಕಾಶಿತ ಕವನಗಳ ಸಂಗ್ರಹ. ಸಂಪಾದಕ : ಮಂಗೇಶ ಮಡಗಾಂವಕರ, ಮೌಜ ಪ್ರಕಾಶನ, ಮುಂಬೈ - 4
2. **ಚಾಂದಣವೇಲ (1972)** : ಬಾಕೀಬಾಬರ ಆಯ್ದಕವಿತೆಗಳು ಎರಡನೇ ಆವೃತ್ತಿ 1984 ಸಂಪಾದಕ : ಕುಸುಮಾಗ್ರಜ ಆನೀ ಗೋ.ಮ. ಕುಲಕರ್ಣಿ, ಕಾಂಟಿನೆಂಟಲ್ ಪ್ರಕಾಶನ, ಪುಣೆ - 30

3. **ಚೋರಕರಾಂಚೀ ಪ್ರೇಮಕವಿತಾ (1984)** : ಬಾಕಿಬಾಬರ ಆಯ್ದ ಪ್ರೇಮ ಕವಿತೆಗಳ ಸಂಕಲನ, ಸಂಪಾದಕ : ರಾ.ಚಿಂ. ಢೇರೆ. ಸುರೇಶ ಏಜನ್ಸಿ : ಪುಣೆ - 30

4. **ಕೈವಲ್ಯಾಚೆಂ ಝಾಡ (1987)** : ಬಾಕಿಬಾಬರ ಆಯ್ದ ಭಕ್ತಿಕಾವ್ಯಗಳ ಸಂಕಲನ, ಸುರೇಶ ಏಜನ್ಸಿ ಪುಣೆ - 2

ಕಥಾ ಸಂಗ್ರಹ :

1.	**ಪ್ರಿಯದರ್ಶಿನಿ**	(1960) :	ಸಾಧನಾ ಪ್ರಕಾಶನ, ಪುಣೆ
2.	**ಸಮುದ್ರ ಕಾಠಾಚ ರಾತ್ರಿ**	(1981) :	ಸುರೇಶ ಏಜನ್ಸಿ, ಪುಣೆ

ಲಘು ನಿಬಂಧ ಸಂಗ್ರಹ :

1.	**ಕಾಗದೀ ಹೋಡ್ಯಾ**	(1938) :	ಶ್ರೀ ಶಿವಾಜಿ ಮುದ್ರಣಾಲಯ, ನವೆಂ ಗೊಂಯ,
2.	**ಚಾಂದಣ್ಯಾಚೆ ಕವಡಸೆ**	(1982) :	ಮೆಜೆಸ್ಟಿಕ್ ಬುಕ್‌ಸ್ಟಾಲ್, ಮುಂಬೈ - 4
3.	**ಪಾವಲಾಪುರತಾ**	(1982) :	ಆಲೋಕ ಪ್ರಕಾಶನ, ಕೊಲ್ಹಾಪುರ.
4.	**ಘುಮಟಾವರಚೆ ಪಾರವೆ**	(1986) :	ಬಾಂದೋಡಕರ ಪಬ್ಲಿಶಿಂಗ್ ಹೌಸ್, ಗೊಂಯ

ಕಾದಂಬರಿ :

1.	**ಮಾವಳತಾ ಚಂದ್ರ**	(1983) :	ಮಹಾರಾಷ್ಟ್ರ ಗ್ರಂಥ ಭಂಡಾರ, ಕೊಲ್ಹಾಪುರ
	ತಿಸರೀ ಆವೃತ್ತಿ	(1986) :	ಬಾಂದೋಡಕರ ಪಬ್ಲಿಶಿಂಗ್ ಹೌಸ್, ಗೊಂಯ
2.	**ಅಂಧರಾತೀಲ ವಾಟ**	(1943) :	ದಾಮೋದರ ನಾರಾಯಣ ಫೋಫೆ, ಕೊಲ್ಹಾಪುರ,
	ದುಸರೀ ಆವೃತ್ತಿ	(1986) :	ಬಾಂದೋಡಕರ ಪಬ್ಲಿಶಿಂಗ್ ಹೌಸ್, ಗೊಂಯ
3.	**ಭಾವೀಣ**	(1950) :	ಕಾಂಟಿನೆಂಟಲ್ ಪ್ರಕಾಶನ, ಪೂಣೆಂ
4.	**ಪ್ರಿಯರಾಮಾ**	(1983) :	ಸುರೇಶ ಏಜನ್ಸಿ, ಪುಣೆ - 2

ಚರಿತ್ರಾತ್ಮಕ ಪ್ರಬಂಧ :

1. ಆನಂದದಾಯಿ ರವೀಂದ್ರನಾಥ : ಸಂಸ್ಕಾರ ಆಣಿ ಸಾಧನಾ, 1964 ;
   ದುಸರೀ ಆವೃತ್ತಿ (1983) : ಸುರೇಶ ಏಜನ್ಸಿ, ಪುಣೆ - 2
2. ಮಹಾಮಾನವ ರವೀಂದ್ರನಾಥ (1974), ಪುಣೆ, ವಿದ್ಯಾಪೀಠ

ಅನುವಾದ :

1. ಜಳತೆ ರಹಸ್ಯ (ಕಾದಂಬರಿ) ಸ್ಟೀಫನ್ ಇವಾಯೀಗ : (1945)
   ಪ್ರಕಾಶ : ಹಾ.ನಾ. ಮೋಘೆ, ಕೊಲ್ಹಾಪುರ.
2. ರೌಚೇಚಿ ಕಿಮಯಾ (ಕಥಾ : ಸ್ಟೀಫನ್ ಇವಾಯಿಗ : 1945)
   ಪ್ರಕಾಶಕ : ಪಾಂ. ರಾಂ. ಡಮಢರೆ, ಪುಣೆ.
3. ಬಾಪೂಜೆಂಚಿ ಓಝುರತಿ ದರ್ಶನೆ (ಆಚಾರ್ಯಾ ಕಾರ್ಯಸಾಹೇಬ ಕಾತೀಲಕರ 1950)
4. ಆಮಿ ಪಾಹಿಲೆಲೆ ಗಾಂಧೀಜಿ (ಚಂದ್ರಶೇಖರ ಶುಕ್ಲ 1950)
5. ಮಾಝಿ ಜೀವನಯಾತ್ರಾ (ಆತ್ಮಚರಿತ್ರ - ಜಾನಕಿ ದೇವಿ ಬಜಾಜ 1960)
   ಪಾಪ್ಯುಲರ ಪ್ರಕಾಶನ, ಮುಂಬೈ

ಸಂಪಾದಿತ ಕವಿತಾ ಸಂಗ್ರಹ :

1. ರಸಯಾತ್ರಾ (ಕುಸುಮಾಗ್ರಜಾಂಚೀ ಕವಿತಾ - 1969) ಪಾಲವಿ
   ಸಂಪಾದಕ : ಶಂಕರ ವೈದ್ಯ : ಕಾಂಟಿನೆಂಟಲ್ ಪ್ರಕಾಶನ, ಪುಣೆ.

ಕೊಂಕಣಿ : ಕವಿತಾ ಸಂಗ್ರಹ :

1. ಪಾಂಯಜಣಾಂ (1960) : ಪಾಪ್ಯುಲರ ಪ್ರಕಾಶನ, ಮುಂಬೈ
2. ಸಾಸಾಯ (1980) : ಕುಳಾಗರ ಪ್ರಕಾಶನ, ಮಡಗಾಂವ - ಗೊಂಯ
3. ಕಂಠಮಣಿ (1996) : ಜಾಗ ಪ್ರಕಾಶನ ಪ್ರಯೋಳ - ಗೊಂಯ

ಅನುವಾದ :

1. **ಗೀತ ಪ್ರವಚನಾ** (ವಿನೋಬಾ ಭಾವೆ - 1956) ಪರಿಧಾಮ, ಪವನಾರ
2. **ಗೀತಾಯ** (ಕೊಂಕಣಿ ಸಮಶ್ಲೋಕಿ ಭಗವದ್‌ಗೀತಾ - 1960) ಪಾಪ್ಯುಲರ ಪ್ರಕಾಶನ, ಮುಂಬೈ
3. **ವಾಸವದತ್ತಾ** : ಪ್ರಣಯನಾಟ್ಯ (ಅರವಿಂದ ಘೋಷ 1973) ಜಾಗ ಪ್ರಕಾಶನ, ಪ್ರಿಯೋಳ, ಗೊಂಯ
4. **ಸಂಶಯ ಕಲ್ಲೋಳ** (ನಾಟಕ : ಗೋ. ಬ. ದೇವಲ, 1925): ಜಾಗ ಪ್ರಕಾಶನ ಪ್ರಿಯೋಳ, ಗೊಂಯಾ
5. **ಭಗವಾನ್ ಬುದ್ಧ** (ಧರ್ಮಾನಂದ ಕೋಸಂಬಿ, 1978 ಸಾಹಿತ್ಯ ಅಕಾಡೆಮಿ, ನವೀ ದಿಲ್ಲಿ.

ಸಂಪಾದಿತ ಕಾವ್ಯ ಸಂಗ್ರಹ


1. **ಕೊಂಕಣಿ ಕಾವ್ಯ ಸಂಗ್ರಹ** (1981) : ಸಾಹಿತ್ಯ ಅಕಾಡೆಮಿ, ನವಿ ದಿಲ್ಲಿ.



ಬಾಳಕೃಷ್ಣ ಭಗವಂತ ವರ್ದೆ ಬೋರಕರ
1910-1984

ಬಾಕಿಬಾಬ್ ಅವರ ಕವನಗಳಲ್ಲಿರುವ ಪ್ರಾಸಗಳಿಂದಾಗಿಯೇ ಆ ಕವಿತೆಗಳಿಗೊಂದು ಅಲೌಕಿಕ ಕಾಂತಿ ಬಂದಂತಿದೆ. ಅವು ಕೇವಲ ಪ್ರಾಸಕ್ಕಾಗಿ ಪ್ರಾಸ ಎಂಬರ್ಥದಲ್ಲಿ ಬಂದವುಗಳಲ್ಲ. ಅಥವಾ ಹೇಗೋ ಏನೋ ಜೋಡಿಸಿದವೂ ಅಲ್ಲ. ಅದು ತಾನೇ ತಾನಾಗಿ ಗಿಡದಲ್ಲರಳಿದ ಹೂವಂತೆ ಸಹಜ ಸುಂದರವಾಗಿ ಮೂಡಿದ್ದು.

ಶಕುಂತಲಾ ಆರ್. ಕಿಣಿ



ಕವಿವರ್ಯ ಬಾಕಿಬಾಬ ಬೋರಕರ ಉರ್ಫ್ ಬಾಲಕೃಷ್ಣ ಭಗವಂತ ಬೋರಕರ ಕೊಂಕಣಿ ಭಾಷೆಯ ಅತ್ಯಂತ ಮಹತ್ವದ ಕವಿ, ಸಾಹಿತಿ, ನಿಬಂಧಕಾರ, ಕತೆಗಾರ, ಕಾದಂಬರಿಕಾರ ಮತ್ತು ಪತ್ರಿಕೋದ್ಯಮಿಯಾಗಿ ಪ್ರಸಿದ್ಧರು. ಅದಕ್ಕಿಂತಲೂ ಕೊಂಕಣಿ ಕುಳಾರ ಗೋವೆಯ ಸ್ವಾತಂತ್ರ್ಯ ಚಳುವಳದಲ್ಲಿ ಅದರ ಬಳಿಕ ಗೋವಾ ಭಾರತದ ಪ್ರತ್ಯೇಕ ಘಟಕ ರಾಜ್ಯವಾಗಿ ಅಂದರೆ ಮಹಾರಾಷ್ಟ್ರ ರಾಜ್ಯದಲ್ಲಿ ಲೀನವಾಗದೇ ಉಳಿಯಬೇಕು, ಕೊಂಕಣಿ ಗೋವಾರಾಜ್ಯದ ರಾಜ ಭಾಷೆಯಾಗಿ ಉಳಿಯಬೇಕು ಮುಂತಾದ ಪ್ರಾಮುಖ್ಯ ವಿಷಯಗಳು ಮುಂದೆ ಬಂದಾಗ ಆ ಉದ್ದೇಶಗಳ ಸಾಧನೆಗಳಿಗಾಗಿ ಲೇಖಕ, ಕವಿ ಮಂಚೂಣಿಯ ಭಾಷಣಕಾರರಾಗಿಯೋ ಅಹೋರಾತ್ರಿ ದುಡಿದವರು. ಅದರಿಂದಾಗಿ ಕೊಂಕಣಿಯ ಮಟ್ಟಿಗೆ ವಂದ್ಯಮಾನ್ಯರು.

ಬಸ್ತಿ ವಾಮನ ಶೆಣೈ